ಆಧ್ಯಾತ್ಮಗ್ರಂಥಾವಳಿ

# ಅಧ್ಯಾಸಭಾಷ್ಯಾರ್ಥ ವಿಮರ್ಶೆ

(ಅಧ್ಯಾಸಭಾಷ್ಯದ ಪ್ರಶ್ನೋತ್ತರರೂಪವಾದ ವಿವರಣೆ)

ಬರೆದವರು :
**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೧೨೬

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - ೫೭೩೨೧೧
೧೯೯೮

ಮೊದಲನೆಯ ಮುದ್ರಣ ೧೯೬೪
೧೦೦೦ ಪ್ರತಿಗಳು

ಎರಡನೆಯ ಮುದ್ರಣ ೧೯೯೮
೧೦೦೦ ಪ್ರತಿಗಳು

ಆಧ್ಯಾತ್ಮಪ್ರಕಾಶಕಾರ್ಯಾಲಯದವು

ಡಿ. ಟಿ. ಪಿ. :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿರಸ್ತೆ, ತ್ಯಾಗರಾಜನಗರ
ಬೆಂಗಳೂರು - 28, ದೂರವಾಣಿ : 6677016

ಮುದ್ರಣ :
**ಸಾಯಿನಾಥ್ ಗ್ರಾಫಿಕ್ಸ್**
205, ಅರಳೇ ಪೇಟೆ, ಬೆಂಗಳೂರು- 560053.
ದೂರವಾಣಿ - 6700650.

# ಮೊದಲ ಮಾತು

ಅಧ್ಯಾಸಭಾಷ್ಯಕ್ಕೆ ಶಾಂಕರಪ್ರಸ್ಥಾನದಲ್ಲಿ ಒಂದು ಅಸಾಧಾರಣಸ್ಥಾನವಿದೆ. ಇದರ ಮರ್ಮವನ್ನು ತಿಳಿದುಕೊಂಡರೆ ಅಧ್ಯಾರೋಪಾಪವಾದಪ್ರಕ್ರಿಯೆಯ ಗುಟ್ಟನ್ನು ಅರಿತುಕೊಂಡಂತೆ. ಆತ್ಮಾನುಭವದ ನಿಜವನ್ನು ಅರಿಯುವದಕ್ಕೆ ಇದು ಅಮೋಘವಾದ ಸಾಧನವಾಗಿದೆ.

ಅಧ್ಯಾಸವೆಂಬುದು ಸ್ವಭಾವದಿಂದ ಅನಾದಿಯಾಗಿ ಮನುಷ್ಯನಲ್ಲಿದ್ದುಕೊಂಡಿರುವ **ಅವಿದ್ಯೆ** - ಒಂದು ತಪ್ಪುಕಲ್ಪನೆಯೆಂದೂ ಅದನ್ನು ನೀಗುವದಕ್ಕೇ ಶ್ರುತಿಗಳೆಲ್ಲವೂ ಹೊರಟಿವೆಯೆಂದೂ ಆಚಾರ್ಯರು ಸ್ಪಷ್ಟವಾಗಿ ಬರೆದಿರುತ್ತಾರೆ. ಅದೇನು ಮಾಯೆಯೊ, ಅವಿದ್ಯೆಯೆಂಬ ಶಬ್ದವು ಜಗದ್ಬೀಜವಾದ ಪ್ರಕೃತಿ ಎಂಬರ್ಥದಲ್ಲಿ ಈಚಿನ ವ್ಯಾಖ್ಯಾನ ವೇದಾಂತಿಗಳಲ್ಲಿ ಬಳಕೆಗೆ ಬಂದುಬಿಟ್ಟಿದೆ. ಈ ತಪ್ಪುಕಲ್ಪನೆಯಿಂದ ವೇದಾಂತದ ತಳಹದಿಯೇ ಕುಸಿದುಹೋಗುವಂತಾಗಿದೆ. ಅದ್ವೈತಿಗಳಲ್ಲದವರು ವ್ಯಾಖ್ಯಾನಕಾರರ ಮತಭೇದಗಳಿಂದಾಗಿರುವ ಸಿದ್ಧಾಂತದ ಈ ಮತವನ್ನೇ ಮುಖ್ಯವಾಗಿ ಹಿಡಿದು ಅದ್ವೈತಖಂಡನೆಗೆ ಹೊರಟಿರುತ್ತಾರೆ ; ಅವರಲ್ಲಿ ಕೆಲವರು ಪ್ರಕೃತಿಯನ್ನೇ 'ಅವಿದ್ಯೆ'ಯೆಂದು ಕರೆಯುತ್ತಲೂ ಇದ್ದಾರೆ. ಇದರಿಂದ ವೇದಾಂತವೆಂದರೆ ಕೇವಲ ವಾಕ್ಯಪ್ರಾಮಾಣ್ಯದಿಂದ ನಂಬಬೇಕಾಗಿರುವ ಸಿದ್ಧಾಂತವೆಂಬಂತಾಗಿದೆ. ಈಗ ವೇದಾಂತವು ಯೋಗದಲ್ಲಿಯೂ ಸ್ವಲ್ಪ ಮಟ್ಟಿಗೆ ಸೇರಿ ತರ್ಕಕ್ಕೆ - ಅದರಲ್ಲಿಯೂ ನವೀನತರ್ಕದ ಪಟ್ಟಿಗೆ - ಸಿಕ್ಕಿ ಒದ್ದಾಡುತ್ತಿದೆ.

ಈ ಸ್ಥಿತಿಯಿಂದ ಪಾರಾಗಬೇಕಾದರೆ ಮೂಲಭಾಷ್ಯವನ್ನು ಕೂಲಂಕಷವಾಗಿ ನೋಡಿ ವಿಮರ್ಶಿಸುವದು ಅತ್ಯವಶ್ಯವಾಗಿರುತ್ತದೆ. ಈ ಕೆಲಸಕ್ಕೆ ನನ್ನಿಂದಾದ ಸಹಾಯವನ್ನು ಮಾಡಬೇಕೆಂದು ಈ ಗ್ರಂಥವನ್ನು ಬರೆದಿರುತ್ತೇನೆ. ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುವದೆಂಬುದು ಫಲದಿಂದ ಗೊತ್ತಾಗಬೇಕಾಗಿದೆ.

೮-೭-೧೯೬೪ **ಲೇಖಕ**

ಎರಡನೆಯ ಬಾರಿಗೆ ಮುದ್ರಣವಾಗಿ ಪ್ರಕಾಶಿತವಾಗುತ್ತಿರುವ ಈ ಗ್ರಂಥವನ್ನು ಮಹಾಜನರು ಸ್ವೀಕರಿಸಿ ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

೨೬-೧೨-೧೯೯೮ **ಪ್ರಕಾಶಕರು**

# ಅಧ್ಯಾತ್ಮಪ್ರಕಾಶಕಾರ್ಯಾಲಯ

## ಹೊಳೆನರಸೀಪುರ ೫೭೩೨೧೧

**ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು ?**

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು - ವೇದಾಂತಸಪ್ತಾಹ , ವೇದಾಂತಶಿಬಿರ ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ "ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದು ಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಅಥವಾ ಮಹಾಪೋಷಕರು - ಎನಿಸಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು ; ಈ ಪ್ರಕಟನೆಗಳ ಪುಸ್ತಕ ಭಂಡಾರ ವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬. ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾನಿಲಯ, ಪೂಜಾಮಂದಿರ, ಗುರು ಮಂದಿರ, ಪುಸ್ತಕಭಂಡಾರ - ಇವಕ್ಕೂ ಯಥೋಚಿತವಾಗಿ ಸಹಾಯ ವನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು. ದಾನಿಗಳು 80G (ಆದಾಯ ತೆರಿಗೆ ವಿನಾಯತಿ) ಯನ್ನು ಸಹ ಪಡೆಯಬಹುದು.

**ಹೆಚ್ಚಿನ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.**

# ವಿಷಯಾನುಕ್ರಮಣಿಕೆ


ಪುಟಗಳ ಸಂಖ್ಯೆ

೧. **ಶಾಂಕರಭಾಷ್ಯಾರ್ಥವಿವೇಚನೆಯ ಆವಶ್ಯಕತೆ :** ೧-೩

೨. **ಕೇವಲ ಭಾಷ್ಯಾನುಸಾರಿಯಾದ ಅಧ್ಯಾಸಪ್ರಕ್ರಿಯೆ :**

ಉಪನಿಷತ್ತುಗಳ ಗುರಿ ೪
ಅಧ್ಯಾಸವು ಅನುಭವದಲ್ಲಿದೆ ೭
ಶರೀರಾದಿಗಳಲ್ಲಿರುವ ನಾನೆಂಬ ಬುದ್ಧಿಯು ಮಿಥ್ಯಾಭಾವನೆಯೇ ೯
ನಮ್ಮಗಳ ಆತ್ಮನು ಸಾಕ್ಷಿರೂಪನು ೧೦
ಅಧ್ಯಾಸದ ಪ್ರಕಾರಗಳು ೧೨
ಅಧ್ಯಾಸವನ್ನು ಕುರಿತ ಆಕ್ಷೇಪಸಮಾಧಾನಗಳು ೧೪
ಅವಿದ್ಯೆಗೆ ಕಾರಣ ೨೦
ಅಧ್ಯಾಸಲಕ್ಷಣವು ಸರ್ವವಾದಿಸಂಮತವೆ? ೨೧
ವಿದ್ಯಾವಿದ್ಯೆಗಳ ಸ್ವರೂಪ ೨೨
ಅಧ್ಯಾಸವು ಅನುಭವಸಿದ್ಧ ೨೩
ಪ್ರಮಾಣಪ್ರಮೇಯವ್ಯವಹಾರವು ಅವಿದ್ಯಾಕ್ಷೇತ್ರದಲ್ಲಿ ೨೫
ಶಾಸ್ತ್ರಪ್ರವೃತ್ತಿಯೂ ಅವಿದ್ಯಾಪುರಃಸರವೇ ೨೭
ವೇದಾಂತಜ್ಞಾನದ ಹೆಚ್ಚುಗಾರಿಕೆ ೩೦
ಆತ್ಮೈಕತ್ವವಿದ್ಯೆ ಹೇಗೆ ದೊರಕುತ್ತದೆ? ೩೧
ಮೀಮಾಂಸಾಶಾಸ್ತ್ರಕ್ಕೂ ಉಪನಿಷತ್ತುಗಳಿಗೂ ಸಂಬಂಧ ೩೩

೩. **ವ್ಯಾಖ್ಯಾನಪ್ರಸ್ಥಾನಗಳಂತೆ ಅಧ್ಯಾಸ :**

ವ್ಯಾಖ್ಯಾನಗಳು ಭಾಷ್ಯಕ್ಕಿಂತ ಬೇರೆಯ ಮತವನ್ನು ಅನುಸರಿಸಿದ್ದೇಕೆ? ೩೫
ವ್ಯಾಖ್ಯಾನಗಳು ಸ್ವತಂತ್ರಪ್ರಕ್ರಿಯೆಯನ್ನೇ ಒಪ್ಪಿದರೆ ದೋಷವೇನು? ೩೫
ಇಲ್ಲಿ ವ್ಯಾಖ್ಯಾನಗಳ ವಿಮರ್ಶೆಯನ್ನು ಹೇಗೆ ಮಾಡಿದೆ? ೩೬
ವ್ಯಾಖ್ಯಾನಗಳು ಅವಿದ್ಯಾವಾಕ್ಯಗಳನ್ನು ತಿರುಚಿರುವ ರೀತಿ ೩೭

ಭಾಷ್ಯದಲ್ಲಿ ಅವಿದ್ಯಾಶಕ್ತಿವಾದದ ಮೂಲ ೩೮
ಎರಡು ವ್ಯಾಖ್ಯಾನಪ್ರಸ್ಥಾನಗಳು ೩೯
ಪಂಚಪಾದಿಕಾ ಭಾಮತೀಪ್ರಸ್ಥಾನಗಳೆರಡೂ ಅನಿರ್ವಚನೀಯವಾದದವು ೪೧
ಅಧ್ಯಾಸಲಕ್ಷಣವಾಕ್ಯ ೪೧
ಅವಿದ್ಯೆಯ ವಿಷಯದಲ್ಲಿ ವ್ಯಾಖ್ಯಾನಗಳ ಸಾಮ್ಯವೈಷಮ್ಯಗಳು ೪೪
ಪ್ರಮಾಣಗಳ ವಿಷಯಕ್ಕೆ ಭಾಷ್ಯಕ್ಕೂ ವ್ಯಾಖ್ಯಾನಗಳಿಗೂ ವಿರೋಧ ೪೭
ಅಧ್ಯಾಸದ ದೃಷ್ಟಾಂತಗಳನ್ನು ವ್ಯಾಖ್ಯಾನಗಳು ಉಪಯೋಗಿಸಿರುವ ರೀತಿ ೫೦
ಆತ್ಮನು ಅಸ್ಮತ್ಪ್ರತ್ಯಯವಿಷಯನೆಂಬುದರ ಅರ್ಥ ೫೩
ಅವಿಷಯನಾದ ಆತ್ಮನಲ್ಲಿ ನಾನೆಂಬ ಅಧ್ಯಾಸ ಹೇಗೆ? ೫೫
ಸುಷುಪ್ತಿ ವಿಚಾರ ೫೮
ಪಶ್ವಾದಿವ್ಯವಹಾರದ ದೃಷ್ಟಾಂತ ೬೦
ಶಾಸ್ತ್ರೀಯ ವ್ಯವಹಾರ ೬೧
ಸಾಕ್ಷಿಗೂ ಅಹಂಪ್ರತ್ಯಯಿಗೂ ಆಗಿರುವ ಅಧ್ಯಾಸ ೬೨
ಅನರ್ಥನಿವೃತ್ತಿಯೂ ಆತ್ಮೈಕತ್ವವಿದ್ಯಾಪ್ರಾಪ್ತಿಯೂ ೬೪
ಉಪಸಂಹಾರ ೬೮

**ಭಾಷ್ಯಾಂತರವಿರೋಧಪರಿಹಾರ :**

ಎರಡು ಭಾಷ್ಯಗಳನ್ನು ಮಾತ್ರ ಪರಿಶೀಲಿಸುವದಕ್ಕೆ ಕಾರಣ ೭೪
ಶ್ರೀಭಾಷ್ಯದಲ್ಲಿರುವ ಲಘು ಪೂರ್ವಪಕ್ಷ ೭೫
ಶ್ರೀ ಭಾಷ್ಯದಲ್ಲಿರುವ ಮಹಾಪೂರ್ವಪಕ್ಷ ೭೭
ಶ್ರೀ ಭಾಷ್ಯದಲ್ಲಿ ಅಧ್ಯಾಸವನ್ನು ಸಮಾಲೋಚನೆ ಮಾಡಿಲ್ಲ ೭೯
ಆನಂದತೀರ್ಥರ ಭಾಷ್ಯ ೮೦

**ಉಪಸಂಹಾರ** ೮೪

**ಶಬ್ದಾನುಕ್ರಮಣಿಕೆ** ೮೬-೮೭

|| ಓಂ ||

# ಅಧ್ಯಾಸಭಾಷ್ಯಾರ್ಥ ವಿಮರ್ಶೆ

## ೧. ಶಾಂಕರಭಾಷ್ಯಾರ್ಥ ವಿವೇಚನೆಯ ಆವಶ್ಯಕತೆ

ಓಂ ನಮಃ ಶಙ್ಕರಾಯ । ಶ್ರೀ ಶಂಕರಭಗವತ್ಪಾದರವರು ಅನುಗ್ರಹಿಸಿರುವ ಪ್ರಸ್ಥಾನತ್ರಯ ಬಾಷ್ಯಗಳಲ್ಲಿರುವ ಗ್ರಂಥಗ್ರಂಥಿಗಳನ್ನು ಬಿಚ್ಚಿ ಜಿಜ್ಞಾಸುಗಳಿಗೆ ವೇದಾಂತವಿಚಾರದ ಆನಂದವು ದೊರಕುವಂತೆ ಆಗಲೆಂಬ ಉದ್ದೇಶದಿಂದ ಈ ಲೇಖನಮಾಲೆಯನ್ನು ಪ್ರಾರಂಭಿಸಿರುತ್ತೇನೆ. ಈ ಲೇಖನಮಾಲೆಯ ಪರಮಪ್ರಯೋಜನವು ಯಾರಿಗೆ ಆಗುವದೆಂದರೆ ಶ್ರೀ ಶಂಕರಭಗವತ್ಪಾದರಲ್ಲಿ ಪೂಜ್ಯ ಬುದ್ಧಿ ಇದ್ದು ಅವರ ಪ್ರಸಾದದಿಂದ ವೇದಾಂತದ ರಹಸ್ಯವು ಮನದಟ್ಟಾಗಿ ಪರಮ ಪುರುಷಾರ್ಥಕ್ಕೆ ಮಾರ್ಗವು ಅವಶ್ಯವಾಗಿ ದೊರೆಯುವದೆಂಬ ಅಚಲಶ್ರದ್ಧೆಯುಳ್ಳವರಿಗೆ. ಆಚಾರ್ಯರು ಇಂಥ ಜಿಜ್ಞಾಸುಗಳ ಉಪಕಾರಕ್ಕಾಗಿಯೇ ತಮ್ಮ ಗ್ರಂಥಗಳನ್ನು ಬರೆದಿರುತ್ತಾರೆ. ಭಾಷ್ಯದ ಭಾಷೆಯು ಸರಳವಾಗಿದ್ದು ಗ್ರಂಥರಚನೆಯ ವಿಷಯವಿವೇಚನೆಯಲ್ಲಿ ಯಾವ ತೊಡರೂ ಉಂಟಾಗದಂತೆ ಯುಕ್ತ್ಯನುಭವಗಳಿಗೆ ಹೊಂದುವಂತೆಯೇ ಸಾಗಿರುತ್ತದೆ. ಹೀಗಿರುವದರಿಂದ ಸಂಸ್ಕೃತಭಾಷೆಯ ಪರಿಚಯವೂ ಶಾಸ್ತ್ರಗಳ ಸಾಮಾನ್ಯಪರಿಚಯವೂ ಇರುವ ಮುಮುಕ್ಷುಗಳು ಸದ್ಗುರುವಿನ ಬಳಿಯಲ್ಲಿದ್ದುಕೊಂಡು ಪಠನಮಾಡಿದರೆ ಭಾಷ್ಯಗ್ರಂಥದ ಅರ್ಥವು ನಿರಾತಂಕವಾಗಿಯೇ ಮನದಟ್ಟಾಗುವದರಲ್ಲಿ ಸಂದೇಹವಿಲ್ಲ.

ಆದರೆ ಈಗಿನ ಕಾಲದಲ್ಲಿ ಸಂಸ್ಕೃತಭಾಷೆಯ ಪರಿಚಯವಾಗಲಿ, ವೇದಾಂತದ ವಿಚಾರಕ್ಕೆ ಬೇಕಾದ ಸಾಧನಮಾರ್ಗದ ಅವಲಂಬನೆಯಾಗಲಿ ಇಲ್ಲದ ಅನೇಕರು ಈ ಭಾಷ್ಯಗಳನ್ನು ಇಂಗ್ಲಿಷಿನ ಅಥವಾ ದೇಶಭಾಷೆಗಳಲ್ಲೊಂದರ ಅನುವಾದವನ್ನು ಇಟ್ಟುಕೊಂಡು ಕುತೂಹಲದಿಂದ

ಓದಿ ಅಪಾರ್ಥವನ್ನು ಮಾಡಿಕೊಂಡು ಭಾಷ್ಯದ ನಿಜವಾದ ಅಭಿಪ್ರಾಯವನ್ನು ಸರಿಯಾಗಿ ತಿಳಿಯದೆ ಪೇಚಾಡುತ್ತಿದ್ದಾರೆ. ಇನ್ನು ಕೆಲವರು ಭಾಷ್ಯ ಗ್ರಂಥದ ಮೇಲೆ ಹುಟ್ಟಿರುವ ಹಲವು ವ್ಯಾಖ್ಯಾನಗಳನ್ನು ವೇದಾಂತಪರೀಕ್ಷೆಯಲ್ಲಿ ಉತ್ತೀರ್ಣರಾಗುವದಕ್ಕಾಗಿ ಓದಿಕೊಂಡಿರುವ ಪಂಡಿತರ ನೆರವಿನಿಂದ ಭಾಷ್ಯಗಳನ್ನು ಓದುತ್ತಿರುತ್ತಾರೆ ; ಅಂಥವರಿಗೆ ಒಂದಕ್ಕೊಂದು ವಿರುದ್ಧವಾಗಿರುವ ವ್ಯಾಖ್ಯಾನಗಳ ಅಭಿಪ್ರಾಯವನ್ನೂ ಭಾಷ್ಯಾಭಿಪ್ರಾಯವನ್ನೂ ಕಲೆಬೆರಕೆಮಾಡಿ ಕೊಂಡದ್ದರಿಂದ ಆಗಿರುವ ಗಲಿಬಿಲಿಯು ನಿಜವಾದ ಭಾಷ್ಯಾರ್ಥವನ್ನು ತಿಳಿದುಕೊಳ್ಳುವದಕ್ಕೆ ಅಡ್ಡಿಯಾಗಿರುತ್ತದೆ.

ಹೀಗೆ ಹಲವು ಕಾರಣಗಳಿಂದ ಭಾಷ್ಯಾಭಿಪ್ರಾಯವನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವದಕ್ಕಾಗದೆ ಇರುವವರಲ್ಲಿ ಶ್ರದ್ಧಾವಂತರಾದ ತತ್ತ್ವಜಿಜ್ಞಾಸುಗಳೂ ಸೇರಿ ಕೊಂಡಿರುತ್ತಾರೆ. ಕೆಲವರು ತರ್ಕರಸಿಕರು ಬೇರೆಬೇರೆಯ ಮತದವರ ಭಾಷ್ಯಗಳಲ್ಲಿರುವ ಆಕ್ಷೇಪಗಳನ್ನು ಮುಂದೊಡ್ಡಿ ಅವರ ಮನಸ್ಸನ್ನು ಕದಡುತ್ತಿದ್ದಾರೆ; ಇನ್ನು ಕೆಲವರು **'ಅನುಭವಿಗಳು'** ಎಂದು ಹೇಳಿಕೊಳ್ಳುವ ವೇದಾಂತಿಗಳು ಗ್ರಂಥಜಾಲದಲ್ಲಿ ಬೀಳ ಬಾರದೆಂದೂ ಅನುಭವವಿಲ್ಲದವರಿಂದ ತಿಳಿದುಕೊಂಡ ವೇದಾಂತವು ಅನರ್ಥಕಾರಿ ಯಾದೀತೆಂದೂ ಹೆದರಿಸುತ್ತಾ ಅಧಿಕಾರಿಗಳಾದವರ ಭಾಷ್ಯಪಠನಕ್ಕೆ ಅಡ್ಡಬರುತ್ತಿದ್ದಾರೆ. ಆದ್ದರಿಂದ ಆಚಾರ್ಯರು ಸಂಸ್ಕೃತದಲ್ಲಿ ಬರೆದಿರುವ ಸಂಸ್ಕೃತಗ್ರಂಥಗಳ ಸ್ವರೂಪವನ್ನೂ ಅವುಗಳ ಕನ್ನಡದ ಅನುವಾದವನ್ನೂ ಟಿಪ್ಪಣಿ ಸಮೇತವಾಗಿ ನಾನು ಕನ್ನಡನಾಡಿನ ಜಿಜ್ಞಾಸುಗಳ ಉಪಯೋಗಕ್ಕಾಗಿ ಬರೆದು ಪ್ರಕಟಿಸಿರುತ್ತೇನೆ.

ಆದರೆ ಈ ಭಾಷ್ಯಾನುವಾದಗಳು ಮೂಲಕ್ಕೆ ಪ್ರತಿಬಿಂಬದಂತೆ ಇರುವದರಿಂದ ಗ್ರಂಥದ ಶೈಲಿಯು ಸ್ವಲ್ಪ ಗಡುಚಾಗಿರುತ್ತದೆ. ಆಚಾರ್ಯರವರು ಬರೆದಿರುವ ಭಾಷ್ಯಗಳಲ್ಲಿರುವ ಸಂಕ್ಷಿಪ್ತ ವಾಕ್ಯಗಳಲ್ಲಿ ಎಷ್ಟೋ ಗಹನವಾಗಿರುವ ವಿಷಯಗಳು ಅಡಗಿರುವದರಿಂದ ಪ್ರಸನ್ನ ಗಂಭೀರವಾಗಿರುವ ಅವರ ಭಾಷ್ಯವು ದೇಶಭಾಷೆಗೆ ಬಂದಮೇಲೂ ಅದರ ಅಭಿಪ್ರಾಯಗಳನ್ನು ಚೆನ್ನಾಗಿ ಚರ್ಚಿಸಿಯೇ ತಿಳಿದುಕೊಳ್ಳಬೇಕಾಗಿರುತ್ತದೆ. ಈ ಕಾರಣದಿಂದ ಅಧಿಕಾರಿಗಳಾಗಿರುವ ಜಿಜ್ಞಾಸುಗಳಿಗೆ ಒದಗಬಹುದಾದ ಶಂಕೆಗಳಿಗೆಲ್ಲ ಆದಷ್ಟು ಮಟ್ಟಿಗೆ ಪರಿಹಾರವನ್ನು ಅಲ್ಲಲ್ಲಿಯೇ ತಿಳಿಸುವ ಈ ಪ್ರಶ್ನೋತ್ತರರೂಪದ ಲೇಖನಮಾಲೆಯನ್ನು ಪ್ರಾರಂಭಿಸಿರುತ್ತೇನೆ. ಜಿಜ್ಞಾಸುಗಳು ಇದನ್ನು ಸಾವಧಾನವಾಗಿ ಓದಿ ಇದರಿಂದ ಪ್ರಯೋಜನವನ್ನು ಪಡೆಯಬೇಕಾಗಿದೆ.

ಆಚಾರ್ಯರು ಬರೆದಿರುವ ಉಪನಿಷದ್ಭಾಷ್ಯಗಳು, ಭಗವದ್ಗೀತಾಭಾಷ್ಯ- ಇವುಗಳಲ್ಲಿ ವೇದಾಂತದ ಸಿದ್ಧಾಂತವನ್ನೂ, ಅದನ್ನು ಮನಗಂಡು ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಬೇಕಾದ ಸಾಧನಗಳನ್ನೂ ಅಲ್ಲಲ್ಲಿಯೇ ತಿಳಿಯಿಸಿದೆ. ಈ ವೇದಾಂತಾರ್ಥವನ್ನು ವಿಚಾರದಿಂದ ನಿರ್ಣಯಿಸಿಕೊಳ್ಳುವ ಬಗೆಯನ್ನು ಬ್ರಹ್ಮಸೂತ್ರಭಾಷ್ಯದಲ್ಲಿ ವಿವರಿಸಿರುತ್ತದೆ. 'ಬ್ರಹ್ಮಸೂತ್ರ' ವೆಂಬ ಹೆಸರು ಈಗ ವ್ಯವಹಾರದಲ್ಲಿ ಬಳಕೆಯಲ್ಲಿದ್ದರೂ ಆಚಾರ್ಯರೇನೂ ಈ ಹೆಸರನ್ನು ತಮ್ಮ

ಗ್ರಂಥಗಳಲ್ಲಿ ಉಪಯೋಗಿಸಿರುವದಿಲ್ಲ. **'ಶಾರೀರಕಮೀಮಾಂಸಾ', 'ವೇದಾಂತ ಮೀಮಾಂಸಾಶಾಸ್ತ್ರ'** - ಎಂಬ ಎರಡು ಹೆಸರುಗಳು ಅವರ ಭಾಷ್ಯದಲ್ಲಿ ಕಾಣುತ್ತಿವೆ. ಈ ಹೆಸರುಗಳು ಶಾಸ್ತ್ರಕ್ಕೆ ಬರುವದಕ್ಕೆ ಕಾರಣವನ್ನು ಅವರು ಬರೆದಿರುವ 'ಉಪೋದ್ಘಾತ' ರೂಪವಾಗಿರುವ ಅಧ್ಯಾಸಭಾಷ್ಯದಲ್ಲಿ ಕಾಣಬಹುದು. ಪ್ರಕೃತದಲ್ಲಿ ಈ ಅಧ್ಯಾಸಭಾಷ್ಯವನ್ನು ಕುರಿತೇ ಪ್ರಶ್ನೋತ್ತರಗಳ ರೂಪದಲ್ಲಿ ಲೇಖನವನ್ನು ಪ್ರಾರಂಭಿಸಿರುತ್ತೇನೆ. ಏಕೆಂದರೆ ಆಚಾರ್ಯರವರ ಮತದಲ್ಲಿ ಉಪನಿಷತ್ತುಗಳೆಲ್ಲ **ಅಧ್ಯಾರೋಪಾಪವಾದನ್ಯಾಯವನ್ನು** ಅನುಸರಿಸಿಕೊಂಡೇ ವಿಷಯಪ್ರತಿಪಾದನೆಗೆ ಹೊರಟಿರುತ್ತವೆ. ಆ ನ್ಯಾಯದ ಮರ್ಮವನ್ನು ತಿಳಿದುಕೊಳ್ಳುವದಕ್ಕೆ ಅಧ್ಯಾಸಭಾಷ್ಯವೊಂದೇ ಮಾರ್ಗದೀಪಿಕೆಯಾಗಿರುತ್ತದೆ.

# 1. ಕೇವಲ ಭಾಷ್ಯಾನುಸಾರಿಯಾದ ಅಧ್ಯಾಸಪ್ರಕ್ರಿಯೆ

## ಉಪನಿಷತ್ತುಗಳ ಗುರಿ

**ಪ್ರಶ್ನೆ :-** ಉಪನಿಷತ್ತುಗಳು ಏನನ್ನು ಉಪದೇಶಿಸುವದಕ್ಕೆ ಹೊರಟಿರುತ್ತವೆ?

**ಉತ್ತರ :-** ಇದಕ್ಕೆ ಆಚಾರ್ಯರು ಅಧ್ಯಾಸಭಾಷ್ಯದಲ್ಲಿ ಈ ಉತ್ತರವನ್ನು ಕೊಟ್ಟಿರುತ್ತಾರೆ:

**"ಏವಮಯಮ್ ಅನಾದಿರನನ್ತೋ ನೈಸರ್ಗಿಕೋಽಧ್ಯಾಸಃ, ಮಿಥ್ಯಾಪ್ರತ್ಯಯ ರೂಪಃ, ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ । ಅಸ್ಯಾನರ್ಥ ಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ॥ "**

'ಹೀಗೆ ಈ ಜನರಿಗೆ ಸ್ವಾಭಾವಿಕವಾಗಿರುವ ಮಿಥ್ಯಾಪ್ರತ್ಯಯರೂಪವಾದ ಅಧ್ಯಾಸವು ಅನಾದಿಯೂ ಅನಂತವೂ ಆಗಿದ್ದು, ಕರ್ತೃತ್ವಭೋಕ್ತೃತ್ವಗಳನ್ನು ಉಂಟುಮಾಡುವದಾಗಿರುತ್ತದೆ - ಎಂಬುದು ಎಲ್ಲಾ ಜನರಿಗೂ ಪ್ರತ್ಯಕ್ಷವಾಗಿರುತ್ತದೆ. ಈ ಅನರ್ಥಹೇತುವಾಗಿರುವ ಅಧ್ಯಾಸವನ್ನು ನಾಶಮಾಡುವದಕ್ಕಾಗಿ ಆತ್ಮೈಕತ್ವವಿದ್ಯೆಯನ್ನು ಪಡೆಯಲೆಂದು ಸಕಲವೇದಾಂತಗಳೂ - ಎಂದರೆ ಎಲ್ಲಾ ಉಪನಿಷತ್ತುಗಳೂ ಹೊರಟಿರುತ್ತವೆ' - ಎಂದು ಈ ವಾಕ್ಯದ ಅರ್ಥ.

**ಪ್ರಶ್ನೆ :-** ವೇದಾಂತವೆಂದರೇನು ?

**ಉತ್ತರ :-** ಉಪನಿಷತ್ತುಗಳಿಗೆ 'ವೇದಾಂತಗಳು' ಎಂದು ಮತ್ತೊಂದು ಹೆಸರು. ವೇದಗಳ ಕೊನೆಯಲ್ಲಿ ಇರುವದರಿಂದಲೂ ವೇದದ ಸಿದ್ಧಾಂತವನ್ನು ತಿಳಿಸುವದರಿಂದಲೂ ಇವಕ್ಕೆ ವೇದಾಂತಗಳೆಂಬ ಹೆಸರು ಬಂದಿರುತ್ತದೆ. ಈ ಉಪನಿಷತ್ತುಗಳ ಆಧಾರದಿಂದ ಹೊರಟಿರುವ ದರ್ಶನವು **ವೇದಾಂತದರ್ಶನವು.** ಈ ದರ್ಶನವನ್ನು ತಿಳಿಸಿಕೊಡುವದಕ್ಕೆಂದು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಮುಂತಾಗಿರುವ ಸೂತ್ರರೂಪಗಳಿಂದ ಬಾದರಾಯಣಾಚಾರ್ಯರು ರಚಿಸಿರುವ ಶಾಸ್ತ್ರಕ್ಕೆ **'ವೇದಾಂತಮೀಮಾಂಸಾಶಾಸ್ತ್ರ'** ಎಂದರೆ, ವೇದಾಂತವಾಕ್ಯಗಳ ಅರ್ಥವನ್ನು ವಿಚಾರಮಾಡಿ ನಿರ್ಣಯಿಸುವ ಶಾಸ್ತ್ರ ಎಂದು ಹೆಸರು. ಸಂಕ್ಷೇಪವಾಗಿ ಇದನ್ನು

**ವೇದಾಂತ**ವೆಂದೂ ಕರೆಯುವರು. ವೇದಾಂತದಿಂದ ಆಗುವ ಪರಮಪ್ರಯೋಜನವನ್ನು ಶ್ರೀಶಂಕರಾಚಾರ್ಯರವರು ನಾವು ಮೇಲೆ ಉದಾಹರಿಸಿರುವ ವಾಕ್ಯದಿಂದ ತಿಳಿಸಿಕೊಟ್ಟಿರುತ್ತಾರೆ.

**ಪ್ರಶ್ನೆ :-** ವೇದಾಂತದಿಂದಾಗುವ ಪರಮಪ್ರಯೋಜನವೇನು ?

**ಉತ್ತರ:-** ಜನರಿಗೆ ಆಗುವ ಅನರ್ಥಕ್ಕೆ ಕಾರಣವಾಗಿರುವ ಅಧ್ಯಾಸವನ್ನು ಆತ್ಯಂತಿಕವಾಗಿ ನಾಶಗೊಳಿಸುವ ಆತ್ಮೈಕತ್ವವಿದ್ಯೆಯನ್ನು ಪಡೆದುಕೊಳ್ಳುವದೇ ಪರಮಪ್ರಯೋಜನವು. ನಿಜವಾದ ಅನರ್ಥದ ಸ್ವರೂಪವೇನು ? ಅನರ್ಥವು ಯಾವದು ? ಅನರ್ಥಕ್ಕೆ ಮೂಲಕಾರಣವು ಯಾವದು? ಅನರ್ಥನಾಶದ ಸ್ವರೂಪವೇನು ? ಅನರ್ಥನಾಶವು ಏತರಿಂದ ಆಗುವದು ? - ಎಂಬೀ ಘನವಾದ ತತ್ತ್ವಗಳನ್ನು ಉಪನಿಷತ್ತುಗಳಿಂದಲೇ ತಿಳಿದುಕೊಳ್ಳಬಹುದು ; ಅವುಗಳನ್ನು ತಿಳಿದುಕೊಂಡವರಿಗೆ ಅನರ್ಥವು ಎಂದೆಂದಿಗೂ ಮತ್ತೆ ತಲೆದೋರದಂತೆ ನಾಶವಾಗಿಬಿಡುತ್ತದೆ. ಒಬ್ಬ ರೋಗಿಯು ತನ್ನ ರೋಗವು ಯಾವದು ? ಆ ರೋಗಕ್ಕೆ ಕಾರಣವೇನು ? ಆ ಕಾರಣದ ನಾಶವು ಹೇಗೆ ಆಗುತ್ತದೆ ? ಅದನ್ನು ನಾಶಪಡಿಸುವ ಸಾಧನವು ಯಾವದು ? ಎಂಬೀ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ತಿಳಿದುಕೊಂಡರೆ ರೋಗವನ್ನು ಅತ್ಯಂತವಾಗಿ ನಾಶಪಡಿಸುವ ಚಿಕಿತ್ಸೆಯನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸಬಹುದಾಗುತ್ತದೆ. ಆ ತಿಳಿವಳಿಕೆಯಿಲ್ಲದೆ ಇದ್ದರೆ ಅವರಿವರು ಹೇಳುವ ಔಷಧಿಯನ್ನು ತೆಗೆದುಕೊಂಡರೆ ರೋಗವು ಹೋಗದೆ ಇರಬಹುದು ; ತಿಳಿವಳಿಕೆಯಿಲ್ಲದವರು ಹೇಳಿದ ಚಿಕಿತ್ಸೆಯನ್ನು ಮಾಡಿಕೊಂಡರೆ ರೋಗವು ಉಲ್ಬಣವಾದರೂ ಆಗಬಹುದು. ಒಂದು ವೇಳೆ ಯಾವದಾದರೊಂದು ಔಷಧದಿಂದ ತತ್ಕಾಲಕ್ಕೆ ರೋಗವು ಮಟ್ಟಿದರೂ ಮತ್ತೆ ಮರುಕಳಿಸುವದಿಲ್ಲವೆಂಬ ಭರವಸೆಯೇನೂ ಇರುವದಿಲ್ಲ. ಇದರಂತೆ ಮನುಷ್ಯಮಾತ್ರಕ್ಕೆ ಉಂಟಾಗಿರುವ ಅನರ್ಥರೂಪವಾದ ರೋಗವೊಂದು ಇದೆ; ಆ ರೋಗಕ್ಕೆ ಮೂಲಕಾರಣವೂ ಒಂದಿದೆ, ಆ ಮೂಲಕಾರಣವು ಮರಳಿ ತಲೆಯೆತ್ತದಂತೆ ಅದನ್ನು ತೀರ ನಾಶಗೊಳಿಸುವ ಉಪಾಯವೂ ಒಂದು ಇದೆ - ಎಂಬೀ ವಿಷಯಗಳನ್ನು ಅರಿತುಕೊಂಡವನಿಗೆ ಅನರ್ಥವನ್ನು ಸಮೂಲವಾಗಿ ನಾಶಪಡಿಸಿಕೊಂಡು - ರೋಗವನ್ನು ಪರಿಹರಿಸಿ ಕೊಂಡವನು ತನ್ನ ಸ್ವಸ್ಥತೆಯನ್ನು ಪಡೆದುಕೊಳ್ಳುವಂತೆ - ಸ್ವಾಸ್ಥ್ಯವನ್ನು ಪಡೆದುಕೊಳ್ಳುವ ಲಾಭವುಂಟಾಗುತ್ತದೆ. ಆದ್ದರಿಂದ ಈ ಎಲ್ಲಾ ಪ್ರಶ್ನೆಗಳಿಗೂ ಸದುತ್ತರವನ್ನು ಕೊಡುವ ವೇದಾಂತಗಳ - ಎಂದರೆ ಉಪನಿಷತ್ತುಗಳ - ಅಭಿಪ್ರಾಯವನ್ನು ಅವಶ್ಯವಾಗಿ ವಿಚಾರಪೂರ್ವಕವಾಗಿ ತಿಳಿದುಕೊಳ್ಳಬೇಕು.

**ಪ್ರಶ್ನೆ :-** ಮನುಷ್ಯರಿಗೆ ಇರುವ ಅನರ್ಥರೂಪವಾದ ರೋಗವು ಯಾವದು?

**ಉತ್ತರ :-** ಕರ್ತೃತ್ವಭೋಕ್ತೃತ್ವಗಳೇ ಈ ಅನರ್ಥವು. ಇದನ್ನು ಮಾಡಿ ಇದನ್ನು ಪಡೆದುಕೊಂಡು ಭೋಗಿಸುವೆನು - ಎಂಬ ಕರ್ತೃತ್ವಭೋಕ್ತೃತ್ವ ಬುದ್ಧಿಯು ಮನುಷ್ಯರಿಗೆಲ್ಲ ಇರುತ್ತದೆ. ಇದೇ **ಮೂಲಾನರ್ಥವು.**

**ಪ್ರಶ್ನೆ :-** ಕರ್ತೃತ್ವಭೋಕ್ತೃತ್ವಬುದ್ಧಿಯು ಸ್ವಾಭಾವಿಕವಾಗಿಯೇ ಜನರಿಗೆ ಇರುತ್ತದೆಯಲ್ಲವೆ ? ಇದೊಂದು ರೋಗವೆಂಬುದು ಎಂಥ ನಗೆಗೀಡಾದ ಮಾತು ! ಮನುಷ್ಯನಿಗೆ ಸಾಧ್ಯಸಾಧನಗಳ ತಿಳಿವಳಿಕೆಯಿರುವದರಿಂದ, ಎಂದರೆ 'ಇದನ್ನು ಪಡೆದುಕೊಳ್ಳುವದಕ್ಕೆ ಇದು ಸಾಧನವು, ಇದನ್ನು ತಪ್ಪಿಸಿಕೊಳ್ಳುವದಕ್ಕೆ ಇದು ಸಾಧನವು' ಎಂಬ ತಿಳಿವಳಿಕೆಯಿರುವದರಿಂದ, ದುಃಖಕ್ಕೆ ಕಾರಣವಾದ ಅನಿಷ್ಟವನ್ನು ಪರಿಹರಿಸಿಕೊಂಡು ಸುಖಕ್ಕೆ ಕಾರಣವಾಗಿರುವ ಇಷ್ಟವನ್ನು ಸಂಪಾದಿಸಿಕೊಳ್ಳುವದು ಸುಕರವಾಗಿರುತ್ತದೆ. ಕರ್ತೃತ್ವಭೋಕ್ತೃತ್ವವೇ ದುಃಖವೆಂದಾದರೆ, ಅದಿಲ್ಲದ ಕಲ್ಲು ಮಣ್ಣುಗಳಂತೆ ಅಚೇತನವಾಗಿರುವದೇ ಪುರುಷಾರ್ಥವೆಂದಾದೀತಲ್ಲವೇ?

**ಉತ್ತರ : -** ಕರ್ತೃತ್ವಭೋಕ್ತೃತ್ವಬುದ್ಧಿಯಿರುವದರಿಂದ ಜನರು ಇಷ್ಟದ ಪ್ರಾಪ್ತಿಗಾಗಿಯೂ, ಅನಿಷ್ಟದ ನಿವೃತ್ತಿಗಾಗಿಯೂ ಸತತವಾಗಿ ದುಡಿಯುತ್ತಿದ್ದಾರೆಂಬುದನ್ನು ನಾವೇನೂ ಅಲ್ಲಗಳೆಯುತ್ತಿಲ್ಲ. ಆದರೆ ಕರ್ತೃತ್ವವು ಗಂಗಾಪ್ರವಾಹದಂತೆ ಇದ್ದುಕೊಂಡೇ ಇರುವದು ಆಯಾಸಕರವಾದ್ದರಿಂದ ಅದು ದುಃಖವೇ ಆಗಿರುತ್ತದೆ. ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ-ಇವುಗಳನ್ನು ಒಂದು ಬಾರಿ ಮಾಡಿಕೊಂಡಮಾತ್ರದಿಂದ ಮತ್ತೆ ನಮಗೆ ಇಷ್ಟಾನಿಷ್ಟಗಳು ಬಂದೊದಗುವದಿಲ್ಲವೆಂಬ ಭರವಸೆಯೇನೂ ಇಲ್ಲ; ಅವು ಬರುತ್ತಲೇ ಇರುತ್ತವೆ ಎಂಬುದೇ ನಮ್ಮೆಲ್ಲರ ಅನುಭವದಲ್ಲಿಯೂ ಇದೆ. ಇದೂ ಅಲ್ಲದೆ ಮನುಷ್ಯರಲ್ಲಿ ಒಬ್ಬನಿಗೆ ಇಷ್ಟವಾಗಿರುವದು ಇನ್ನೊಬ್ಬನಿಗೆ ಅನಿಷ್ಟವಾಗಿರಬಹುದು; ಈಗ ಒಬ್ಬನಿಗೆ ಇಷ್ಟವಾಗಿರುವದು ಅದೇ ಮುಂದೆ ಅವನಿಗೇ ಅನಿಷ್ಟವೂ ಆಗಬಹುದೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಹೀಗಿರುವದರಿಂದ ಈ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗಾಗಿ ದುಡಿಯುತ್ತಲೇ ಇರುವದೆಂಬುದು ಪರಮಪುರುಷಾರ್ಥವೆಂದು ಯಾರೂ ಹೇಳಲಾರರಷ್ಟೆ ? ಈ ಇಷ್ಟಾನಿಷ್ಟಪ್ರಾಪ್ತಿಪರಿಹಾರದ ಹಂಬಲಿಕೆಯು ಬರುವದಕ್ಕೆ ಕಾರಣವೇನೆಂಬುದನ್ನು ಯಾರೂ ವಿಚಾರಮಾಡುವದಕ್ಕೇ ಹೋಗಿಲ್ಲ; ಕರ್ತೃತ್ವಭೋಕ್ತೃತ್ವಬುದ್ಧಿಯು ಇರುವವರೆಗೆ ಯಾವನೊಬ್ಬನಿಗೂ ಇಷ್ಟಾನಿಷ್ಟಪ್ರಾಪ್ತಿಪರಿಹಾರದ ಹಂಬಲಿಕೆಯು ತಪ್ಪುವದೆಂಬುದೂ ವಿಶ್ವಾಸಕ್ಕೆ

ಇದೂ ಅಲ್ಲದೆ ಈ ಕರ್ತೃತ್ವಭೋಕ್ತೃತ್ವಗಳು ನಮ್ಮ ಸ್ವರೂಪಕ್ಕೇ ಸೇರಿರುತ್ತವೆ ಎಂದು ಒಪ್ಪಿಕೊಂಡೇ ಈವರೆಗೆ ವಿಚಾರಮಾಡಿದ್ದಾಗಿರುತ್ತದೆ. ಆದರೆ ಇವು ನಿಜವಾಗಿ ನಮ್ಮ ಸ್ವಭಾವಕ್ಕೆ ಸೇರಿರುವದಿಲ್ಲವೆಂದೂ ನಾವು ಕರ್ತೃಭೋಕ್ತೃಸ್ವಭಾವದವರು ಎಂದು ಭಾವಿಸುವದಕ್ಕೆ **'ಅಧ್ಯಾಸ'**ವೇ ಕಾರಣವೆಂದೂ ವೇದಾಂತದಲ್ಲಿ ತಿಳಿಸಿಕೊಟ್ಟಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ ಇವು ನಿಜವಾಗಿ ನಮ್ಮ ಸ್ವಭಾವಕ್ಕೆ ಸೇರಿದವುಗಳಲ್ಲವೆಂದೇ ತೀರ್ಮಾನವಾಗುತ್ತದೆ. ಅದೇ ನಿಜವಾದರೆ ಕರ್ತೃತ್ವಭೋಕ್ತೃತ್ವಬುದ್ಧಿಯೇ ಅನರ್ಥವೆಂದೂ ಅದನ್ನು ತೊಲಗಿಸಿಕೊಳ್ಳುವ ಉಪಾಯವೇನಾದರೂ ಇದ್ದರೆ ಅದನ್ನು ಸಾಧಿಸಿಕೊಳ್ಳುವದೇ ಯುಕ್ತವೆಂದೂ ಏರ್ಪಡುತ್ತದೆ.

**ಪ್ರಶ್ನೆ :-** ಅಧ್ಯಾಸವೆಂದರೇನು ? ಅದು ಕರ್ತೃತ್ವಭೋಕ್ತೃತ್ವಬುದ್ಧಿಗೆ ಹೇಗೆ ಕಾರಣವಾಗಿರುತ್ತದೆ ?

**ಉತ್ತರ :-** ಅಧ್ಯಾಸವೆಂದರೆ ನಮ್ಮ ಸ್ವರೂಪವಾದ ಆತ್ಮ, ನಮ್ಮ ಸ್ವರೂಪವಲ್ಲದ ಅನಾತ್ಮ - ಈ ಎರಡನ್ನೂ ಒಂದನ್ನೊಂದೆಂದು ತಿಳಿಯುವದು. ಈ **ಮಿಥ್ಯಾಪ್ರತ್ಯಯವು** - ತಪ್ಪುತಿಳಿವಳಿಕೆಯು - ಮನುಷ್ಯರಿಗೆ ಸ್ವಭಾವದಿಂದಲೇ ಇದ್ದುಕೊಂಡಿರುತ್ತದೆ. ಇದು **ಅನಾದಿ**, ಎಂದರೆ ಇದು ಇಂಥ ಕಾಲದಲ್ಲಿ ಮೊದಲು ತೋರಿಕೊಂಡಿತೆಂದು ಗೊತ್ತುಪಡಿಸಿಕೊಳ್ಳುವದಕ್ಕೆ ಬರುವಂತಿಲ್ಲ ; **ಅನಂತ**, ಎಂದರೆ ಇದು ಇಂಥ ಕಾಲದಲ್ಲಿ ಹೀಗೆ ಮುಗಿದುಹೋದೀತು ಎಂಬುದನ್ನು ಕಲ್ಪಿಸಿಕೊಳ್ಳುವದಕ್ಕೆ ಬರುವದಿಲ್ಲ. ಇದು ಜನರಿಗೆ ಯಾವ ಕಾರಣವನ್ನೂ ಬಯಸದೆ ಅವಿಚಾರದಶೆಯಲ್ಲಿ ಸ್ವಭಾವದಿಂದಲೇ ತೋರಿಕೊಳ್ಳುತ್ತಿರುತ್ತದೆ. ಈ ಅಧ್ಯಾಸದಿಂದಲೇ ನಮಗೆಲ್ಲ ಪ್ರತ್ಯಕ್ಷವಾಗಿ - ಎಂದರೆ ಅನುಭವದಲ್ಲಿ - ಕಾಣಬರುತ್ತಿರುವ ಕರ್ತೃತ್ವಭೋಕ್ತೃತ್ವಬುದ್ಧಿಯುಂಟಾಗಿರುತ್ತದೆ. ಆದ್ದರಿಂದ ಕರ್ತೃತ್ವಭೋಕ್ತೃತ್ವವು **ಅನರ್ಥ**ವೆಂದೂ ಅಧ್ಯಾಸವು **ಅನರ್ಥಕ್ಕೆ ಹೇತು** (ಎಂದರೆ ನಿಮಿತ್ತ)ವೆಂದೂ ತಿಳಿಯಬೇಕು. ಆದ್ದರಿಂದಲೇ ಉಪನಿಷತ್ತುಗಳು ಇದನ್ನು ಪರಿಹರಿಸುವ ಉಪಾಯವನ್ನು ತಿಳಿಸುವದಕ್ಕೆ ಬಂದಿವೆ.

## ಅಧ್ಯಾಸವು ಅನುಭವದಲ್ಲಿದೆ

**ಪ್ರಶ್ನೆ :-** ಇಲ್ಲಿ ಒಂದು ಶಂಕೆಯುಂಟಾಗುತ್ತದೆ. ನಮ್ಮ ಸ್ವರೂಪವಲ್ಲದ ಯಾವದನ್ನು ನಾವು 'ನಾನು' ಎಂದು ತಿಳಿದುಕೊಂಡಿರುತ್ತೇವೆ ? ನಾನಲ್ಲದ್ದನ್ನು ನಾನು ಎಂದು ತಪ್ಪಾಗಿ ತಿಳಿಯುವದು ಎಂದಾದರೂ ಸಂಭವಿಸಬಹುದೆ ? 'ನಾನು' ಎಂಬುದೇ ನಮ್ಮ ಸ್ವರೂಪ, ನಾನಲ್ಲದವರನ್ನು ನೀನು, ಅವರು, ಅದು, ಅವು- ಎಂದೇ ನಾವೆಲ್ಲರೂ ವ್ಯವಹರಿಸುತ್ತೇವೆ. 'ನಾನು' ಎಂದು ತಿಳಿದುಕೊಳ್ಳಬಹುದಾದದ್ದನ್ನು 'ನೀನು' ಎಂದು ಎಂಥ ಅವಿವೇಕಿಯಾದರೂ ತಿಳಿದುಕೊಳ್ಳುವ ಸಂಭವವುಂಟೆ ? 'ಈ ಗೋಡೆ ನಾನು', 'ಈ ಪ್ರಾಣಿ ನಾನು', 'ನೀನು ನಾನು', 'ಅವನು ನಾನು', 'ಇದು ನಾನು', 'ಅದು ನಾನು' - ಎಂದು ಜನರು ತಪ್ಪಾಗಿ ತಿಳಿದುಕೊಂಡಿರುತ್ತಾರೆಂದು ಕಲ್ಪಿಸುವದು ಎಂಥ ನಗೆಗೀಡಾದದ್ದು ! ಹೀಗೆ ತಪ್ಪಾಗಿ ತಿಳಿದುಕೊಳ್ಳುವದೆಂಬ 'ಅಧ್ಯಾಸವೇ' ಇಲ್ಲದಿರುವಾಗ ಅದು ಜನರ ಕರ್ತೃತ್ವ ಭೋಕ್ತೃತ್ವಗಳಿಗೆ ಕಾರಣವಾಗಿರುವದೆಂದು ಕಲ್ಪಿಸುವದೆಂಬುದಂತೂ ತೀರ ಹೊಂದದ ಮಾತಾಯಿತಲ್ಲವೆ?

**ಉತ್ತರ :-** ಇದು ನೀವು ತಿಳಿದುಕೊಂಡಿರುವಷ್ಟು ಅಸಂಭಾವನೀಯವಾಗಿರುವದಿಲ್ಲ. ವೇದಾಂತದಲ್ಲಿ ಹೇಳಿರುವ ಈ ಅಧ್ಯಾಸವು ಒಂದು ಕಲ್ಪನಾವಿಶೇಷವಲ್ಲ ; ಇದು ನಮ್ಮೆಲ್ಲರ ಅನುಭವದಲ್ಲಿಯೇ ಇರುತ್ತದೆ. ಹೇಗೆಂದರೆ, ನೋಡಿ: ಈ ನಮ್ಮ ಶರೀರ, ಇಂದ್ರಿಯಗಳು, ಮನಸ್ಸು - ಇವುಗಳು ನಮಗೆ ವಿಷಯವಾಗಿರುವ ದೃಶ್ಯಗಳು, ಎಂದರೆ ನಮ್ಮ ಜ್ಞಾನಕ್ಕೆ

ಗೋಚರವಾಗಿರುವ ಪದಾರ್ಥಗಳು. ಹೊರಗೆ ನಮಗೆ ಕಾಣಿಸುತ್ತಿರುವ ಗೋಡೆ, ಪ್ರಾಣಿ, ನೀನು, ಅವನು, ಇದು, ಅದು - ಎಂಬ ಪ್ರಕಾರದ ಅರಿವಿಗೆ ಗೋಚರವಾಗುವ - ಪದಾರ್ಥಗಳನ್ನು ನಾನು ಎಂದುಕೊಳ್ಳುವದು ಯುಕ್ತವಲ್ಲವೆಂದು ನೀವೇ ಹೇಳಿದಿರಷ್ಟೆ? ಅವೆಲ್ಲ ನಮ್ಮ ಜ್ಞಾನಕ್ಕೆ ವಿಷಯಗಳು ; ಆದ್ದರಿಂದ ಅವನ್ನು 'ನಾನು' ಎಂದುಕೊಳ್ಳಬಾರದೆಂಬುದು ಯುಕ್ತವೇ ಆಗಿರುತ್ತದೆ. ಹೀಗಾದರೆ ಅವುಗಳಂತೆಯೇ ನಮ್ಮ ಅನುಭವರೂಪವಾದ ಅರಿವಿಗೆ ವಿಷಯವಾಗಿರುವ ಶರೀರ, ಇಂದ್ರಿಯ ಮನಸ್ಸು - ಇವುಗಳನ್ನು 'ನಾನು' ಎಂದುಕೊಳ್ಳುವದು ಯುಕ್ತವಾದೀತೆ? ಇದನ್ನು ವಿಚಾರಮಾಡಿ ನೋಡಬೇಕು. ಇನ್ನೊಂದು ವಿಷಯ. ಈ ನಮ್ಮ ಶರೀರ, ಇಂದ್ರಿಯಗಳು, ಮನಸ್ಸು - ಇವು ಇದ್ದಂತೆ ಇರುವದಿಲ್ಲ; ಅವು ಬೆಳೆಯುತ್ತವೆ, ಕೃಶವಾಗುತ್ತವೆ, ಸೊರಗುತ್ತವೆ, ಆಯಾಸಪಡುತ್ತವೆ. ಹೀಗೆ ಯಾವ ವಸ್ತು ತಾನು ಇದ್ದಂತೆ ಇರದೆ ತನ್ನ ಸ್ವರೂಪವನ್ನು ಮಾರ್ಪಡಿಸುತ್ತಲೇ ಇರುವದೋ ಅದನ್ನು **ಮಿಥ್ಯಾ**ದೃಶ್ಯ, **ಅನೃತ**ದೃಶ್ಯ, ಹುಸಿತೋರಿಕೆ - ಎಂದು ವೇದಾಂತದಲ್ಲಿ ವ್ಯವಹರಿಸುತ್ತಾರೆ. ಒಂದು ಕಪ್ಪೆಯಚಿಪ್ಪು ಬೆಳ್ಳಿಯಂತೆ ಹೊಳೆದರೆ ಆ ತೋರಿಕೆಯನ್ನು ನಿಜವಾದ ಬೆಳ್ಳಿ ಎನ್ನಬಹುದೆ? ಬಾರದು. ಅದರಂತೆ ಯಾವ ಪದಾರ್ಥಗಳು ತಾವು ತೋರಿದಂತೆ ಇರದೆ ಮಾರ್ಪಡುತ್ತಲೇ ಇರುವವೋ ಅವನ್ನು ಹುಸಿ, ಮಿಥ್ಯೆ, ಅನೃತ- ಎಂದು ಕರೆಯುವದು ಯುಕ್ತವೇ ಆಗಿರುತ್ತದೆ. ಇನ್ನು **ಆತ್ಮನೊ,** ಎಂದರೆ ನಮ್ಮ ನಿಜವಾದ ಸ್ವರೂಪವೋ, ಎಂದರೆ ಈ ಮಿಥ್ಯಾದೃಶ್ಯಗಳನ್ನು ತನ್ನ ಸ್ವಭಾವವಾಗಿರುವ ಚೈತನ್ಯದಿಂದ - ಅರಿವಿನಿಂದ - ಬೆಳಗಿ ತಿಳಿಸಿಕೊಡುತ್ತಾ ತಾನು ಇದ್ದಂತೆಯೇ ಯಾವಾಗಲೂ ಇರುತ್ತದೆ. ಆದ್ದರಿಂದ ಅದು **ಸತ್ಯ** ಎನಿಸಿಕೊಳ್ಳುತ್ತದೆ. ಹೀಗೆ ಸತ್ಯವಾದ ಆತ್ಮ, ಅನೃತವಾದ ಅನಾತ್ಮ - ಇವೆರಡನ್ನೂ ಒಂದನ್ನೊಂದೆಂದು ತಿಳಿಯುವದು ತಪ್ಪೆಂಬುದು ನಿಶ್ಚಿತವಾಗಿದ್ದರೂ, ನಾವುಗಳು 'ನಾನು' ಎಂದು ಕರೆದುಕೊಳ್ಳುವ ನಮ್ಮ ರೂಪದಲ್ಲಿ ಇವುಗಳನ್ನು ಬೆರಕೆಹಾಕಿಕೊಂಡೇ ವ್ಯವಹರಿಸುತ್ತಿದ್ದೇವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. 'ನಾನು ಕೃಶನಾದೆನು, ಔಷಧದ ಸೇವನೆಯಿಂದ ಆರೋಗ್ಯವುಳ್ಳವನಾಗುವೆನು' - ಎನ್ನುವಾಗ ಶರೀರವೇ ನಾನೆಂದು ವ್ಯವಹರಿಸುವದಿಲ್ಲವೆ? ಶರೀರವು ನಮ್ಮ ಸ್ವರೂಪವಲ್ಲ, ಆದರೂ ಅದನ್ನು 'ಕೃಶವಾದೆನು' ಎಂದು

ನಮ್ಮ ಸ್ವರೂಪವು ಶರೀರವಲ್ಲ, ಆದರೂ 'ಕೃಶವಾದೆನು' ಎಂಬ ವ್ಯವಹಾರದಲ್ಲಿ ಆ ಸ್ವರೂಪವನ್ನು ಸೇರಿಸಿಕೊಂಡೇ ವ್ಯವಹರಿಸುತ್ತೇವೆ - ಎಂಬುದು ಎಲ್ಲರಿಗೂ ಅನುಭವದಲ್ಲಿದೆಯಷ್ಟೆ? ಹೀಗೆಯೇ ಇಂದ್ರಿಯಗಳಲ್ಲಿ ಒಂದೊಂದನ್ನೂ ಮನಸ್ಸನ್ನೂ ಆತ್ಮಸ್ವರೂಪದೊಡನೆ ಕಲೆಬೆರಕೆಮಾಡಿಕೊಂಡೇ ಜನರೆಲ್ಲರೂ ಸ್ವಭಾವದಿಂದಲೇ ವ್ಯವಹರಿಸುತ್ತಾರೆ. ''ಆತ್ಮಸ್ವರೂಪವನ್ನು ಸೇರಿಸಿಕೊಂಡೇ 'ನೋಡುತ್ತೇನೆ' ಎಂದು ವ್ಯವಹರಿಸುತ್ತಿರುತ್ತಾರೆ. ಆದ್ದರಿಂದ 'ಅಧ್ಯಾಸ'ವೆಂಬುದು ಅನುಭವದಲ್ಲಿರುವ ವಿಷಯವೇ ಹೊರತು ನೀವು ಹೇಳಿದಂತೆ ಅಸಂಭಾವನೀಯವಾಗಿಲ್ಲ. ಈ ಅಧ್ಯಾಸದಿಂದಲೇ ನಮಗೆ ಕರ್ತೃತ್ವ ಭೋಕ್ತೃತ್ವಬುದ್ಧಿಯು - ಇದನ್ನು ಮಾಡಿ ಇದನ್ನು ಭೋಗಿಸುವೆನು ಎಂಬ ಬುದ್ಧಿಯು - ಉಂಟಾಗಿರುತ್ತದೆ. ಇದೂ ಅನುಭವದಲ್ಲಿಯೇ ಇದೆ.

## ಶರೀರಾದಿಗಳಲ್ಲಿರುವ ನಾನೆಂಬ ಬುದ್ಧಿಯು ಮಿಥ್ಯಾಭಾವನೆಯೇ

**ಪ್ರಶ್ನೆ :-** ಈ ವಿಷಯದಲ್ಲಿಯೂ ಒಂದು ಶಂಕೆಯಿದೆ : ಶರೀರ, ಇಂದ್ರಿಯಗಳು, ಮನಸ್ಸು - ಇವುಗಳನ್ನು 'ನಾನು' ಎಂದು ಉಪಚಾರಕ್ಕೆ - ನನಗಿಂತ ಅವು ಬೇರೆಯೆಂದು ತಿಳಿದೇ, ಅವು ನನಗೆ ಉಪಕಾರಕವಾಗಿ ಅಥವಾ ಅಪಕಾರಕವಾಗಿರುವ ಸಾಧನಗಳು ಎಂಬ ಕಾರಣದಿಂದ ಅವನ್ನು ನಾನೆಂದು - ಕರೆಯುತ್ತೇವೆಯೇ ಹೊರತು, ಶರೀರಾದಿಗಳೇ ನಿಜವಾಗಿ ನಾನು ಎಂಬ ಭಾವನೆಯಿಂದಲ್ಲ. ಶರೀರಾದಿಗಳನ್ನು ನಾನು ಎಂದು ಕರೆಯುವದಲ್ಲದೆ ಇವು ನನ್ನವು ಎಂದು ವ್ಯವಹರಿಸುವದೂ ಉಂಟಷ್ಟೆ? 'ನನ್ನ ಶರೀರವು ಕೃಶವಾಗಿದೆ', 'ನನ್ನ ದೃಷ್ಟಿಯು ಮಂಜಾಗಿದೆ', ''ನನ್ನ ಶ್ರವಣ ಶಕ್ತಿಯು ಕುಗ್ಗಿದೆ' ಎಂದು ಮುಂತಾಗಿಯೂ ನಾವು ವ್ಯವಹರಿಸುತ್ತೇವಲ್ಲವೆ ? ಇನ್ನೊಂದು ಮಾತು. ಇವೆಲ್ಲವನ್ನೂ ಉಪಯೋಗಿಸಿಕೊಂಡು ಜೀವಿಸುತ್ತಿರುವ ನಾನು ಇದಕ್ಕಿಂತ ಬೇರೆ ಎಂಬುದು ನಮಗೆಲ್ಲರಿಗೂ - ಅಥವಾ ಎಲ್ಲಾ ವಿವೇಕಿಗಳಾದವರಿಗೂ - ತಿಳಿದೇ ಇರುತ್ತದೆ. 'ನಾನು' ಎಂಬ ನಮ್ಮ ಸ್ವರೂಪವನ್ನು ಯಾರುತಾನೆ 'ನೀನು' ಎಂದು ಕರೆಯುತ್ತಾರೆ? 'ನಾನು ಇದು', 'ನಾನು ಅವನು' - ಎಂದುಮುಂತಾಗಿ ಯಾರಾದರೂ ಎಂದಾದರೂ ವ್ಯವಹರಿಸಿದ್ದಾರೆಯೆ ? ಹಾಗೆಂದು ಭಾವಿಸುವ ಸಂಭವವಾದರೂ ಉಂಟೆ ? ಇಲ್ಲ. ಆದ್ದರಿಂದ 'ನಾನು', 'ನಾನು' ಎಂದು ನಾವು ಅರಿಯುತ್ತಿರುವ ನಮ್ಮ ಸ್ವರೂಪವು ಇದ್ದಂತೆಯೇ ಇದೆ ; ಆದ್ದರಿಂದ ಅದಂತೂ ಅಧ್ಯಾಸಸ್ವರೂಪದಿಂದ ಆದದ್ದಲ್ಲ. ನಾನು ಕಣ್ಣಿನಿಂದ ನೋಡುತ್ತೇನೆ, ನನ್ನ ಕಣ್ಣಿಗೆ ಥಳಗುಟ್ಟುವ ಒಂದು ವಸ್ತು ಕಂಡರೆ ಅದು ಬೆಳ್ಳಿಯಿರಬಹುದೆಂದು ಕಲ್ಪಿಸಿಕೊಂಡು, ಕಾಲಿನಿಂದ ಅದರ ಕಡೆಗೆ ನಡೆದು, ಕೈಯಿಂದ ಅದನ್ನು ಎತ್ತಿ ತೆಗೆದುಕೊಳ್ಳಬೇಕೆಂದು ಯೋಚಿಸುತ್ತಿರುವದರೊಳಗೇ ಅದು ಒಂದು ಕಪ್ಪೆಯಚಿಪ್ಪೆಂದು ಗೊತ್ತಾಗಿಬಿಟ್ಟರೆ, ಕೂಡಲೆ ಅದರ ವಿಷಯಕ್ಕೆ ನನಗಿದ್ದ ಕುತೂಹಲವು ಕಡಿಮೆಯಾಗಿಬಿಡುತ್ತದೆ. ಹೀಗೆ ಇಂದ್ರಿಯಗಳೂ, ಶರೀರವೂ ನನಗೆ ಸಾಧನಗಳಾಗಿದ್ದು ನಾನು ಅವುಗಳನ್ನು ಬಳಸುವ 'ಕರ್ತೃ'ವಾಗಿರುತ್ತೇನೆ. ವಿಷಯಗಳನ್ನು ನನ್ನ ದುಃಖಪರಿಹಾರಕ್ಕಾಗಿ ಅಥವಾ ಸುಖದ ಪ್ರಾಪ್ತಿಗಾಗಿ ಬಳಸಿಕೊಳ್ಳುವ 'ಭೋಕ್ತೃ' ವಾಗಿರುತ್ತೇನೆ. ಇದರಲ್ಲಿ 'ಮಿಥ್ಯಾಪ್ರತ್ಯಯರೂಪವಾದ ಅಧ್ಯಾಸ' ಎಲ್ಲಿ ಬಂತು ?

**ಉತ್ತರ** :- 'ನಾನು' ಎಂಬುದೇ ನಮ್ಮ ನಿಜವಾದ ಸ್ವರೂಪವೆಂದು ಇಟ್ಟುಕೊಂಡಿರುವವರೆಗೆ ನೀವು ಹೇಳಿದ್ದು ಸರಿಯೇ ಆಗಿರುತ್ತದೆ. ಆದರೆ ಶರೀರ, ಇಂದ್ರಿಯ, ಮನಸ್ಸು - ಇವುಗಳಿಂದ ವ್ಯತಿರಿಕ್ತವಾಗಿರುವ ಈ ನಾನು ಎಂಬ ರೂಪವು ಸ್ವತಂತ್ರವಾಗಿರುವದನ್ನು ನೀವು ಎಲ್ಲಿ ಕಂಡಿರುತ್ತೀರಿ ? ಇವು ಇದ್ದರೇ, 'ನಾನು' ಎಂಬ ಭಾವನೆಯಿರುತ್ತದೆ, ಇವುಗಳಿಲ್ಲದೆಯೂ 'ನಾನು' ಎಂಬ ಭಾವನೆಯು ಇರುವದಕ್ಕೆ ನಮ್ಮ ಅನುಭವವು ಎಲ್ಲಿದೆ ? ಆದ್ದರಿಂದ 'ನಾನು- ಶರೀರ', 'ನಾನು - ಶರೀರದಲ್ಲಿರುವ ಇಂದ್ರಿಯಗಳು', 'ನಾನು - ಶರೀರದಲ್ಲಿ ಕೆಲಸ ಮಾಡುತ್ತಿರುವ ಮನಸ್ಸು' - ಇವುಗಳನ್ನು ಕಲಬೆರಕೆ ಮಾಡಿಕೊಂಡಿರುವದರಿಂದಲೇ ಜನರಿಗೆ 'ನಾನು', 'ನನ್ನದು ಎಂಬ ವ್ಯವಹಾರವು ಆಗಿರುತ್ತದೆ - ಎಂದು

ಒಪ್ಪಬೇಕಾಯಿತು. ಈ ವ್ಯವಹಾರಕ್ಕೆ ತಳಹದಿಯಾಗಿ ಸರಿಯಾದ ಯಾವ ತಿಳಿವಳಿಕೆಯೂ ಇಲ್ಲದ್ದರಿಂದ ಇದು ಗೌಣವಾಗಿ, ಉಪಚಾರಕ್ಕೆ ಬಳಸುವ ವ್ಯವಹಾರವಲ್ಲ, ಮಿಥ್ಯಾಪ್ರತ್ಯಯ ರೂಪವಾದ ಅಧ್ಯಾಸವೇ ಎಂದಾಯಿತು. ಇದನ್ನು ಮುಂದೆ ಆಚಾರ್ಯರು ಈ ವೇದಾಂತಮೀಮಾಂಸೆಯ (೧-೧-೪, ಭಾ.ಭಾ. ೫೯)[1] ನಾಲ್ಕನೆಯ ಸೂತ್ರದಲ್ಲಿ ತಾವೇ ಬರೆದಿರುತ್ತಾರೆ. ಆ ವಾಕ್ಯದ ಅರ್ಥವನ್ನು ಇಲ್ಲಿ ಸಂಗ್ರಹಿಸಿಕೊಟ್ಟಿರುತ್ತೇವೆ:

**'ಸಿಂಹ ಎಂಬ ಶಬ್ದಪ್ರತ್ಯಯಗಳಿಗೆ ತಕ್ಕ ಮುಖ್ಯಾರ್ಥವಾದ ಪ್ರಾಣಿಯು ಬೇರೆಯಾಗಿರುವದು ಯಾವನಿಗೆ ತಿಳಿದಿರುವದೋ, ಅದಕ್ಕಿಂತ ಬೇರೆಯಾಗಿ ಕ್ರೂರತನ, ಶೂರತ್ವ- ಮುಂತಾದ ಸಿಂಹದ ಗುಣಗಳಿಂದೊಡಗೂಡಿರುವ ಮನುಷ್ಯನಿರುವದೂ ಯಾವನಿಗೆ ತಿಳಿದಿರುವದೋ ಅವನಿಗೇ ಮನುಷ್ಯನ ವಿಷಯದಲ್ಲಿ ಉಂಟಾಗುವ 'ಸಿಂಹ' ಎಂಬ ಶಬ್ದಪ್ರತ್ಯಯಗಳು ಗೌಣವಾಗಿರುವವೇ ಹೊರತು ಹಾಗೆಂದು ವಸ್ತುಭೇದವನ್ನು ತಿಳಿಯದೆ ಇರುವವನಿಗೆ ಆಗುವ ಶಬ್ದ ಪ್ರತ್ಯಯಗಳು ಗೌಣವಾಗಲಾರವು. (ಹಾಗೆ ತಿಳಿಯದೆ ಇರುವ ) ಈ ಎರಡನೆಯವನಿಗೋ, ಎಂದರೆ ಒಂದು ಪದಾರ್ಥದಲ್ಲಿ ಉಂಟಾಗುವ ಮತ್ತೊಂದು ಪದಾರ್ಥಕ್ಕೆ ತಕ್ಕ ಶಬ್ದಪ್ರತ್ಯಯಗಳು ಭ್ರಾಂತಿಯಿಂದಾದವುಗಳೇ ಹೊರತು ಗೌಣವಾಗಲಾರವು. ಹೇಗೆ ನಸುಗತ್ತಲೆಯಲ್ಲಿ ಇದು ಮೋಟುಮರ - ಎಂದು ಸ್ಪಷ್ಟ ವಾಗಿ ಗೊತ್ತಾಗದೆ ಇರುವ ಪದಾರ್ಥದಲ್ಲಿ ಆಗುವ 'ಮನುಷ್ಯ' ಎಂಬ ಶಬ್ದಪ್ರತ್ಯಯಗಳು ಮಿಥ್ಯೆಯೋ, ಹಾಗೆಯೇ ಇದು.**

ಈಗ ಇನ್ನೊಂದು ವಿಚಾರ : 'ನನ್ನ ಸುಖದ ಪ್ರಾಪ್ತಿಗಾಗಿ ಶರೀರಾದಿಗಳನ್ನು ಬಳಸುತ್ತೇನೆ, ನನ್ನ ದುಃಖದ ಪರಿಹಾರಕ್ಕಾಗಿಯೂ ಅವುಗಳನ್ನು ಬಳಸುತ್ತೇನೆ' ಎಂದಿರಲ್ಲ- ಇಲ್ಲಿ ಸುಖದುಃಖಗಳು ನಮ್ಮ ಸ್ವರೂಪಕ್ಕೆ ಸೇರಿದವುಗಳೆಂಬುದನ್ನು ಹೇಗೆ ನಿಶ್ಚಯಿಸಿದಿರಿ ? ಮನಸ್ಸಿರುವಾಗ ಸುಖದುಃಖಗಳು ಮನಸ್ಸಿನಲ್ಲಿ ಉಂಟಾಗುತ್ತಿರುವಂತೆ ತೋರುವದು ನಿಜ. ಆದರೆ ಮನಸ್ಸಿಲ್ಲದ ಆತ್ಮಸ್ವರೂಪವನ್ನು ಕಂಡು ಅದರಲ್ಲಿಯೂ ಈ ಸುಖದುಃಖಗಳು ಆಗುವದನ್ನು ಯಾವಾಗಲಾದರೂ ಕಂಡಿರುತ್ತೀರೇನು ? ಇಲ್ಲವಾದರೆ ಸುಖದುಃಖಗಳು ಆತ್ಮಸ್ವರೂಪಕ್ಕೆ ಸೇರಿರುತ್ತವೆ ಎಂಬ ನಿಶ್ಚಯವೂ ಈ 'ಮಿಥ್ಯಾಪ್ರತ್ಯಯರೂಪವಾದ ಅಧ್ಯಾಸ' ವೇ ಎಂದಾಗುವದಿಲ್ಲವೆ ?

## ನಮ್ಮಗಳ ಆತ್ಮನು ಸಾಕ್ಷಿಸ್ವರೂಪನು

**ಪ್ರಶ್ನೆ :-** ನಿಮ್ಮ ಪ್ರಶ್ನೆಗೆ ನನ್ನದೊಂದು ಪ್ರತಿಪ್ರಶ್ನೆ ಇದೆ. 'ನಾನು' ಎಂಬ ರೂಪವಿಲ್ಲದ ಆತ್ಮನನ್ನಾದರೂ ಯಾರು ಎಲ್ಲಿ ಕಂಡಿರುತ್ತಾರೆ ? 'ನಾನು ಕಂಡಿದ್ದೇನೆ' ಎನ್ನುವವರು 'ನಾನು' ಎಂಬ ರೂಪದ ಆತ್ಮನನ್ನು ತಾನೆ ತೋರಿಸುತ್ತಾರೆ ?

**ಉತ್ತರ :-** ಈ ಪ್ರಶ್ನೆಯು ವ್ಯವಹಾರದೃಷ್ಟಿಯಿಂದ ಸರಿಯಾದದ್ದೇ. ಏಕೆಂದರೆ ನಮಗೆಲ್ಲರಿಗೂ ವ್ಯವಹಾರದಲ್ಲಿ ಶರೀರಾದಿಗಳೊಡನೆ ಇರುವ 'ನಾನು' ಎಂಬ ರೂಪದ ಆತ್ಮನಲ್ಲಿಯೇ ಅಭಿಮಾನವಿರುತ್ತದೆ. ಸಾಮಾನ್ಯಜನರು ಹಾಗಿರಲಿ, ಶಾಸ್ತ್ರಜ್ಞರೂ ಕೆಲವರು ಆತ್ಮನು **'ಅಹಂಪ್ರತ್ಯಯವಿಷಯನು'** (ನಾನೆಂಬ ಅರಿವಿಗೆ ಗೋಚರನಾಗುವವನು) ಎಂದೇ ಹೇಳುತ್ತಿದ್ದಾರೆ. ಆದರೆ ಉಪನಿಷತ್ತಿನಲ್ಲಿ ಈ ಆತ್ಮರೂಪಕ್ಕಿಂತ ಬೇರೆಯಾಗಿರುವ ಮತ್ತೊಂದು ಆತ್ಮರೂಪವನ್ನು ಪ್ರತಿಪಾದಿಸಿರುತ್ತದೆ. 'ಒಬ್ಬನೇ ದೇವನು ಸರ್ವಭೂತಗಳಲ್ಲಿಯೂ ಅಡಗಿರುತ್ತಾನೆ ; ಅವನು ಸರ್ವವ್ಯಾಪಿಯು, ಸರ್ವಭೂತಗಳಿಗೂ ಒಳಗಿರುವ ಆತ್ಮನು' (ಶ್ವೇ. ೬-೧೧) ಎಂದು ಅದು ಹೇಳುತ್ತಿದೆ.

**ಪ್ರಶ್ನೆ :-** ಈಗ ಸರಿಯಾಯಿತು ! ನಮ್ಮಲ್ಲಿ ಒಬ್ಬೊಬ್ಬರಿಗೂ ಒಬ್ಬೊಬ್ಬ ಆತ್ಮನಿರುತ್ತಾನೆಂದು ನಾವು ವ್ಯವಹಾರದಲ್ಲಿ ಭಾವಿಸಿರುತ್ತೇವೆ. ಆ ಆತ್ಮನು ಕರ್ತೃಭೋಕ್ತೃವೆಂದೂ ಭಾವಿಸಿರುತ್ತೇವೆ. ಹಾಗಿರುವದರಿಂದ ನಮ್ಮ ನಮ್ಮ ಕೆಲಸಗಳಿಗೆ ನಾವೇ ಹೊಣೆಗಾರರು, ನಾವೇ ಆ ಕೆಲಸದ ಫಲವನ್ನು ಭೋಗಿಸುವವರು - ಎಂಬುದೂ ಹೊಂದುತ್ತದೆ. ಈ ಆತ್ಮಸ್ವರೂಪವು ಯಾವದೆಂಬುದು ನಿರ್ಣಯವಿಲ್ಲದ್ದರಿಂದಲೇ ಅಲ್ಲವೆ, ನಮ್ಮ ವ್ಯವಹಾರವು ಮಿಥ್ಯಾ ಪ್ರತ್ಯಯರೂಪವಾದ ಅಧ್ಯಾಸದಿಂದ ಆಗಿದೆ ಎಂದು ನೀವು ಹೇಳುತ್ತಿರುವದು ? ಇನ್ನು ಶಾಸ್ತ್ರಜ್ಞರು ಆತ್ಮನು ಅಹಂಪ್ರತ್ಯಯಗಮ್ಯನೆಂದು ಹೇಳುತ್ತಿದ್ದರೆ, ಅದೂ ಯುಕ್ತವೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಸತ್ತ ಮೇಲೂ ತಾನು ಮಾಡಿದ ಕರ್ಮದ ಫಲವನ್ನು ಅನುಭವಿಸುವದಕ್ಕೆ ಶರೀರಾದಿಗಳಿಗಿಂತ ಬೇರೆಯಾದ ಒಬ್ಬ ಆತ್ಮನು ಇದ್ದರೆ ತಾನೆ, ಅವನು ಆ ಫಲವನ್ನು ಅನುಭವಿಸುವದಕ್ಕೆ ಕರ್ಮವನ್ನು ಮಾಡುವನು ? ಶಾಸ್ತ್ರದ ಮಾತು ಹಾಗಿರಲಿ, ಲೋಕದಲ್ಲಂತೂ ಯಾರೊಬ್ಬರಿಗೂ ನಾನು 'ಎಂಬ' ರೂಪದ ಆತ್ಮನಿಗಿಂತ ಬೇರೆಯಾಗಿರುವ ಆತ್ಮನು ಇರುವ ಸುಳಿವೂ ಇರುವದಿಲ್ಲ. ಹೀಗಿರುವಲ್ಲಿ 'ನಾನು' ಎಂಬ ರೂಪದ ಅರಿವು 'ಮಿಥ್ಯಾಪ್ರತ್ಯಯ'ವೆಂಬುದೂ 'ನಾನು', 'ನಾನು' ಎಂದು ನಾವೆಲ್ಲರೂ ಕರೆಯುತ್ತಿರುವ ಆ ನಮ್ಮ ರೂಪಕ್ಕೆ ಸುಖದುಃಖಗಳು ಆಗುತ್ತಿರುವವೆಂಬುದೂ, 'ಅಧ್ಯಾಸ' 'ಮಿಥ್ಯಾಪ್ರತ್ಯಯ' -ಎನ್ನುವುದೂ ಲೋಕಾನುಭವಕ್ಕೆ ವಿರುದ್ಧವಲ್ಲವೆ ?

**ಉತ್ತರ :-** ಈ ನಾವು ಹೇಳಿದ ಶುದ್ಧಾತ್ಮಸ್ವರೂಪವನ್ನು ಉಪನಿಷತ್ತಿನಲ್ಲಿ ಹೇಳಿರುವದು ನಿಜ. ಆದರೆ ಉಪನಿಷತ್ತಿನಲ್ಲಿ ಹೇಳಿದೆ ಎಂಬ ಒಂದೇ ಕಾರಣದಿಂದ ನಾವು ಅಂಥದ್ದೊಂದು ಸ್ವರೂಪವು ಇದೆ ಎಂದು ನಂಬಬೇಕಾದದ್ದೇನೂ ಇಲ್ಲ. ಈ ಸ್ವರೂಪವನ್ನು ಕುರಿತು ವೇದಾಂತಮೀಮಾಂಸಾಶಾಸ್ತ್ರದ ನಾಲ್ಕನೆಯ ಸೂತ್ರದ ಭಾಷ್ಯದಲ್ಲಿ ಮತ್ತೆ ಭಾಷ್ಯಕಾರರು ವಿಚಾರಮಾಡಿರುತ್ತಾರಾದ್ದರಿಂದ ಅಲ್ಲಿ ಇದರ ಪರಿಶೀಲನೆ ಮಾಡೋಣ. ಈಗ್ಗೆ ಇಷ್ಟನ್ನು ತಿಳಿದುಕೊಂಡರೆ ಸಾಕಾಗಿದೆ : ಇಚ್ಛೆಸುವದು, ಸಂಕಲ್ಪಿಸುವದು, ಸಂಶಯಪಡುವದು, ನಿಶ್ಚಯಿಸು ವದು- ಮುಂತಾದ ಧರ್ಮಗಳು ಅಹಂಪ್ರತ್ಯಯಕ್ಕೆ ವಿಷಯವಾಗಿರುವ ಆತ್ಮರೂಪದಲ್ಲಿ ತೋರುತ್ತಿರುತ್ತವೆ. ಆ ಧರ್ಮಗಳು ಒಂದು ಇರುವಾಗ ಮಿಕ್ಕವುಗಳು ಇರುವದಿಲ್ಲ ; ಆದರೆ

ಅವುಗಳು ಉಂಟಾಗುವದು, ಮರೆಯಾಗುವದು- ಎರಡನ್ನೂ ಅರಿಯುವ ನಮ್ಮ ರೂಪವೊಂದು ಇದೆ ಎಂಬುದು ನಮಗೆಲ್ಲರಿಗೂ ಅನುಭವದಲ್ಲಿದೆ. ನಾವು ಗಾಢನಿದ್ರೆಯಲ್ಲಿರುವಾಗ ನಮಗೆ ಯಾರಿಗೂ 'ನಾನು' ಎಂಬ ರೂಪವು ತೋರಿದ್ದಿಲ್ಲ, ಅಲ್ಲಿ ಯಾರಿಗೂ ಎಂದಿಗೂ ಈ ಕಾಮಾದಿಗಳು ಆದದ್ದೂ ಇಲ್ಲ, ಆಗುವ ಸಂಭವವೂ ಇಲ್ಲ. ಇದೂ ನಮ್ಮೆಲ್ಲರ ಅನುಭವದಲ್ಲಿದೆ. ಗಾಢನಿದ್ರೆಯಲ್ಲಿ ನಮ್ಮ ಸ್ವರೂಪವೇ ಇರುವದಿಲ್ಲವೆಂದು ನಾವು ಯಾರೂ ನಂಬುವದಿಲ್ಲ. ಆದ್ದರಿಂದ ನಾನು ಎಂಬ ಪ್ರತ್ಯಯಕ್ಕೆ ಆಶ್ರಯವಾಗಿರುವ ಮತ್ತು ವಿಷಯವಾಗಿ ತೋರುತ್ತಿರುವ ರೂಪವು ನಮ್ಮ ಸ್ವಭಾವವಲ್ಲವೆಂದೇ ಆಯಿತು. ಈ ಸುಷುಪ್ತಿಯ ವಿಚಾರವನ್ನು ಮುಂದೆ ಈ ಶಾಸ್ತ್ರದ ಭಾಷ್ಯದಲ್ಲಿ ಆಚಾರ್ಯರು ಮಾಡಿರುತ್ತಾರೆ. ಅಲ್ಲಿ ಇದರ ಹೆಚ್ಚಿನ ಚರ್ಚೆಯನ್ನು ಕಾಣಬಹುದು. ಅದಂತಿರಲಿ, ಅಂತೂ ಹೀಗೆ 'ನಾನು' ಎಂಬ ರೂಪವೂ ನಮ್ಮ ನಿಜವಾದ ಆತ್ಮನಿಗೆ ಸೇರಿದ್ದಲ್ಲವೆಂದೇ ಆಯಿತು. ಹೀಗಿದ್ದರೂ ಈ ರೂಪವನ್ನೂ ಕಾಮವೇ ಮುಂತಾದ ಇದರ ಅನೇಕ ವೃತ್ತಿಗಳನ್ನೂ ನೇರಾಗಿ ನೋಡುತ್ತಿರುವ ಇದಕ್ಕೂ ಒಳಗಿರುವ ಆತ್ಮಸ್ವರೂಪವಾದ ಸಾಕ್ಷಿರೂಪವನ್ನೂ ಒಂದನ್ನೊಂದೆಂದು ಕಲೆಬೆರಕೆಮಾಡಿಕೊಂಡೇ ಜನರು 'ನಾನು' ಎಂದು ವ್ಯವಹಾರಮಾಡುತ್ತಿದ್ದಾರೆಂದು ಎಲ್ಲರ ಅನುಭವಕ್ಕೂ ಹೊಂದಿಯೇ ಇರುತ್ತದೆ ಎಂದಾಯಿತಷ್ಟೆ?

## ಅಧ್ಯಾಸದ ಪ್ರಕಾರಗಳು

**ಪ್ರಶ್ನೆ :-**ಹಾಗಾದರೆ ನೀವು ಹೇಳುತ್ತಿರುವ ಅಧ್ಯಾಸವು ಎಲ್ಲಿಂದ ಎಲ್ಲಿಯವರೆಗೆ ವ್ಯಾಪಿಸಿದೆ ?

**ಉತ್ತರ :-** ನಾವು ಈವರೆಗೆ ಮಾಡಿರುವ ಅಧ್ಯಾಸ ವಿಚಾರದ ಅಭಿಪ್ರಾಯವನ್ನು ಪ್ರಕೃತಭಾಷ್ಯದಲ್ಲಿ ಆಚಾರ್ಯರು ಹೀಗೆಂದು ಸಂಗ್ರಹಿಸಿ ಬರೆದಿರುತ್ತಾರೆ :

**"ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿರಿತ್ಯವೋಚಾಮ । ತದ್ ಯಥಾ - ಪುತ್ರಭಾರ್ಯಾದಿಷು ವಿಕಲೇಷು ಸಕಲೇಷು ವಾ ಅಹಮೇವ ವಿಕಲಃ ಸಕಲೋ ವಾ ಇತಿ ಬಾಹ್ಯಧರ್ಮಾನ್ ಆತ್ಮನಿ ಅಧ್ಯಸ್ಯತಿ । ತಥಾ ದೇಹಧರ್ಮಾನ್ ಸ್ಥೂಲೋಽಹಮ್, ಕೃಶೋಽಹಮ್, ಗೌರೋಽಹಂ, ತಿಷ್ಠಾಮಿ, ಗಚ್ಛಾಮಿ, ಲಙ್ಘಯಾಮಿ ಚ ಇತಿ । ತಥಾ ಇನ್ದ್ರಿಯಧರ್ಮಾನ್ ಮೂಕಃ, ಕಾಣಃ, ಕ್ಲೀಬಃ, ಬಧಿರಃ, ಅನ್ಧೋಽಹಮ್ ಇತಿ । ತಥಾ ಅನ್ತಃಕರಣಧರ್ಮಾನ್ ಕಾಮಸಂಕಲ್ಪವಿಚಿಕಿತ್ಸಾಽಧ್ಯವಸಾಯಾದೀನ್ । ಏವಮ್ ಅಹಂಪ್ರತ್ಯಯಿನಮ್ ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನ್ಯಧ್ಯಸ್ಯ ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣ ಅನ್ತಃಕರಣಾದಿಷು ಅಧ್ಯಸ್ಯತಿ ॥"**

ಇಲ್ಲಿ ಅಧ್ಯಾಸದ ಪ್ರಕಾರವನ್ನು ಮೆಟ್ಟಿಲುಮೆಟ್ಟಿಲಾಗಿ ಹೊರಗಿನಿಂದ ಒಳಕ್ಕೆ ನಮ್ಮ ನಿಜವಾದ ಆತ್ಮಸ್ವರೂಪವನ್ನು ಮುಟ್ಟುವವರೆಗೂ ವರ್ಣಿಸಿದೆ. 'ಅಧ್ಯಾಸವೆಂದರೆ ಅದಲ್ಲದ್ದರಲ್ಲಿ ಅದೆಂಬ ಬುದ್ಧಿ' - ಎಂದು ಮೊದಲು ಬರೆದಿರುವದನ್ನು ಲಕ್ಷಿಸಬೇಕು. ಏಕೆಂದರೆ ಇಲ್ಲಿ ನಾವು

ವಿಚಾರಮಾಡುತ್ತಿರುವದು ಒಂದಾನೊಂದು ತಿಳಿವಳಿಕೆಯ ದೃಷ್ಟಿವಿಶೇಷ. ಈ ದೃಷ್ಟಿಯು ನಮಗೆಲ್ಲರಿಗೂ ಸ್ವಭಾವದಿಂದಲೇ ಉಂಟಾಗಿರುತ್ತದೆ. ಹೇಗೆಂದರೆ ಹೆಂಡತಿ, ಮಕ್ಕಳು - ಮುಂತಾದವರಲ್ಲಿ 'ಇವರು ನನ್ನವರು' ಎಂಬ ಅಭಿಮಾನವು ಬಲವಾಗಿರುವದರಿಂದ ಅವರ ಯೋಗಕ್ಷೇಮಗಳು ತನ್ನವೇ, ಅವರಿಗಾಗುವ ಒಳ್ಳೆಯದು ತನಗೇ ಆದದ್ದು, ಅವರಿಗಾಗುವ ಕೇಡೂ ತನಗೇ ಆದದ್ದು - ಎಂದುಕೊಂಡು ಜನರು ಭಾವನಾಮಾತ್ರದಿಂದಲೇ ಮನಸ್ಸಿನಲ್ಲಿ ಹಿಗ್ಗುತ್ತಾರೆ, ಅಥವಾ ಕುಗ್ಗುತ್ತಾರೆ. ಸರಿಯಾಗಿ ನೋಡಿದರೆ ತನಗಿಂತ ಹೊರಗೆ ಕಾಣುವ ವಸ್ತುಗಳಿಗೆ ಅಥವಾ ಮನುಷ್ಯರಿಗೆ ಆಗುವ ಯಾವ ಮಾರ್ಪಾಡುಗಳೂ ತನಗೆ ಆಗುವಂತಿಲ್ಲ. ಮತ್ತೊಬ್ಬರ ಹೆಂಡತಿ ಮಕ್ಕಳಿಗೆ ಆಗುವ ಶುಭಾಶುಭಗಳನ್ನು ತನ್ನವೆಂದು ಸಾಮಾನ್ಯಜನರು ಯಾರೂ ಭಾವಿಸುವದಿಲ್ಲ. ತನ್ನ ಹೆಂಡತಿಮಕ್ಕಳ ವಿಷಯದಲ್ಲಿಯೇ ಯಾವದಾದರೂ ಕಾರಣದಿಂದ ದ್ವೇಷವುಂಟಾದರೆ, ಅಥವಾ ತಾನೇ ವಿರಕ್ತಿಯಿಂದ ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡಿಬಿಟ್ಟರೆ, ಆಗ ಅವರ ವಿಷಯದಲ್ಲಿ ಇಂಥ ಮೋಹವು ಆಗುವದಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೂ ಹೆಂಡತಿ ಮಕ್ಕಳು, ಮನೆಹೊಲ, ಹಣಕಾಸು - ಮುಂತಾದವುಗಳಲ್ಲಿ ಆಗುವ ಹೆಚ್ಚುಕಡಿಮೆಗಳಿಂದ ತನಗೇ ಯಾವದೋ ಆಗುಹೋಗುಗಳು ಉಂಟಾದಂತೆ ಜನರು ಭಾವಿಸಿಕೊಳ್ಳುತ್ತಾರೆ. ಇದೊಂದು ಅಧ್ಯಾಸವು. ಇದು ಎಲ್ಲರಿಗೂ ಗೊತ್ತಾಗುವಂತಿರುವುದರಿಂದ ಇದನ್ನು ಇಲ್ಲಿ ಮೊದಲು ಹೇಳಿದೆ. ಇನ್ನು ದೇಹದ ಧರ್ಮಗಳನ್ನು - ಅದು ದಪ್ಪನಾದರೆ ತಾನೇ ದಪ್ಪನಾದೆನು ಎಂದೂ ಅದು ಬಡಕಲಾದರೆ ತಾನೇ ಬಡಕಲಾದೆನೆಂದೂ ಅದು ಬೆಳ್ಳಗಿದ್ದರೆ ತಾನೇ ಬೆಳ್ಳಗಿರುವೆನೆಂದೂ, ಅದು ನಿಂತರೆ, ನಡೆದರೆ ಅಥವಾ ಹಾರಿದರೆ ತಾನೇ ನಿಂತೆನು, ನಡೆದೆನು, ಹಾರಿದೆನು ಎಂದೂ ನಂಬುತ್ತಾನೆ. 'ದೇಹವು ನೀನಲ್ಲ, ಅದು ನಿನ್ನದಾದರೂ ನಿನಗೆ ನಿಜವಾಗಿ ಏನೂ ಆಗಿಲ್ಲ' ಎಂದು ಯಾರಾದರೂ ಹೇಳಿದರೂ ಜನರು ನಂಬುವದಿಲ್ಲ; ಯುಕ್ತಿಗೆ ಮರುಮಾತನ್ನಾಡದೆ ಹೊರಗೆ ಹೂಗುಟ್ಟಿದರೂ ಅವರೊಳಗೆ ದೇಹದ ಆಗುಹೋಗುಗಳು ತಮಗೇ ಆಗುವವೆಂಬ ಗಟ್ಟಿಯಾದ ನಂಬಿಕೆಯಿರುತ್ತದೆ. ಇದರಂತೆಯೇ ಇಂದ್ರಿಯಧರ್ಮಗಳನ್ನು ತಮ್ಮ ಮೇಲೆ ಹಾಕಿಕೊಂಡು ನಾನು ಮೂಕನು, ಕುರುಡನು, ಷಂಡನು, ಕಿವುಡನು' ಎಂದುಮುಂತಾಗಿ ಭಾವಿಸಿಕೊಳ್ಳುವದು ಯಾರಿಗೆ ಗೊತ್ತಿಲ್ಲ? ಇನ್ನೂ ಒಳಹೊಕ್ಕು ನೋಡಿದರೆ ಅಂತಃಕರಣದ ಧರ್ಮವಾಗಿರುವ ಇಚ್ಛೆ, ಸಂಕಲ್ಪ, ಸಂಶಯ, ನಿಶ್ಚಯ - ಮುಂತಾದವುಗಳೆಲ್ಲವನ್ನೂ ತಮ್ಮವೇ ಎಂದು ತಿಳಿದುಕೊಳ್ಳುತ್ತಾರೆ.

ಇದರಂತೆ 'ನಾನು' ಎಂಬ ಪ್ರತ್ಯಯಕ್ಕೆ ಆಶ್ರಯವಾಗಿರುವ ಅಹಂಕಾರವೆಂಬ ಅಂತಃಕರಣವನ್ನೂ ಅಹಂಕಾರದಲ್ಲಿ ಆಗುವ ಎಲ್ಲಾ ವಿಕಾರಗಳನ್ನೂ - ತಾನು ಹೊರಚ್ಚಾಗಿದ್ದುಕೊಂಡು ನೋಡುತ್ತಲೇ ಇರುವನೆಂಬುದನ್ನು ಕಂಡೂ - ತನ್ನ ಆತ್ಮನ ಸ್ವರೂಪವೇ ಎಂದು ತನ್ನ ಸಾಕ್ಷಿ ಸ್ವರೂಪದಲ್ಲಿ ಅಧ್ಯಾಸಮಾಡಿಕೊಳ್ಳುತ್ತಾನೆ.

ಇದುವರೆಗೆ ಹೇಳಿದ್ದು ಅಧ್ಯಾಸವೆಂಬ ನಾಣ್ಯದ ಒಂದು ಪಕ್ಕವಾಯಿತು. ಇದರಂತೆ ತಾನು ಸಾಕ್ಷಿಸ್ವರೂಪನಾಗಿ ಬೇರೆಯಾಗಿದ್ದರೂ 'ನಾನು' ಎಂಬ ಸ್ವರೂಪದವನೆಂದೂ ಇಂದ್ರಿಯಾದಿಗಳ ಸ್ವರೂಪದವನೆಂದೂ ತಪ್ಪಾಗಿ ಭಾವಿಸಿಕೊಂಡಿರುತ್ತಾನೆಂಬುದು ಈ ನಾಣ್ಯದ ಇನ್ನೊಂದು ಪಕ್ಕ. ಅಂತಃಕರಣವೇ ತಾನು, ತಾನೇ ಅಂತಃಕರಣ - ಎಂದು ಭಾವಿಸಿಕೊಂಡಿರುವದಲ್ಲದೆ ಅಂತಃಕರಣದಲ್ಲಿ ಅಧ್ಯಾಸದಿಂದ ಐಕ್ಯವನ್ನು ಪಡೆದ ತನ್ನನ್ನು ಇಂದ್ರಿಯಗಳಲ್ಲಿಯೂ ಅವುಗಳನ್ನು ಬೆರೆಯಿಸಿಕೊಂಡು ಶರೀರದಲ್ಲಿಯೂ ಅಧ್ಯಾಸಮಾಡಿಕೊಳ್ಳುತ್ತಿರುತ್ತಾನೆ. ಈ ಒಟ್ಟು ಅಧ್ಯಾಸದಲ್ಲಿ ಯಾವಾಗ ಯಾವದು ಮನಸ್ಸಿನಲ್ಲಿ ಎದ್ದುಕೊಳ್ಳುವದೋ ಅದೇ ನಾನು - ಎಂದು ಭಾವಿಸುವದೇ ಮನುಷ್ಯನ ಹವ್ಯಾಸವಾಗಿಬಿಟ್ಟಿರುತ್ತದೆ. ಹೀಗಿದೆ ಮನುಷ್ಯನ ಸ್ವಾಭಾವಿಕವಾಗಿರುವ ಈ ತಪ್ಪುತಿಳಿವಳಿಕೆಯ ಮಹಿಮೆ !

## ಅಧ್ಯಾಸವನ್ನು ಕುರಿತ ಆಕ್ಷೇಪಸಮಾಧಾನಗಳು

**ಪ್ರಶ್ನೆ :-** ನೀವು ಇಷ್ಟು ವಿವರವಾಗಿ ವರ್ಣಿಸಿ ಹೇಳಿದ ಮೇಲೂ 'ನಾನು', 'ನನ್ನದು' ಎಂಬ ಭಾವನೆಯು ಅಧ್ಯಾಸ, ಮಿಥ್ಯಾಪ್ರತ್ಯಯ, ಅದಲ್ಲದ್ದರಲ್ಲಿ ಅದೆಂಬ ಬುದ್ಧಿ - ಎಂಬುದು ಮನಸ್ಸಿಗೆ ಒಗ್ಗುತ್ತಿಲ್ಲವಲ್ಲ ! ಆತ್ಮ, ಅನಾತ್ಮ - ಇವೆರಡೂ ಒಂದಕ್ಕೊಂದು ಅತ್ಯಂತವಿರುದ್ಧವಾದ ಸ್ವಭಾವದವುಗಳಾಗಿರುತ್ತವೆ. ಒಂದು ಎಲ್ಲವನ್ನೂ ಅರಿಯುವ **ವಿಷಯಿ,** ಚೇತನ ; ಇನ್ನೊಂದು ತಾನೇ ಬೆಳಗಲಾರದ ವಿಷಯ ; ಒಂದು '**ನಾನು**' ಎಂಬ ಅರಿವಿಗೆ ಗೋಚರವಾಗಿರುವದು ; ಇನ್ನೊಂದು 'ಇದು ಅದು' ಎಂಬ ಅರಿವುಗಳಿಗೆ ಗೋಚರವಾಗಿರುವದಲ್ಲದೆ ತನ್ನೆದುರಿಗೆ ಇದ್ದಂತೆ ಭಾವಿಸಿ 'ನೀನು' ಎನ್ನುವದಕ್ಕೂ ತಕ್ಕದ್ದಾಗಿರುವದು. ಇದರ ಜೊತೆಗೆ ನಿಮ್ಮ ಅಭಿಪ್ರಾಯಯದಲ್ಲಿ ಆತ್ಮನು **ಸತ್ಯ** ; ಅನಾತ್ಮವು ಮಿಥ್ಯೆ, **ಅನೃತ,** ಹುಸಿ. ಹೀಗೆ ಅತ್ಯಂತ ವಿರುದ್ಧವಾಗಿರುವ ಸ್ವಭಾವದವುಗಳನ್ನು ಒಂದನ್ನೊಂದೆಂದು ಜನರು ತಪ್ಪಾಗಿ ತಿಳಿಯುತ್ತಾರೆ ಎನ್ನುವದು ಸರಿಯಾದೀತೆ ? ಅವುಗಳನ್ನು ಒಂದನ್ನೊಂದರಲ್ಲಿ ಅಧ್ಯಾಸಮಾಡುತ್ತಾರೆ - ಎಂಬುದು ಯುಕ್ತಿಗೆ ವಿರುದ್ಧವೆಂದೇ ತೋರುತ್ತದೆಯಲ್ಲ !

**ಉತ್ತರ** :- ನಿಜ, ಸಾಧಾರಣಜನರ ಮನಸ್ಸಿಗೆ 'ಯುಕ್ತಿವಿರುದ್ಧವಾದ್ದರಿಂದ ಅಧ್ಯಾಸವಾಗಿಲ್ಲವೆನ್ನಬೇಕು' ಎಂದೇ ತೋರುತ್ತದೆ. ಇದನ್ನೇ ಭಾಷ್ಯಕಾರರು ಮೊಟ್ಟಮೊದಲನೆಯ ವಾಕ್ಯದಲ್ಲಿ **'ಅಧ್ಯಾಸೋ ಮಿಥ್ಯಾ ಇತಿ ಭವಿತುಂ ಯುಕ್ತಮ್'** 'ಅಧ್ಯಾಸಮಾಡುತ್ತಾರೆಂಬುದು ನಿಜವಲ್ಲ ಎಂದಾಗಬೇಕು' ಎಂದು ಬರೆದಿರುತ್ತಾರೆ.

ಆದರೆ ನಿಜವೇನೆಂದರೆ ಅಧ್ಯಾಸವು ಆಗಿದೆ ಎಂಬುದು ಅನುಭವಕ್ಕೆ ಹೊಂದುಗೆಯಾಗಿದೆ. ಇದನ್ನು ಆಗಲೆ ನಾವು ತೋರಿಸಿಕೊಟ್ಟಿರುತ್ತೇವೆ. ಅನುಭವಕ್ಕೆ ಹೊಂದುತ್ತಿರುವದನ್ನು ಇಲ್ಲ ಎಂದು ಯುಕ್ತಿಯಿಂದ ತೋರಿಸಿಕೊಡುವದಕ್ಕೆ ಹೋಗುವದು ಎಂದಿಗೂ ಸರಿಯಲ್ಲ. ಯುಕ್ತಿ ಎಂದರೆ ಒಂದು ಅನುಭವಕ್ಕೆ ಇನ್ನೊಂದನ್ನು ಜೋಡಿಸುವದು.

ಅನುಭವದಲ್ಲಿಲ್ಲದೆ ಇರುವದನ್ನು ಅಥವಾ ಅದಕ್ಕೆ ವಿರುದ್ಧವಾದದ್ದನ್ನು ಹೇಗೋ ಹೊಂದಿಸುವದಕ್ಕೆ ಹೋಗುವದು ಕುಯುಕ್ತಿ. 'ಬಂಜೆಯ ಇಬ್ಬರು ಮಕ್ಕಳೊಳಗೆ ಹಿರಿಯವನು ದಡ್ಡನು, ಕಿರಿಯವನು ಬುದ್ಧಿವಂತನು' ಎಂದಾಗ ಹಿರಿಯವನು, ಕಿರಿಯವನು, - ಎಂಬುದು ಹೇಗೆ ಆಯಿತು ? ಎಂದು ಒಬ್ಬರು ಕೇಳಿದರೆ 'ಇಬ್ಬರಲ್ಲಿ ಒಬ್ಬನು ಹಿರಿಯವನಾಗಿರಬೇಕು, ಇನ್ನೊಬ್ಬನು ಕಿರಿಯವನೇ ಆಗಿರಬೇಕಷ್ಟೆ ?' ಎಂದು ಯುಕ್ತಿಯನ್ನು ಹೇಳುವದು ಅನುಭವದಲ್ಲಿಲ್ಲದ್ದಕ್ಕೆ ಯುಕ್ತಿಯನ್ನು ಹೊಂದಿಸುವ ಯತ್ನ ; ಏಕೆಂದರೆ ಇಲ್ಲಿ ಬಂಜೆಗೆ ಮಕ್ಕಳಿರುವರೆಂಬುದು ಅನುಭವದಲ್ಲಿಲ್ಲದಿದ್ದರೂ ಇದ್ದಂತೆ ಇಟ್ಟುಕೊಂಡು ಯುಕ್ತಿಯನ್ನು ಮಾಡಿದೆ. 'ನೀನು ಇಲ್ಲಿಲ್ಲ ; ಇದನ್ನು ಯುಕ್ತಿಯಿಂದ ಸಿದ್ಧಮಾಡಿಕೊಡುತ್ತೇನೆ' ಎಂಬುದು ಅನುಭವವಿರುದ್ಧವಾದ ಯುಕ್ತಿಯನ್ನು ಹೂಡುವ ಯತ್ನ; ಏಕೆಂದರೆ ಅವನು ಎದುರಿಗೆ ಇರುವದರಿಂದಲೇ ಅವನೊಡನೆ ಮಾತಾಡುತ್ತಿರುವೆನೆಂಬ ಅನುಭವವನ್ನು ಕಡೆಗಣಿಸಿ ಇಲ್ಲಿ ಯುಕ್ತಿಯನ್ನು ಒಡ್ಡಿದೆ. ಇದರಂತೆ ಆತ್ಮಾನಾತ್ಮರ ಅಧ್ಯಾಸವು ಅನುಭವದಲ್ಲಿರುವದರಿಂದ ಅದನ್ನು ಯುಕ್ತಿ ವಿರುದ್ಧವೆಂದು ತೋರಿಸುವದಕ್ಕೆ ಪ್ರಯತ್ನಿಸುವದೂ ಸರಿಯಲ್ಲ.

**ಪ್ರಶ್ನೆ :-** ಅಧ್ಯಾಸಕ್ಕೆ ಉದಾಹರಣೆಯನ್ನು ಕೊಡುವಾಗ ಭಾಷ್ಯಕಾರರು **'ಶುಕ್ತಿಕಾ ಹಿ ರಜತವದವಭಾಸತೇ '** ಕಪ್ಪೆಯಚಿಪ್ಪು ಬೆಳ್ಳಿಯಂತೆ ತೋರುತ್ತಿದೆ ; **'ಏಕಶ್ಚನ್ದ್ರಃ ಸದ್ವಿತೀಯವತ್ '** ಒಬ್ಬ ಚಂದ್ರನೇ ಎರಡನೆಯ ಚಂದ್ರನೊಡನೆ ಇದ್ದಂತೆ ತೋರುತ್ತಾನೆ - ಎಂದು ಜನರ ಅನುಭವದಲ್ಲಿರುವ ಎರಡು ಉದಾಹರಣೆಗಳನ್ನು ಕೊಟ್ಟಿರುತ್ತಾರೆ. ಇವೆರಡೂ ನಮಗೆ ಒಮ್ಮೆ ಭ್ರಾಂತಿಯಾಗಿ ಆಮೇಲೆ ಹೋಗುವ ತಪ್ಪುಭಾವನೆಗೆ ಉದಾರಹಣೆಗಳೆನ್ನಬೇಕು. ಏಕೆಂದರೆ ದೂರದಲ್ಲಿ ಥಳಗುಟ್ಟುತ್ತಿರುವ ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ತಿಳಿಯುವ ಭ್ರಾಂತಿಯು ಕಾಲದಲ್ಲಿ ಒಮ್ಮೆ ಆಗುತ್ತದೆ ; ಅದು ಕಪ್ಪೆಯಚಿಪ್ಪನ್ನು ಕಾಣುವದಕ್ಕಿಂತ ಮುಂಚೆ ಇರುವದಿಲ್ಲ, ಇದು ಬೆಳ್ಳಿಯಲ್ಲ ಎಂಬ ಸರಿಯಾದ ತಿಳಿವಳಿಕೆ ಬಂದಮೇಲೂ ಇರುವದಿಲ್ಲ. ಇದರಂತೆ ಯಾರಿಗೋ ಒಬ್ಬೊಬ್ಬರಿಗೆ ದೃಷ್ಟಿಯಲ್ಲಿ ದೋಷವುಂಟಾದ ಬಳಿಕ ಇಬ್ಬರು ಚಂದ್ರರು ಕಾಣಿಸುವ ಭ್ರಾಂತಿಯಾಗುತ್ತದೆ. ಆ ಮುಂಚೆ ಅದು ಇರುವದಿಲ್ಲ, ಕಣ್ಣುಪರೆಯನ್ನು ತೆಗೆಯಿಸಿಕೊಂಡಮೇಲೂ ಆ ಎರಡನೆಯ ಚಂದ್ರನು ಕಾಣಿಸುವದಿಲ್ಲ. ಇದರಂತೆಯೇ ಆತ್ಮಾನಾತ್ಮರ ಅಧ್ಯಾಸವೆಂಬ ಭ್ರಾಂತಿಯೂ ಒಂದು ಕಾರ್ಯವಾದ್ದರಿಂದ ಅದು ಯಾವಾಗಲೋ ಒಮ್ಮೆ ಬಂದಿರಬೇಕು ಎಂದಾಗುತ್ತದೆ.

**ಉತ್ತರ :-** ಈ ಶಂಕೆ ಸರಿಯಲ್ಲ. ಏಕೆಂದರೆ ದಾರ್ಷ್ಟಾಂತಿಕವು ಎಲ್ಲಾ ವಿಧದಲ್ಲಿಯೂ ದೃಷ್ಟಾಂತದಂತೆಯೇ ಇರಬೇಕು ಎಂಬ ನಿಯಮವೇನೂ ಇಲ್ಲ. 'ಇವನ ಮಗನು ಇವನ ಪ್ರತಿಬಿಂಬದಂತೆಯೇ ಇರುತ್ತಾನೆ' ಎಂಬಲ್ಲಿ 'ಮುಖದ ಪ್ರತಿಬಿಂಬವು ಕನ್ನಡಿಯಲ್ಲಿ ಬಿದ್ದಿರುತ್ತದೆ; ಮಗನು ತಂದೆಯ ಪ್ರತಿಬಿಂಬವಾದರೆ ಇಲ್ಲಿ ಕನ್ನಡಿ ಯಾವದು ?'. ಎಂದು ಶಂಕಿಸುವದು

ಸರಿಯಲ್ಲ. ಏಕೆಂದರೆ ಪ್ರತಿಬಿಂಬವು ಹೇಗೆ ಆಕಾರದಲ್ಲಿ ಬಿಂಬದಂತೆಯೇ ಇರುತ್ತದೆಯೋ ಹಾಗೆ ಇರುತ್ತಾನೆ ಎಂಬುದನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಈ ದೃಷ್ಟಾಂತವನ್ನು ಹೇಳಿರುತ್ತದೆ. ಹಾಗೆಯೇ ಪ್ರಕೃತದಲ್ಲಿಯೂ ಆತ್ಮನಲ್ಲದ ದೇಹಾದಿಗಳನ್ನು ಆತ್ಮನೆಂದು ತಿಳಿದುಕೊಳ್ಳುತ್ತಾರೆ. ದೇಹಾದಿಗಳಂತೆ ಕೃಶತ್ವಾದಿಗಳಿಲ್ಲದ ಆತ್ಮನನ್ನು ಕೃಶತ್ವಾದಿಗಳುಳ್ಳವನೆಂದು ಭಾವಿಸಿರುತ್ತಾರೆ ಎಂಬುದೇ ವಿವಕ್ಷಿತವಾಗಿರುತ್ತದೆ. ಅದಲ್ಲದ್ದನ್ನು ಅದೆಂದು ತಿಳಿಯುವದೆಂಬ ಅಂಶವು ಎರಡಕ್ಕೂ ಸಮಾನವಾಗಿದೆ. ಆದ್ದರಿಂದ ಇದನ್ನು 'ಅಧ್ಯಾಸ' ವೆಂದು ಕರೆಯುವದರಲ್ಲಿ ಯಾವ ದೋಷವೂ ಇಲ್ಲ. ಶುಕ್ತಿರಜತಾದ್ಯಧ್ಯಾಸಗಳು ಸಾದಿ, ಆತ್ಮಾನಾತ್ಮಾಧ್ಯಾಸವು ಅನಾದಿ- ಹೀಗೆ ವೈಷಮ್ಯವಿದ್ದರೂ ತಪ್ಪು ತಿಳಿವಳಿಕೆ ಎಂಬ ಅಂಶದಲ್ಲಿ ಎರಡೂ ಸಮಾನವಾಗಿರುತ್ತವೆ.

**ಪ್ರಶ್ನೆ :-** ಇನ್ನೊಂದು ಶಂಕೆ, 'ಅಧ್ಯಾಸ' ಎಂದರೆ ಅದರ ಮೇಲೆ ಅದಲ್ಲದ್ದನ್ನು ಹಾಕುವದು, ಅದನ್ನು ಮತ್ತೊಂದೆಂದು ತಪ್ಪಾಗಿ ತಿಳಿದುಕೊಳ್ಳುವದು. ತಪ್ಪಾಗಿ ತಿಳಿದುಕೊಳ್ಳುವದೆಂಬುದೂ ಒಂದು ಭ್ರಾಂತಿಯಲ್ಲವೆ? ಹಾಗಾದರೆ ಈ ಭ್ರಾಂತಿಯು ಯಾವಾಗ ಉಂಟಾಯಿತು? ಮತ್ತು ಅದಕ್ಕೆ ಕಾರಣವೇನು? ಕಾರಣವಿಲ್ಲದೆ ಶುಕ್ತಿರಜತದ (ಕಪ್ಪೆಚಿಪ್ಪಿನಲ್ಲಿ ತೋರುವ ಬೆಳ್ಳಿಯ) ಭ್ರಾಂತಿಯಾಗುವದಿಲ್ಲ; ಶುಕ್ತಿಯು ರಜತದಂತೆ ಥಳಗುಟ್ಟುವದರಿಂದಲೇ ಆ ಭ್ರಾಂತಿಯಾಗುತ್ತದೆ. ಆದರೆ ಪ್ರಕೃತದಲ್ಲಿ ಆತ್ಮನು ಅನಾತ್ಮದಂತೆ ಇಲ್ಲ; ಅದಕ್ಕೆ ವಿರುದ್ಧ ಸ್ವಭಾವದವನೇ ಆಗಿರುತ್ತಾನೆ. ಹೀಗಿದ್ದರೂ ಭ್ರಾಂತಿಯಾದದ್ದು ಹೇಗೆ? ಹೀಗೆಯೇ 'ಇಬ್ಬರು ಚಂದ್ರರು' ಎಂಬ ಭ್ರಾಂತಿಯಾದದ್ದು ಕಣ್ಣಿನ ಪರೆಯ ದೋಷದಿಂದ. ಆದರೆ ಪ್ರಕೃತದಲ್ಲಿ ಆತ್ಮನು ಅನಾತ್ಮವೆಂದಾಗಲಿ, ಅನಾತ್ಮವು ಆತ್ಮನೆಂದಾಗಲಿ ತಪ್ಪಾಗಿ ತಿಳಿದುಕೊಳ್ಳುವ ಭ್ರಾಂತಿಯಾಗುವದಕ್ಕೆ ಯಾರಿಗೆ ಕಣ್ಣಿನ ಪರೆಯಂತಿರುವ ಯಾವ ದೋಷವಿದೆ? ಅದಿಲ್ಲದಿದ್ದರೆ ಈ ಭ್ರಾಂತಿಯಾದದ್ದಾದರೂ ಹೇಗೆ? - ಎಂಬ ಶಂಕೆ ಉಂಟಾಗುತ್ತದೆ.

**ಉತ್ತರ :-** 'ಅಧ್ಯಾಸ'ವೆಂಬುದೊಂದು ಕ್ರಿಯೆ, ಕೆಲಸ; ಆದ್ದರಿಂದ ಇದು ಒಂದು ಕಾಲದಲ್ಲಿ ಆಗಬೇಕು - ಎಂದು ಭಾವಿಸಿಕೊಂಡದ್ದೇ ಈ ಶಂಕೆಗೆ ಅವಕಾಶವನ್ನು ಕೊಟ್ಟಿರುತ್ತದೆ. ಕ್ರಿಯಾಪದಗಳಿಂದ ಹೇಳುವದೆಲ್ಲವೂ ಒಂದು ಕಾಲದಲ್ಲಿ ಪ್ರಾರಂಭವಾಗಿರಬೇಕೆಂದು ತಿಳಿಯುವದೇ ಸರಿಯಲ್ಲ. 'ಅಲ್ಲಿ ಬೆಟ್ಟವು ನಿಂತಿದೆ' ಎಂಬಲ್ಲಿ 'ನಿಂತಿದೆ' ಎಂಬುದು ನಿಲ್ಲುವ ಕ್ರಿಯೆಯನ್ನು ಹೇಳುವ ಶಬ್ದವಾಗಿರುವದರಿಂದ ಬೆಟ್ಟವು ಕೂತುಕೊಂಡಿದ್ದದ್ದು ಅಥವಾ ಓಡಾಡುತ್ತಾ ಇದ್ದದ್ದು ಈಗ ನಿಂತಿದೆ - ಎಂದೇನೂ ಅಭಿಪ್ರಾಯವಿರುವದಿಲ್ಲ. 'ಚಿತ್ರದಲ್ಲಿ ಕಾಣುವ ಭರತನು ಪಾದುಕೆಯನ್ನು ರಾಮನಿಂದ ಸ್ವೀಕರಿಸುತ್ತಿದ್ದಾನೆ' ಎಂದರೆ ಭರತನು ಸ್ವೀಕರಿಸುವದೆಂಬ ಕ್ರಿಯೆ - ಕೆಲಸವು - ಅಲ್ಲಿ ನಡೆದಿದೆ ಎಂದೇನೂ ಅರ್ಥವಾಗಬೇಕಾದದ್ದಿಲ್ಲ.

ಇದರಂತೆಯೇ ಅಧ್ಯಾಸವು 'ಮಿಥ್ಯಾಪ್ರತ್ಯಯರೂಪ'ವಾಗಿದೆ ಎಂದು ಭಾಷ್ಯದಲ್ಲಿ ಬರೆದಿರುವದಕ್ಕೂ ಅಭಿಪ್ರಾಯವೆಂದು ತಿಳಿಯಬೇಕು. **ಪ್ರತ್ಯಯ**ವೆಂದರೆ ಅರಿವು ; ಅದು ಹೊರಗಿನ ವಸ್ತುಗಳನ್ನು ಅರಿಯುವ ಕಾಲದಲಿ ಉಂಟಾಗುವ ಒಂದಾನೊಂದು ವೃತ್ತಿಯ ಮೂಲಕವಾಗಿ ತೋರಿಕೊಳ್ಳುವದೆಂಬುದು ನಿಜ. ಆದರೂ ಆತ್ಮನ ವಿಷಯಕ್ಕೆ ಆಗಿರುವ ಮಿಥ್ಯಾಪ್ರತ್ಯಯವು, ತಪ್ಪುಕಲ್ಪನೆಯು, ಅನಾದಿಯಾಗಿರುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಜನರ ಮನಸ್ಸಿನಲ್ಲಿ ಸ್ವಭಾವದಿಂದಲೇ ಈ ಕಲ್ಪನೆಯು ಇದ್ದುಕೊಂಡಿರುತ್ತದೆಯೇ ಹೊರತು, ಅದು ಎಂದಾದರೂ ಆದ ಒಂದಾನೊಂದು ವೃತ್ತಿಯಲ್ಲ. ಆದ್ದರಿಂದಲೇ ಅದನ್ನು ಮಿಥ್ಯಾಪ್ರತ್ಯಯ 'ರೂಪ' - ಮಿಥ್ಯಾ ಪ್ರತ್ಯಯದಂತೆ - ಎಂದು ಕರೆದಿದೆ.

ಹೀಗೆಯೇ 'ಜನರು ಆತ್ಮಾನಾತ್ಮರನ್ನು ಒಂದನ್ನೊಂದೆಂದು ತಪ್ಪಾಗಿ ತಿಳಿದುಕೊಂಡಿರುತ್ತಾರೆ'- ಎಂದ ಮಾತ್ರದಿಂದ ತಪ್ಪಾಗಿ ತಿಳಿದುಕೊಂಡಿರುವದೆಂಬ ಕ್ರಿಯೆಯು ಒಂದಾನೊಂದು ಕಾಲದಲ್ಲಿ ಪ್ರಾರಂಭವಾಯಿತು ಎಂಬುದೇನೂ ವಿವಕ್ಷಿತವಲ್ಲ. ಇದಲ್ಲದೆ 'ಆತ್ಮನು ಸತ್ಯ, ಅನಾತ್ಮವು ಅನೃತ' ಎಂಬುದು ಸಿದ್ಧಾಂತವಾಗಿರುತ್ತದೆಯಷ್ಟೆ ? ಆತ್ಮನಲ್ಲಿ ಅನಾತ್ಮವನ್ನು ಅಧ್ಯಾಸಮಾಡಿರುವದಾದರೆ - ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ತಿಳಿಯುವಂತೆ ಆತ್ಮನನ್ನು ಅನಾತ್ಮವೆಂದು ಜನರು ಭ್ರಾಂತಿಯಿಂದ ತಿಳಿದುಕೊಂಡಿರುತ್ತಾರೆಂದಾದರೆ - ಶುಕ್ತಿರಜತವು (ಕಪ್ಪೆಯಚಿಪ್ಪಿನ ಬೆಳ್ಳಿಯು) ಬರಿಯ ಹುಸಿತೋರಿಕೆಯಾದರೂ ನಿಜವಾದ ಬೆಳ್ಳಿಯು ಬೇರೆ ಇದ್ದೇ ಇರುವಂತೆ ಆತ್ಮನಲ್ಲಿ ಅಧ್ಯಾಸವಾಗಿರುವ ಅನಾತ್ಮವು ಸ್ವತಂತ್ರವಾಗಿ ಮತ್ತೆಲ್ಲಿಯಾದರೂ ಇರಬೇಕಲ್ಲವೆ ? - ಎಂದೂ ಶಂಕಿಸಬಹುದೆಂದಾದೀತು! ಅದೂ ಸರಿಯಲ್ಲ, ಏಕೆಂದರೆ ಆತ್ಮನನ್ನು ಅನಾತ್ಮವೆಂದು ತಪ್ಪಾಗಿ ತಿಳಿದುಕೊಂಡಿರುತ್ತಾರೆ ಎಂಬುದಿಷ್ಟನ್ನು ಹೇಳುವದಕ್ಕೆ ಇಲ್ಲಿ ಶುಕ್ತಿರಜತದೃಷ್ಟಾಂತವನ್ನು ಕೊಟ್ಟಿರುತ್ತದೆಯೇ ಹೊರತು ಮಿಕ್ಕ ಅಂಶಗಳನ್ನು ಕುರಿತು ಇಲ್ಲಿ ಚರ್ಚಿಸುವದಕ್ಕೆ ಅಲ್ಲ. ಈ ಕಾರಣದಿಂದಲೇ ಕಪ್ಪೆಯಚಿಪ್ಪು ಬೆಳ್ಳಿಯಂತೆ ಥಳಗುಟ್ಟುವದೆಂಬ ಸಾದೃಶ್ಯವಿರುವಂತೆ ಇಲ್ಲಿ ಆತ್ಮಾನಾತ್ಮರಿಗೆ ಯಾವ ಸಾದೃಶ್ಯವೂ ಇಲ್ಲವಲ್ಲ ! ಎರಡನೆಯ ಚಂದ್ರನನ್ನು ಕಾಣುವದಕ್ಕೆ ಕಣ್ಣಿನ ಪರೆ ಎಂಬ ದೋಷವಿರುವಂತೆ ಇಲ್ಲಿ ಯಾರಿಗೂ ದೋಷವಿಲ್ಲವಲ್ಲ ! - ಎಂಬ ಯುಕ್ತಿಗಳೂ ಸಲ್ಲುವಂತಿಲ್ಲ. ಅಧ್ಯಾಸವಾಗಿದೆ ಎಂಬುದು ಅನುಭವದಲ್ಲಿದೆ ಎಂದು ತೋರಿಸಿದ ಮೇಲೆ ಈ ಕುಯುಕ್ತಿಗಳನ್ನು ತಂದೊಡ್ಡುವದಕ್ಕೆ ಅವಕಾಶವೇ ಇಲ್ಲ.

**ಪ್ರಶ್ನೆ :-** ಶುಕ್ತಿರಜತ, ದ್ವಿತೀಯಚಂದ್ರ - ಈ ಉದಾಹರಣೆಗಳಲ್ಲಿ ಯಾವದರಲ್ಲಿ ಅಧ್ಯಾಸವಾಗಿದೆಯೋ ಅದೂ, ಯಾವದನ್ನು ಅಧ್ಯಾಸಮಾಡಿರುತ್ತಾರೋ ಅದೂ ಎರಡೂ ವಿಷಯಗಳು, ನಮ್ಮ ಜ್ಞಾನಕ್ಕೆ ತೋರುವ ಪದಾರ್ಥಗಳು. ಆದ್ದರಿಂದ ಒಂದನ್ನು ಒಂದೆಂದು ಭ್ರಾಂತಿಯಿಂದ ತಿಳಿಯಬಹುದಾಗಿದೆ. ದಾರ್ಷ್ಟಾಂತಿಕದಲ್ಲಿ ಆತ್ಮನು ವಿಷಯಿ, ಅರಿಯುವಾತನು; ಅನಾತ್ಮವು ವಿಷಯ. ಹೀಗಿರುವಲ್ಲಿ ಒಂದನ್ನೊಂದೆಂದು ತಪ್ಪಾಗಿ ತಿಳಿಯುವದು ಹೇಗೆ ಸಾಧ್ಯ ?

**ಉತ್ತರ :-** ಇದೂ ಯುಕ್ತಿಪ್ರಧಾನವಾಗಿ ಮಾಡಿರುವ ಆಕ್ಷೇಪವಾಗಿದೆ. ಅನುಭವದ ಆಧಾರದಿಂದ ಅಧ್ಯಾಸವಾಗಿದೆ ಎಂದು ಸಿದ್ಧವಾದ ಮೇಲೆ 'ಇದು ಹೇಗಾಯಿತು ? ಆಗಬಾರದಲ್ಲ'! ಎಂದು ಯುಕ್ತಿಯ ಬಲದಿಂದ ಆಕ್ಷೇಪಿಸುವದು ಎಂದಿಗೂ ಸರಿಯಾಗಲಾರದು. ಆದರೂ ಯುಕ್ತಿಗೆ ಪ್ರತಿಯುಕ್ತಿಯನ್ನು ತೋರಿಸಿದರೆ ಅಧ್ಯಾಸವಾಗಿರುವದು ಅಸಂಭಾವಿತವಲ್ಲ, ಇದೂ ಆಗಿರಬಹುದಾಗಿದೆ - ಎಂಬ ಭರವಸೆಯುಂಟಾಗುವದು. ಆಮೇಲೆ ಅನುಭವವನ್ನು ತೋರಿಸಿದರೆ ಸಿದ್ಧಾಂತಕ್ಕೆ ಮತ್ತಷ್ಟು ಬಲವು ಬರುತ್ತದೆ - ಎಂಬ ಕಾರಣದಿಂದ ಆಚಾರ್ಯರು ಇದಕ್ಕೂ ಒಂದು ಪರಿಹಾರವನ್ನು ಹೇಳಿರುತ್ತಾರೆ.

**'ನ ತಾವದಯಮ್ ಏಕಾನ್ತೇನಾವಿಷಯಃ । ಅಸ್ಮತ್ಪ್ರತ್ಯಯವಿಷಯತ್ವಾತ್॥'**

ಆಚಾರ್ಯರು ಬರೆದಿರುವ ವಾಕ್ಯದಲ್ಲಿ ಎರಡು ಭಾಗಗಳಿವೆ ; ಇದು ಮೊದಲನೆಯ ಭಾಗ. ಈ ಆತ್ಮನು ವಿಷಯನಲ್ಲವೇ ಅಲ್ಲ ಎಂಬ ನಿಯಮವೇನೂ ಇಲ್ಲ ; ಏಕೆಂದರೆ ಅಸ್ಮತ್ಪ್ರತ್ಯಯಕ್ಕೆ - ನಾನು ಎಂಬ ಪ್ರತ್ಯಯಕ್ಕೆ - ವಿಷಯನಾಗಿರುತ್ತಾನೆ. ಆತ್ಮನ ಸ್ವರೂಪವು ನಾನು ಎಂಬ ಅರಿವಿಗೆ ಗೋಚರವಾಗಿ ತೋರಿಕೊಳ್ಳುತ್ತದೆ ಎಂದು ವಿವೇಕಿಗಳಾದ ಸಾಮಾನ್ಯಜನರೂ ಮೀಮಾಂಸಕರೇ ಮುಂತಾದ ಶಾಸ್ತ್ರಜ್ಞರೂ ಒಪ್ಪಿರುತ್ತಾರೆ. ಆ ಆತ್ಮನಲ್ಲಿ ದೇಹವೇ ಮುಂತಾದವುಗಳ ಧರ್ಮವನ್ನು ಅಧ್ಯಾಸಮಾಡಬಹುದಾಗಿರುತ್ತದೆ. ಏಕೆಂದರೆ ಇಲ್ಲಿ ಆತ್ಮನೂ ವಿಷಯ, ಮುಪ್ಪು ಸಾವು - ಮುಂತಾದವುಗಳೂ ವಿಷಯ ; ಆದ್ದರಿಂದ ವಿಷಯದಲ್ಲಿ ವಿಷಯವನ್ನು ಅಧ್ಯಾಸಮಾಡಬಹುದಷ್ಟೆ? - ಎಂದು ಈ ಸಮಾಧಾನ ವಾಕ್ಯಕ್ಕೆ ಅರ್ಥ.

(ಇಲ್ಲಿ 'ಅಧ್ಯಾಸ' ಎಂಬ ಶಬ್ದವು ಪಾರಿಭಾಷಿಕವಾಗಿದೆ. ಇದನ್ನು **ಅಧ್ಯಾರೋಪ, ಭ್ರಾಂತಿ, ವಿಕಲ್ಪ** - ಎಂಬ ಹೆಸರುಗಳಿಂದಲೂ ಕರೆಯುವದು ಭಾಷ್ಯದಲ್ಲಿ ಕಂಡುಬರುತ್ತದೆ. ಅಧ್ಯಾಸಮಾಡುವದು, ಅಧ್ಯಾರೋಪಿಸುವದು, ಹಾಗೆಂದು ಭ್ರಾಂತರಾಗುವದು, ವಿಕಲ್ಪಿಸುವದು ಎಂದಾಗುತ್ತದೆ. ಅಲ್ಲವೆ?- ಇವಕ್ಕೆಲ್ಲ ತಪ್ಪಾಗಿ ತಿಳಿದುಕೊಳ್ಳುವದು ಇಲ್ಲದ್ದನ್ನು ಹುಟ್ಟಿಹಾಕುವದು, ಎಂದೇ ಅರ್ಥ. ಯಾವದನ್ನು ಹೀಗೆ ಹುಟ್ಟಿಹಾಕಲಾಗಿದೆಯೋ ಅದನ್ನು ಅಧ್ಯಸ್ತ, ಅಧ್ಯಾರೋಪಿತ, ವಿಕಲ್ಪಿತ (ಅಥವಾ ವಿಕಲ್ಪ) ಎಂದು ಕರೆಯುವರು ; ಯಾವದರಲ್ಲಿ ಹುಟ್ಟಿಹಾಕಲಾಗಿದೆಯೋ ಅದನ್ನು '**ಆಸ್ಪದ**'ವೆಂಬ ಶಬ್ದದಿಂದ ಭಾಷ್ಯದಲ್ಲಿ ಕರೆದಿರುತ್ತದೆ. '**ಅಧಿಷ್ಠಾನ**'ವೆಂಬ ಶಬ್ದವನ್ನು ವ್ಯಾಖ್ಯಾನಗಳಲ್ಲಿ ಬಳಸಿದೆ ; ಭಾಷ್ಯದಲ್ಲಿ ಅಧಿಷ್ಠಾನವೆಂಬ ಶಬ್ದವನ್ನು ಆಧಾರ, ಶರೀರ - ಎಂಬರ್ಥಗಳಲ್ಲಿ ಬಳಸಿರುವದು ಕಂಡುಬಂದಿದೆ. ಜಿಜ್ಞಾಸುಗಳು ಇದನ್ನು ಲಕ್ಷ್ಯದಲ್ಲಿಟ್ಟಿದ್ದರೆ ಗಲಿಬಿಲಿ ತಪ್ಪುತ್ತದೆ.)

ಮೇಲೆ ಹೇಳಿರುವದು ಸಿದ್ಧಾಂತದ ಪರಮಸಮಾಧಾನವಲ್ಲ. ಏಕೆಂದರೆ ಆತ್ಮನು ಯಾವ ಪ್ರತ್ಯಯಕ್ಕೂ ಗೋಚರನಲ್ಲವೆಂಬುದೇ ವೇದಾಂತದ ಸಿದ್ಧಾಂತವಾಗಿರುತ್ತದೆ. ಈ ವಿಷಯದಲ್ಲಿ ಆಚಾರ್ಯರ ಕಟ್ಟಕಡೆಯ ಮಾತು ಇಂತಿದೆ :

**'ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮಪ್ರಸಿದ್ಧೇಃ ನ ಚಾಯಮಸ್ತಿ ನಿಯಮಃ ಪುರೋಽವಸ್ಥಿತ ಏವ ವಿಷಯೇ ವಿಷಯಾನ್ತರಮಧ್ಯಸಿತವ್ಯಮಿತಿ। ಅಪ್ರತ್ಯಕ್ಷೇಽಪಿ ಆಕಾಶೇ ಬಾಲಾಃ, ತಲಮಲಿನತಾದಿ ಅಧ್ಯಸ್ಯನ್ತಿ । ಏವಮ್ ಅವಿರುದ್ಧಃ ಪ್ರತ್ಯಗಾತ್ಮನ್ಯಪಿ ಅನಾತ್ಮಾಧ್ಯಾಸಃ ॥ '**

'ಪ್ರತ್ಯಗಾತ್ಮನು ಅಪರೋಕ್ಷನಾಗಿರುವದರಿಂದಲೇ ಪ್ರಸಿದ್ಧನಾಗಿರುತ್ತಾನೆ' - ಎಂಬುದರ ಅಭಿಪ್ರಾಯವನ್ನು ಚೆನ್ನಾಗಿ ಮನಮುಟ್ಟಿ ವಿಚಾರಮಾಡಿ ತಿಳಿದುಕೊಳ್ಳಬೇಕು. ಏಕೆಂದರೆ ಶ್ರುತಿಯಲ್ಲಿ ಹೇಳಿರುವ ಬ್ರಹ್ಮವೆಂಬ ಹೆಸರಿನ ನಮ್ಮ ಪರಮಾರ್ಥಸ್ವರೂಪವು 'ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವು, ಎಲ್ಲಕ್ಕೂ ಒಳಗಿರುವ ಆತ್ಮನು' (ಬೃ. ೩-೪-೧) ಎಂದು ವರ್ಣಿತವಾಗಿರುತ್ತದೆ. ಮತ್ತೊಂದು ನಡುವಿನ ವ್ಯವಧಾನವಿಲ್ಲದೆ, ಪರೋಕ್ಷವಲ್ಲದೆ ಇರುವ, ಪರತತ್ತ್ವವದು ನಾವು ನಮ್ಮ ರೂಪವೆಂದು ಭಾವಿಸಿರುವ ಆತ್ಮರುಗಳೆಲ್ಲಕ್ಕಿಂತಲೂ ತೀರ ಒಳಗಿರುವ ಆತ್ಮನು ಅದು. ಆದ್ದರಿಂದ ಅದು ಸ್ವಯಂಪ್ರಸಿದ್ಧವಾಗಿರುತ್ತದೆ. ಆದಕಾರಣ ಅಷ್ಟರಿಂದಲೇ ಈ ಆತ್ಮನಲ್ಲಿ ಅನಾತ್ಮದ ಅಧ್ಯಾಸವೂ ಅನಾತ್ಮದಲ್ಲಿ ಆತ್ಮನ ಅಧ್ಯಾಸವೂ ಆಗಬಹುದಾಗಿರುತ್ತದೆ. ಹಗ್ಗದಲ್ಲಿ ಹಾವನ್ನು ಅಥವಾ ಮೋಟುಮರದಲ್ಲಿ ಮನುಷ್ಯನನ್ನು ಕಲ್ಪಿಸುವ ಹಾಗೆ ಎದುರಿಗಿರುವ ಒಂದು ವಿಷಯದಲ್ಲಿಯೇ ಮತ್ತೊಂದು ವಿಷಯವನ್ನು ಕಲ್ಪಿಸುತ್ತಾರೆಂಬ ನಿಯಮವೇನೂ ಇಲ್ಲ. ಏಕೆಂದರೆ ಆಕಾಶವನ್ನು ತಮ್ಮೆದುರಿಗೆ ಇರುವ ವಿಷಯವಾಗಿ ಯಾರೂ ಕಂಡಿದ್ದಿಲ್ಲ; ಆದರೂ 'ಆಕಾಶವು ತಲದಲ್ಲಿ ಮಲಿನವಾಗಿದೆ' ಎಂದು ಅದಕ್ಕೊಂದು ಅಡಿಯ ಪ್ರದೇಶವನ್ನೂ ಮಾಲಿನ್ಯವನ್ನೂ ಜನರೆಲ್ಲರೂ ಕಲ್ಪಿಸಿಕೊಂಡಿರುತ್ತಾರೆ. ಒಂದು ಪ್ರಸಿದ್ಧವಾದ ವಸ್ತುವಿನಲ್ಲಿ ಇನ್ನೊಂದು ಪ್ರಸಿದ್ಧವಾದ ವಸ್ತುವನ್ನು ಕಲ್ಪಿಸುತ್ತಾರೆಂಬುದೇ ಲೋಕದಲ್ಲಿ ಕಂಡುಬಂದಿದೆ. ಅದರಂತೆ ನಮ್ಮ ತೀರ ಒಳಗಿನ ಆತ್ಮನು ವಿಷಯನಲ್ಲದಿದ್ದರೂ ಅವನಲ್ಲಿ ನಾನು ಎಂಬ ರೂಪವನ್ನೂ ದೇಹೇಂದ್ರಿಯಾದಿಗಳ ಧರ್ಮವನ್ನೂ ಕಲ್ಪಿಸಬಹುದಾಗಿರುತ್ತದೆ. ಅಸ್ಮತ್ಪ್ರತ್ಯಯವಿಷಯನಾದ (ನಾನು ಎಂಬ ಅರಿವಿನಿಂದ ತಿಳಿಯಲ್ಪಡುವ) ಆತ್ಮನಲ್ಲಿ ದೇಹಾದಿಧರ್ಮಗಳನ್ನು ಅಧ್ಯಾಸಮಾಡುತ್ತಾರೆಂದು ಬೇರೆಯ ಶಾಸ್ತ್ರಗಳಲ್ಲಿಯೂ ಒಪ್ಪಿರುತ್ತದೆಯಾದ್ದರಿಂದ ಆ ಸಮಾಧಾನವನ್ನು ಮೊದಲು ಹೇಳಿದ್ದಾಗಿದೆ. ಹೇಗೆ ದೇಹಧರ್ಮವಾದ ಮುಪ್ಪು ಸಾವು ಮುಂತಾದವುಗಳು ಜ್ಞೇಯವಾದರೂ ಜ್ಞಾತೃವಾದ ಅಹಂಪ್ರತ್ಯಯಗಮ್ಯನಾದ ಆತನಲಿ ತಪ್ಪುತಿಳಿವಳಿಕೆಯಿಂದ ಕಲಿತವಾಗಿರುವವೆಂದು ಮಿಕ್ಕ ಶಾಸ್ತ್ರಗಳ ಅನುಯಾಯಿಗಳು ಒಪ್ಪಿರುತ್ತಾರೋ, ಹಾಗೆಯೇ ಕರ್ತೃತ್ವಭೋಕ್ತೃತ್ವ ಸುಖದುಃಖಗಳೇ ಮುಂತಾದವೂ ಜ್ಞೇಯವಲ್ಲದಿದ್ದರೂ ಸ್ವಯಂಪ್ರಸಿದ್ಧನಾಗಿರುವ ಆತ್ಮನಲ್ಲಿ ಕಲ್ಪಿತವಾಗಿರಬಹುದಾಗಿದೆ - ಎಂದು ತಿಳಿಸುವದಕ್ಕೆ ಆ ಮೊದಲನೆಯ ಸಮಾಧಾನವನ್ನು ಹೇಳಿದೆ ಎಂದು ತಿಳಿಯಬೇಕು. ಅಂತೂ ಆತ್ಮಾನಾತ್ಮಾಧ್ಯಾಸವು ಯುಕ್ತಿವಿರುದ್ಧವಲ್ಲವೆಂದಾಯಿತು. ಇದು ಅನುಭವದಲ್ಲಿಯೂ ತೋರುತ್ತಿದೆ ಎಂಬುದನ್ನು ಮರೆಯದೆ ಇರಬೇಕು.

## ಅವಿದ್ಯೆಗೆ ಕಾರಣ

**ಪ್ರಶ್ನೆ :-** ಅಧ್ಯಾಸವು ಅನಾದಿಯೆಂದಾಗಿದೆ ಎಂದು ನೀವು ಹೇಳಿದ ಮೇಲೂ ಆತ್ಮನು ಶುದ್ಧಚಿನ್ಮಾತ್ರನಾಗಿರುವ ತನ್ನನ್ನು ಅನಾತ್ಮರೂಪದಿಂದ ವಿಕಲ್ಪಿಸಿಕೊಂಡಿರುವದಕ್ಕೆ ಕಾರಣ ವೇನೆಂಬುದು ನನಗೆ ತಿಳಿಯಲೊಲ್ಲದು. ಅತ್ಯಂತವಾಗಿ ಅಪರೋಕ್ಷನಾಗಿರುವ ಚಿತ್ಸ್ವರೂಪನು ತನ್ನನ್ನು ತಪ್ಪಾಗಿ ಕಾರಣವಿಲ್ಲದೆ ತಿಳಿದುಕೊಂಡು ನಾನು ನನ್ನದು - ಎಂದು ವ್ಯವಹರಿಸುತ್ತಿದಾನೆಂಬುದು ಅಸಂಭಾವಿತವಾಗಿಯೇ ಕಾಣುತ್ತದೆಯಲ್ಲವೆ?

**ಉತ್ತರ :-** ಇದಕ್ಕೆ ಭಾಷ್ಯದಲ್ಲಿ ಮೊಟ್ಟಮೊದಲೇ ಉತ್ತರವನ್ನು ಬರೆದಿದೆ :

**"ಇತರೇತರಾವಿವೇಕೇನ ಅತ್ಯನ್ತವಿವಿಕ್ತಯೋರ್ಧರ್ಮಧರ್ಮಿಣೋಃ ಮಿಥ್ಯಾಜ್ಞಾನ ನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ 'ಅಹಮಿದಂ ಮಮೇದಮ್' ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ॥"**

ಆತ್ಮ, ಅವನ ಧರ್ಮಗಳು ; ಅನಾತ್ಮ , ಅದರ ಧರ್ಮಗಳು - ಇವುಗಳು ಅತ್ಯಂತವಾಗಿ ಭಿನ್ನವಾಗಿರುತ್ತವೆ. 'ಸತ್ಯ' ಚಿದ್ರೂಪನಾಗಿರುವ ಆತ್ಮ, ಅನೃತವಾಗಿ ಸ್ವಪ್ನಮಾಯಾದಿಗಳಿಂದ ಕಾಣಬರುವ ಹುಸಿತೋರಿಕೆಗಳಂತೆ 'ಅನೃತ'ವಾಗಿರುವ ಅನಾತ್ಮವಾದ ಅಂತಃಕರಣಾದಿಗಳು ಮತ್ತು ಅವುಗಳ ಧರ್ಮಗಳು - ಇವನ್ನು ವಿಂಗಡಿಸಿ ತಿಳಿದುಕೊಳ್ಳದೆ ಇರುವದರಿಂದ ಎರಡನ್ನೂ **ಕಲೆಬೆರಕೆ ಮಾಡಿ**ಕೊಂಡು 'ನಾನು', 'ನನ್ನದು' ಎಂದು ವ್ಯವಹರಿಸುವದು ಜನರಿಗೆ ಸ್ವಾಭಾವಿಕವಾಗಿದೆ: ಇದು ಯಾವಾಗಲೋ ಒಮ್ಮೆ ಉಂಟಾದ ತಪ್ಪು ತಿಳಿವಳಿಕೆಯಲ್ಲ. ಈ ಅಧ್ಯಾಸವು ಯಾವದಾದರೊಂದು ಕಾಲದಲ್ಲಿ ಕಲ್ಪಿತವಾಗಿದೆ ಎಂದು ತರ್ಕಿಸುವದು ತೀರ ನಗೆಗೀಡಾದ ಮಾತು. ಏಕೆಂದರೆ ಕಾಲವೆಂಬುದೂ ಅನಾತ್ಮವೇ, ಅನೃತವೇ ; ಆದ್ದರಿಂದ ಅದೂ ಅಧ್ಯಸ್ತವೇ. ಹೀಗಿರುವಲ್ಲಿ 'ಅಂದು', 'ಇಂದು', 'ಮುಂದೆ' - ಎಂಬ ಧರ್ಮಗಳನ್ನು ಅಧ್ಯಾಸಕ್ಕೆ ಹಾಕುವದು ಮತ್ತೊಂದು ಅಧ್ಯಾಸವಲ್ಲದೆ ಮತ್ತೇನಾದೀತು?

**ಈ ನೈಸರ್ಗಿಕವಾದ ವ್ಯವಹಾರಕ್ಕೆ ಕಾರಣವೆಂದರೆ ಮಿಥ್ಯಾಜ್ಞಾನವೇ, ಅಧ್ಯಾಸವೇ;** ತಪ್ಪುತಿಳಿವಳಿಕೆ ಹೀಗೇಕೆ ನಮ್ಮನ್ನು ಮೋಸಪಡಿಸುತ್ತಿದೆ ? - ಎಂದರೆ ನಿಜವನ್ನು ಅರಿತುಕೊಳ್ಳದೆ ಇರುವದರಿಂದ, ಅತ್ಯಂತವಾಗಿ ಎಂದೆಂದಿಗೂ ವಿವಿಕ್ತವಾಗಿರುವ ಆತ್ಮಾನಾತ್ಮಗಳ ನಿಜವನ್ನು ಅರಿಯದ್ದರಿಂದ. ಹಗ್ಗದ ನಿಜವನ್ನರಿಯದ್ದರಿಂದ ಅದನ್ನು ಹಾವೆಂದು ಭ್ರಮಿಸಿ ವ್ಯವಹರಿಸುವದು ಹೇಗೆ ಸ್ವಾಭಾವಿಕವೋ ಹಾಗೆ ಈ ಅನಾದಿಭ್ರಾಂತಿಯು ನೈಸರ್ಗಿಕ

ನಿತ್ಯಶುದ್ಧಚಿನ್ಮಾತ್ರಸ್ವರೂಪನಾದ ಆತ್ಮನು ತನ್ನನ್ನು ತಾನು ಅರಿಯಲಿಲ್ಲವೆಂಬುದು ಸಂಭಾವಿತವಾಗಿ ತೋರುವದಿಲ್ಲವಲ್ಲ! - ಎಂಬುದು ಸರಿಯಾದ ಶಂಕೆಯಲ್ಲ. ವಿಚಾರವನು

ಮಾಡಿ ವಸ್ತುಸ್ವಭಾವವನ್ನು ನಿರ್ಧರಿಸಿಕೊಳ್ಳುವ ಶಕ್ತಿಯಿಲ್ಲದವರು ತಪ್ಪು ಕಲ್ಪನೆಯಿಂದ ನರಳುತ್ತಿರುವದು ಅವರ ಸ್ವಭಾವಕ್ಕೇ ಸೇರಿದ್ದು. ಇದರಲ್ಲೇನೂ ಆಶ್ಚರ್ಯಕ್ಕೆ ಕಾರಣವಿರುವದಿಲ್ಲ. ವಿಚಾರಪೂರ್ವಕವಾದ ಶಾಸ್ತ್ರಜ್ಞಾನವಿಲ್ಲದವರಿಗೆ ಜನ್ಮಾಂತರವನ್ನು ಪಡೆಯುವ ಆತ್ಮನೊಬ್ಬನು ದೇಹಾದಿಗಳಿಗಿಂತ ಬೇರೆಯಾಗಿದ್ದಾನೆಂಬ ನಂಬಿಕೆಯಿರುವದೇ ಇಲ್ಲ; ಶ್ರದ್ಧಾಪೂರ್ವಕವಾಗಿ ಶಾಸ್ತ್ರಾಭ್ಯಾಸವನ್ನು ಮಾಡಿಕೊಂಡ ಮೇಲೆಯೇ ಪಾಪಪುಣ್ಯಗಳ, ಪರಲೋಕದ, ಮತ್ತು ಜನ್ಮಾಂತರದ ಜ್ಞಾನವು ಮನಸ್ಸಿಗೆ ಹತ್ತುವದು. ಗಣಿತ, ಜ್ಯೋತಿಷ್ಯ, ವಸ್ತುಶಾಸ್ತ್ರ, ಶಕ್ತಿಶಾಸ್ತ್ರ ಮನಃಶಾಸ್ತ್ರ, ನೀತಿ ಶಾಸ್ತ್ರ, ವೈದ್ಯ, ಸಂಗೀತ, ಚಿತ್ರ, ಶಿಲ್ಪ -ಇಂಥ ಲೌಕಿಕಶಾಸ್ತ್ರಗಳ ತಿಳಿವಳಿಕೆಯು ಕೂಡ ಅವುಗಳನ್ನು ಕಲಿತುಕೊಂಡ ಮೇಲೆಯೇ ಬರುತ್ತದೆ. ಆದ್ದರಿಂದ **ಆತ್ಮನ ವಿಷಯದಲ್ಲಿ ಆತ್ಮಾನಾತ್ಮವಿವೇಕವಿಲ್ಲದ್ದರಿಂದ ಮಿಥ್ಯಾಜ್ಞಾನವೂ ಅದಕ್ಕನುಗುಣವಾದ ವ್ಯವಹಾರವೂ ಉಂಟಾಗಿರುತ್ತದೆ** ಎಂದು ನಿಶ್ಚಯಿಸಬೇಕು.

## ಅಧ್ಯಾಸಲಕ್ಷಣವು ಸರ್ವವಾದಿಸಂಮತವೆ ?

**ಪ್ರಶ್ನೆ** :- ಆತ್ಮ ವಿಷಯದ ಮಿಥ್ಯಾಜ್ಞಾನವೇ ಅಧ್ಯಾಸವು ಎಂಬ ಸಿದ್ಧಾಂತವನ್ನು ವೇದಾಂತಿಗಳಲ್ಲದೆ ಮಿಕ್ಕ ಶಾಸ್ತ್ರದವರೂ ಒಪ್ಪಿರುತ್ತಾರೆಯೆ ?

**ಉತ್ತರ** :- ಈವರೆಗೆ ನಾವು ಈ ವಿಷಯವನ್ನು ಅನುಭವದ ಮತ್ತು ಅನುಭವಕ್ಕೆ ಅನುಗುಣವಾಗಿರುವ ಯುಕ್ತಿಯ ಆಧಾರದಿಂದಲೇ ವಿಚಾರಮಾಡಿರುತ್ತೇವೆ. ಆದ್ದರಿಂದ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸವು ಮಿಕ್ಕ ಶಾಸ್ತ್ರದವರಿಗೆ ಒಪ್ಪಾಗಿದೆಯೆ, ಇಲ್ಲವೆ ? - ಎಂಬುದನ್ನು ಗೊತ್ತುಪಡಿಸಿಕೊಳ್ಳುವ ಆವಶ್ಯಕತೆಯೇನೂ ಇಲ್ಲ. ಅಧ್ಯಾಸವು, ತಪ್ಪುತಿಳಿವಳಿಕೆಯು ಹೇಗಾಗುತ್ತದೆ ? - ಎಂಬ ವಿಷಯದಲ್ಲಿ ಶಾಸ್ತ್ರಕಾರರು ಬೇರೆಬೇರೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಹೇಗೆಂದರೆ: (೧) ಒಂದರಲ್ಲಿ ಮತ್ತೊಂದರ ಧರ್ಮವನ್ನು ಕಲ್ಪಿಸುವದರಿಂದ ಅಧ್ಯಾಸವಾಗುತ್ತದೆ ಎಂದು ಕೆಲವರು; (೨) ಎರಡು ಪದಾರ್ಥಗಳನ್ನು ವಿಂಗಡಿಸಿ ಗೊತ್ತುಪಡಿಸಿ ಕೊಳ್ಳದ್ದರಿಂದ ಈ ಭ್ರಮೆಯಾಗುತ್ತದೆ ಎಂದು ಕೆಲವರು ; (೩) ಅದೇ ಪದಾರ್ಥದಲ್ಲಿಯೇ , ಅದಕ್ಕೆ ವಿಪರೀತವಾದ - ಅದರಲ್ಲಿಲ್ಲದ - ಧರ್ಮವು ಇದೆ ಎಂದು ಕಲ್ಪಿಸುವದರಿಂದ ಇದು ಆಗುವದೆಂದು ಕೆಲವರು - ಹೀಗೆ ಭಿನ್ನಾಭಿಪ್ರಾಯಗಳಿವೆ. ಇದು ಹೇಗೇ ಆಗಲಿ, ಒಂದು ಮತ್ತೊಂದರ ಧರ್ಮವುಳ್ಳದ್ದರಂತೆ ತೋರುವದೇ ಅಧ್ಯಾಸವೆಂಬುದು ಎಲ್ಲಾ ಮತದವರ ಅಭಿಪ್ರಾಯದಲ್ಲಿಯೂ ಇದ್ದೇ ಇರುತ್ತದೆ. ಲೋಕದಲ್ಲಿ ಜನರ ಅನುಭವವೂ ಹೀಗೆಯೇ ಇದೆ ಎಂಬುದನ್ನು ತಿಳಿಸುವದಕ್ಕೆ ಆಚಾರ್ಯರು ''ಕಪ್ಪೆಯ ಚಿಪ್ಪೇ ಬೆಳ್ಳಿಯಂತೆ ಕಾಣಿಸುತ್ತಿದೆ'', ''ಒಬ್ಬ ಚಂದ್ರನೇ ಎರಡನೆಯವನೊಬ್ಬ ಚಂದ್ರನೊಡನೆ ಇರುವಂತೆ ಕಾಣಿಸುತ್ತಿದ್ದಾನೆ'' - ಎಂಬ ಎರಡು ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆಂದು ಆಗಲೇ ತಿಳಿಸಿರುತ್ತೇವೆ.

## ವಿದ್ಯಾವಿದ್ಯೆಗಳ ಸ್ವರೂಪ

**ಪ್ರಶ್ನೆ** :- ಇದುವರೆಗೆ ನಾವು ಮಾಡಿರುವ ಅಧ್ಯಾಸವಿಚಾರಕ್ಕೂ ಉಪನಿಷತ್ತುಗಳಲ್ಲಿ ಹೇಳಿಕೊಟ್ಟಿರುವ ಆತ್ಮೈಕತ್ವವಿದ್ಯೆಗೂ ಏನು ಸಂಬಂಧ ?

**ಉತ್ತರ** : - ಈವರೆಗೆ ನಾವು ವರ್ಣಿಸಿರುವ ಆತ್ಮ ಮತ್ತು ಅನಾತ್ಮ - ಇವುಗಳ ಸ್ವರೂಪವನ್ನೂ ಧರ್ಮಗಳನ್ನೂ ವಿಂಗಡಿಸಿ ತಿಳಿದುಕೊಳ್ಳದೆ ಇರುವದರಿಂದ ಒಂದನ್ನೊಂದೆಂದು ಭಾವಿಸುವ ಅಧ್ಯಾಸವನ್ನೇ ಬಲ್ಲವರು **'ಅವಿದ್ಯೆ'** ಎಂದು ಕರೆಯುತ್ತಾರೆ. ಇವೆರಡನ್ನೂ ವಿಂಗಡಿಸಿ, ಆತ್ಮಸ್ವರೂಪವು ಸತ್ಯವಾದದ್ದು, ಅನಾತ್ಮಸ್ವರೂಪವು ಹುಸಿಯಾಗಿದ್ದರೂ ಸತ್ಯವಾಗಿರುವಂತೆ ತೋರತಕ್ಕದ್ದು ಎಂದು ಇದ್ದದ್ದು ಇದ್ದಂತೆ ಗೊತ್ತುಪಡಿಸಿಕೊಳ್ಳುವದನ್ನೇ **'ವಿದ್ಯೆ'** ಎಂದು ಕರೆಯುತ್ತಾರೆ. ನಾವು ವಸ್ತುಸ್ವರೂಪವನ್ನು ನಿಶ್ಚಯಿಸಿಕೊಳ್ಳದೆ ಇವುಗಳಲ್ಲಿ ಒಂದನ್ನು ಮತ್ತೊಂದೆಂದು ಭಾವಿಸಿಕೊಂಡಮಾತ್ರದಿಂದ ಆತ್ಮದಲ್ಲಾಗಲಿ ಅನಾತ್ಮದಲ್ಲಾಗಲಿ ಯಾವ ಹೆಚ್ಚು ಕಡಿಮೆಯೂ ಆಗುವದಿಲ್ಲ. ಆದ್ದರಿಂದಲೇ

**'ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ॥**

**ಯಾವದರಲ್ಲಿ ಯಾವದರ ಅಧ್ಯಾಸವಾಗಿರುವದೋ ಅದರಿಂದಾದ ದೋಷದಿಂದಲಾಗಲಿ, ಗುಣದಿಂದಲಾಗಲಿ ಒಂದಿಷ್ಟೂ ಅದು ಸಂಬಂಧಿಸಿರುವದಿಲ್ಲ** - ಎಂದು ಆಚಾರ್ಯರು ಬರೆದಿರುತ್ತಾರೆ. ಇದು ಬಹಳ ಮುಖ್ಯವಾದ ನಿರ್ಣಯ. ಮರುಭೂಮಿಯಲ್ಲಿ ಕಲ್ಪನೆಯಿಂದ ಕಾಣುವ ಬಿಸಿಲುಕುದುರೆಯ ನೀರಿನಿಂದ ಆ ನೆಲವೇನೂ ಕೆಸರಾಗಿರುವದಿಲ್ಲ; ಕಪ್ಪೆಯಚಿಪ್ಪಿನಲ್ಲಿ ಕಲ್ಪಿತವಾಗಿರುವ ಬೆಳ್ಳಿಯಿಂದ ಆ ಕಪ್ಪೆಯಚಿಪ್ಪಿಗೆ ಹೆಚ್ಚಿನ ಬೆಲೆಯೇನೂ ಬಂದಿರುವದಿಲ್ಲ - ಅಲ್ಲವೆ ? ಅತ್ಯಂತ ಸ್ಪಷ್ಟವಾಗಿರುವ ಈ ವಿಷಯವನ್ನು ಮನಸ್ಸಿನಲ್ಲಿಟ್ಟರೆ ಅದ್ವಿತೀಯಪರಮಾರ್ಥಸತ್ಯಸ್ವರೂಪನಾಗಿರುವ ಆತ್ಮನಲ್ಲಿ ಅನೃತವಾದ ಕರ್ತೃತ್ವ ಭೋಕ್ತೃತ್ವಸುಖದುಃಖಾದಿರೂಪವಾದ ಅನಾತ್ಮಧರ್ಮವು ಅಧ್ಯಸ್ತವಾಗಿರುವ ಮಾತ್ರದಿಂದ ಅವನಲ್ಲಿ ಯಾವ ದೋಷವೂ ಉಂಟಾಗಿರುವದಿಲ್ಲ. ಹೀಗೆ ಅಧ್ಯಾಸವಾಗಿರುವಾಗಲೂ ಆತ್ಮನು ನಿತ್ಯಶುದ್ಧಚೈತನ್ಯಸ್ವರೂಪನೇ ಆಗಿರುತ್ತಾನೆ - ಎಂದು ನಿಶ್ಚಿತವಾಗುತ್ತದೆ. ಅಹಂಕಾರ, ಇಂದ್ರಿಯಗಳು, ಶರೀರ, - ಮುಂತಾದವುಗಳಲ್ಲಿ ಆತ್ಮತ್ವವು ಅಧ್ಯಸ್ತವಾಗಿರುವದರಿಂದ ಎಂದರೆ ಅಹಂಕಾರವೇ ಮುಂತಾದವುಗಳನ್ನೇ ಜನರು ನಾನು ಎಂದುಕೊಂಡಿರುವದರಿಂದ - ಅವುಗಳಲ್ಲಿ ಯಾವ ಹೆಚ್ಚಿನ ಗುಣವೂ ಬಂದಿರುವದಿಲ್ಲ. ಹೀಗೆ ಅವುಗಳಲ್ಲಿ ಆತ್ಮಚೈತನ್ಯವು ಅಧ್ಯಸ್ತವಾಗಿರುವಾಗಲೂ ಅವು ಅನೃತವಾದ ಅಚೇತನವಾದ ತೋರಿಕೆಗಳು ಮಾತ್ರವೇ ಆಗಿರುತ್ತವೆ -

ಎಂದೂ ನಿಶ್ಚಯವಾಗುತ್ತದೆ. ಬೇರೆಬೇರೆಯ ದೇಹಾದಿಗಳಿಂದೊಡಗೂಡಿ ನಾನಾ ರೂಪದಿಂದಿರುವಂತೆ ಕಾಣುವ ಆತ್ಮನು ಈ ಅಧ್ಯಾಸದಿಂದ ನಿಜವಾಗಿ ಅನೇಕಾತ್ಮರಾಗಿರುವದಿಲ್ಲ, ಅವನು ಈಗಲೂ ಒಬ್ಬನೇ ಆತ್ಮನಾಗಿರುತ್ತಾನೆ - ಎಂದೂ ನಿಶ್ಚಿತವಾಗುತ್ತದೆ. ಇದೇ ಆತ್ಮೈಕತ್ವವಿದ್ಯೆ.

## ಅಧ್ಯಾಸವು ಅನುಭವಸಿದ್ಧ

**ಪ್ರಶ್ನೆ :** ಈ ಅಧ್ಯಾಸವನ್ನು ಯಾವ ಪ್ರಮಾಣದಿಂದ ಗೊತ್ತುಮಾಡಿಕೊಳ್ಳಬೇಕು? ಪ್ರಮಾಣದಿಂದ ಸಿದ್ಧವಾದರಲ್ಲವೆ, ಆತ್ಮನಲ್ಲಿ ಮಿಕ್ಕದ್ದೆಲ್ಲವೂ ಅಧ್ಯಸ್ತವಾಗಿದೆಯೆಂಬುದಾಗಲಿ, ಅನಾತ್ಮದಲ್ಲಿ ಆತ್ಮತ್ವವು ಅಧ್ಯಸ್ತವಾಗಿದೆ ಎಂಬುದಾಗಲಿ ನಿರ್ಣಯವಾಗಬೇಕು ?

**ಉತ್ತರ :** ಆತ್ಮನಲ್ಲಿ ಮಿಕ್ಕದ್ದೆಲ್ಲವೂ ಅಧ್ಯಸ್ತವಾಗಿದೆ ಎಂದು ಈವರೆಗಿನ ವಿಚಾರದಿಂದ ನಿರ್ಣಯವಾಗಿರುತ್ತದೆ. ಆದ್ದರಿಂದ ಅನಾತ್ಮವಾದ ಪ್ರಮಾಣಗಳೂ ಅವಿದ್ಯೆಯಿಂದ ಅಧ್ಯಸ್ತವಾದವುಗಳೇ ಎಂದು ತಾನೇ ಏರ್ಪಡುತ್ತದೆ. ಹೀಗಿರುವದರಿಂದ ಅಧ್ಯಾಸದ ಮರಿಗಳಾಗಿರುವ ಪ್ರಮಾಣಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಸವನ್ನು ಗೊತ್ತುಪಡಿಸುವದಕ್ಕೆ ಹೋಗುವದು ಸರಿಯಲ್ಲ.

**ಪ್ರಶ್ನೆ :** - ಇದೇನು? ಆತ್ಮನಿಗೂ ಪ್ರಮಾಣವಿಲ್ಲ, ಅನಾತ್ಮಕ್ಕೂ ಪ್ರಮಾಣವಿಲ್ಲ, ಆತ್ಮಾನಾತ್ಮರುಗಳ ಅಧ್ಯಾಸಕ್ಕೂ ಪ್ರಮಾಣವಿಲ್ಲ - ಎಂದಂತೆ ಆಯಿತಲ್ಲ ! ಹಾಗಾದರೆ ಆತ್ಮಾನಾತ್ಮರ ಅಧ್ಯಾಸವಾಗಿದೆ ಎಂದು ನಿಶ್ಚಯವಾದದ್ದಾದರೂ ಹೇಗೆ?

**ಉತ್ತರ :-** ಈವರೆಗೆ ನಾವು ವಿಚಾರಮಾಡಿರುವದನ್ನು ಮರೆಯದೆ ಸಾವಧಾನವಾಗಿ ಮನಸ್ಸಿನಲ್ಲಿ ಹೊರಳಾಡಿಸಿದರೆ ಈ ಶಂಕೆಯು ಹಾರಿಹೋಗುವದು, (೧) **ಆತ್ಮನು ಸ್ವಯಂಪ್ರಸಿದ್ಧನಾಗಿರುತ್ತಾನೆ, ಅಪರೋಕ್ಷನಾಗಿರುತ್ತಾನೆ** - ಎಂಬುದನ್ನು ಮೊದಲು ಮನದಂದುಕೊಳ್ಳಬೇಕು. ಆತ್ಮನಿಗೆ ಯಾವ ಪ್ರಮಾಣವೂ ಬೇಡ ; ಯಾವ ಪ್ರಮಾಣವೂ ಆತ್ಮನನ್ನು ಸಿದ್ಧಪಡಿಸಲಾರದು. ಏಕೆಂದರೆ ಪ್ರಮಾಣಗಳೆಲ್ಲವನ್ನೂ ಆತ್ಮನ ಚೈತನ್ಯವೇ ಬೆಳಗುತ್ತಿರುತ್ತದೆ. (೨) **ಪ್ರಮಾಣಗಳೇ ಆತ್ಮಚೈತನ್ಯರೂಪವಾದ ಅನುಭವದಿಂದ ಸಿದ್ಧವಾಗಿವೆ. ಇದರಂತೆ (೩) ಅಧ್ಯಾಸವೂ - ಎಂದರೆ ಆತ್ಮಾನಾತ್ಮರ ಅವಿವೇಕವೂ-ಅನ್ಯೋನ್ಯಾಧ್ಯಾಸರೂಪವಾದ ಮಿಥ್ಯಾಜ್ಞಾನವೂ ಅನುಭವಸಿದ್ಧವಾಗಿದೆ. (೪) ಆತ್ಮನು ಒಬ್ಬನೇ, ಅವನಲ್ಲಿ ಯಾವ ಅನಾತ್ಮಸಂಬಂಧವೂ ನಿಜವಾಗಿಲ್ಲ ಎಂಬ ಆತ್ಮೈಕತ್ವವಿದ್ಯೆಯೂ ಆತ್ಮರೂಪವಾದ ಅನುಭವದಿಂದಲೇ ಗೊತ್ತಾಗಬೇಕಾಗಿದೆ.**

**ಪ್ರಶ್ನೆ :-** ಈಗ ಮತ್ತೊಂದು ಶಂಕೆ ಉಂಟಾಗುತ್ತದೆ. ಎಲ್ಲಾಶಾಸ್ತ್ರಗಳೂ ಪ್ರಮಾಣವನ್ನು ಒಪ್ಪಿಕೊಂಡೇ ವಿಚಾರಮಾಡುತ್ತವೆ. ಪ್ರಮಾಣದಿಂದ ನಿಶ್ಚಿತವಾದದ್ದನ್ನೇ ನಾವು ಸರಿಯಾದ

ತಿಳಿವಳಿಕೆಯೆಂದೂ ಅದಿಲ್ಲದಿರುವ ಅಥವಾ ಅದಕ್ಕೆ ವಿರುದ್ಧವಾಗಿರುವ ತಿಳಿವಳಿಕೆಯನ್ನು ತಪ್ಪು ತಿಳಿವಳಿಕೆಯೆಂದೂ ಎಲ್ಲರೂ ಕರೆಯುತ್ತಿದ್ದಾರೆ. ಪ್ರಮಾಣಗಳು ಪ್ರಮಾಣಸಿದ್ಧವೋ, ಅಲ್ಲವೊ? - ಎಂದು ವಿಚಾರಿಸುವವರು ಯಾರೂ ಇಲ್ಲ. ದೀಪವನ್ನು ಕಾಣುವದಕ್ಕೆ ಮತ್ತೊಂದು ದೀಪವು ಹೇಗೆ ಬೇಡವೋ ಹಾಗೆ ಪ್ರಮಾಣಗಳನ್ನು ಸರಿಯೋ, ತಪ್ಪೋ ? - ಎಂದು ವಿಚಾರಮಾಡುವದಕ್ಕೆ ಮತ್ತೊಂದು ಆಧಾರವು ಬೇಕಿರುವದೂ ಇಲ್ಲ. ಪ್ರಮಾಣವೇ ಇಲ್ಲದಿದ್ದರೆ ವಿಚಾರವಾದರೂ ಸಾಗುವದು ಹೇಗೆ ? ವೇದಾಂತಶಾಸ್ತ್ರವಾದರೂ ಪ್ರಮಾಣಗಳನ್ನು ಲೆಕ್ಕಿಸದೆ ಉಪದೇಶಿಸುವದಕ್ಕೆ ಹೊರಟರೆ ಜನರು ಅದರ ಹೇಳಿಕೆಯು ಸಪ್ರಮಾಣವೊ, ಅಲ್ಲವೊ ?- ಎಂದು ಕೇಳುವದು ನಿಶ್ಚಿತ. ಆದ್ದರಿಂದ ಪ್ರಮಾಣವೇ ಇಲ್ಲದೆ ಯಾವ ತತ್ತ್ವವಾದರೂ ಹೇಗೆ ಸಿದ್ಧವಾದೀತು ?

**ಉತ್ತರ** :- ಹೆದರಬೇಡಿರಿ, ನಾವೇನೂ ಪ್ರಮಾಣಗಳಿಂದಾಗುವ ಲಾಭವನ್ನು ಅಲ್ಲಗಳೆದಿಲ್ಲ. ಜನರ ಸಾಮಾನ್ಯ ವ್ಯವಹಾರಕ್ಕೂ ನಮ್ಮ ಜ್ಞಾನಕ್ಕೆ ವಿಷಯವಾಗಿರುವ ಹೊರಗಿನ ವಿಷಯಗಳ ತತ್ತ್ವವನ್ನು ನಿರ್ಧರಿಸುವ ಶಾಸ್ತ್ರಗಳಿಗೂ ಅವಶ್ಯವಾಗಿ ಪ್ರತ್ಯಕ್ಷಾದಿಪ್ರಮಾಣಗಳು ಬೇಕೇಬೇಕು. ಜನರು ಆ ಕೆಲಸಕ್ಕೆ ಅವನ್ನು ಬಳಸಿಕೊಳ್ಳುತ್ತಲೂ ಇರುತ್ತಾರೆ. ವೇದವು ಪ್ರಮಾಣವೆಂದು ನಂಬಿರುವ ಆಸ್ತಿಕರಿಗಾಗಿ ಮೀಮಾಂಸಾಶಾಸ್ತ್ರವು ಅತೀಂದ್ರಿಯವಾಗಿರುವ ಧರ್ಮ, ಅಧರ್ಮ, ಸ್ವರ್ಗ - ಮುಂತಾದವುಗಳ ನಿಜವನ್ನು ಗೊತ್ತುಪಡಿಸುವದಕ್ಕೆಂದು ಶಬ್ದಪ್ರಮಾಣವನ್ನು ಬಳಸುತ್ತಿದೆ - ಎಂಬುದೂ ನಿಜ. ಆದರೆ ಆತ್ಮಸ್ವರೂಪವನ್ನು ನಿರ್ಣಯಿಸುವದಕ್ಕೆ ಪ್ರಮಾಣದ ಆವಶ್ಯಕತೆಯಿಲ್ಲ ; ಅವುಗಳಿಂದ ಆತ್ಮನನ್ನು ವಿಷಯೀಕರಿಸಿ ಅವನ ತತ್ತ್ವವನ್ನು ನಿರ್ಧರಿಸುವದು ಆಗುವಂತೆಯೂ ಇಲ್ಲ. ಇದನ್ನು ಆಗಲೇ ನಿರ್ಣಯಿಸಿದ್ದಾಗಿದೆ. ಇದಲ್ಲದೆ ಪ್ರಮಾಣಗಳು ತಮ್ಮ ಪ್ರಮೇಯವಾಗಿರುವ ವಿಷಯಗಳ ಸ್ವರೂಪವನ್ನು ಗೊತ್ತುಪಡಿಸುವಾಗಲೂ ಆಯಾ ವಿಷಯದ ಅನುಭವವನ್ನುಂಟುಮಾಡಿಯೇ ಗೊತ್ತುಪಡಿಸುತ್ತವೆ. ಉದಾಹರಣೆಗೆ 'ಇದೊಂದು ಗಡಿಗೆ' ಎಂದು ಪ್ರತ್ಯಕ್ಷಪ್ರಮಾಣದಿಂದ ನಮಗೆ ಗೊತ್ತಾದ ಮೇಲೆ, ಇದು ಗಡಿಗೆ ಎಂಬ ಈ ಅನುಭವವು ಸರಿಯೋ , ಸರಿಯಲ್ಲವೊ ? - ಎಂದು ಸ್ಥಿರಪಡಿಸಿಕೊಳ್ಳುವದಕ್ಕೆ ಯಾರೊಬ್ಬರೂ ಮತ್ತೊಂದು ಪ್ರಮಾಣವನ್ನು ಹುಡುಕುವದಿಲ್ಲ. ಆದ್ದರಿಂದ ಪ್ರಮೇಯವಸ್ತುಗಳ **ಪ್ರಮಿತಿಯು ಪ್ರಮಾಣವನ್ನು ಬಯಸದೆ ಸಿದ್ಧವಾಗುತ್ತದೆ** ಎಂದಾಯಿತು. ಹೀಗೆಯೇ ಇದು ಪ್ರಮಾಣವೊ, ಅಲ್ಲವೊ ? - ಎಂದು ಗೊತ್ತುಪಡಿಸುವದಕ್ಕೆ ಅನುಭವವೇ ತೀರ್ಮಾನದ ನ್ಯಾಯಸ್ಥಾನವಾಗಿರುತ್ತದೆ. ಇದು ಪ್ರಮಾಣ, ಇದು ಅಪ್ರಮಾಣ - ಎಂಬುದನ್ನು ಅನುಭವವಲ್ಲದೆ ಮತ್ತೆ ಬೇರೆ ಯಾವದು ನಮಗೆ ತಿಳಿಸೀತು ? ಯಾವದೂ ಇಲ್ಲ. ಇನ್ನು ಪ್ರಮಾತೃವನ್ನು ನಿಶ್ಚಯಿಸುವದಕ್ಕೆ ಯಾರೊಬ್ಬರೂ ಪ್ರಮಾಣವನ್ನು ಬಯಸುವದಿಲ್ಲ. ಆದ್ದರಿಂದಲೇ ಆಚಾರ್ಯರುಮುಂದೆ (ಸೂ.ಭಾ ೨-೩-೭, ಭಾ.ಭಾ. ೯೯) **'ನ ಹ್ಯಾತ್ಮಾ ಆತ್ಮನಃ ಪ್ರಮಾಣಮಪೇಕ್ಷ್ಯ ಸಿದ್ಧ್ಯತಿ । ತಸ್ಯ ಹಿ**

**ಪ್ರತ್ಯಕ್ಷಾದೀನಿ ಪ್ರಮಾಣಾನಿ ಅಪ್ರಸಿದ್ಧಪ್ರಮೇಯಸಿದ್ಧಯೇ ಉಪಾದೀಯನ್ತೇ'** ಆತ್ಮನು ತನಗೇ ತಾನು ಪ್ರಮಾಣದಿಂದ ಸಿದ್ಧನಾಗುವದಿಲ್ಲ, ಅವನಿಗಲ್ಲವೆ, ಪ್ರಸಿದ್ಧವಾಗದೆ ಇರುವ ಪ್ರಮೇಯವು ಸಿದ್ಧಿಯಾಗುವದಕ್ಕಾಗಿ ಪ್ರತ್ಯಕ್ಷಾದಿಪ್ರಮಾಣಗಳನ್ನು ತೆಗೆದುಕೊಳ್ಳುವದು ? - ಎಂದಿರುತ್ತಾರೆ. ಆದ್ದರಿಂದ **ಪ್ರಮಾತೃಸಿದ್ಧಿಗೂ ಪ್ರಮಾಣವು ಬೇಡ** ಎಂದಾಯಿತು. ನೀವು ಹೇಳಿರುವಂತೆ **ಪ್ರಮಾಣವೂ ಪ್ರಮಾಣಾಂತರಸಿದ್ಧವಲ್ಲ. ಅದೂ ಪ್ರಮಾತೃತ್ವದಂತೆ ಅನುಭವಸಿದ್ಧವಾಗಿರುತ್ತದೆ. ಇನ್ನೊಂದು ಮಾತು. ಪ್ರಮಾತೃ ಪ್ರಮಾಣ ಪ್ರಮೇಯ ವ್ಯವಹಾರವೆಲ್ಲವೂ ಅವಿದ್ಯೆಯನ್ನು ಮುಂದುಮಾಡಿಕೊಂಡಿರುವ ವ್ಯವಹಾರವಾಗಿರುತ್ತದೆ - ಎಂಬುದನ್ನು ಲಕ್ಷ್ಯದಲ್ಲಿಟ್ಟರೆ ಅವಿದ್ಯೆಗೆ ಪ್ರಮಾಣವೇನು ? - ಎಂಬ ಪ್ರಶ್ನೆಯೇ ಹುಟ್ಟುವದಿಲ್ಲ.** ಆದ್ದರಿಂದ ಅವಿದ್ಯೆಯು ಅನುಭವಸಿದ್ಧವೇ ಹೊರತು, ಪ್ರಮಾಣಸಿದ್ಧವಲ್ಲ - ಎಂದದ್ದು ಸರಿ.

## ಪ್ರಮಾಣಪ್ರಮೇಯವ್ಯವಹಾರವು ಅವಿದ್ಯಾಕ್ಷೇತ್ರದಲ್ಲಿ

**ಪ್ರಶ್ನೆ** ಪ್ರಮಾಣದಿಂದ ನಿಶ್ಚಿತವಾದದ್ದನ್ನೇ ಅಲ್ಲವೆ, ನಿಜವೆಂದು ಜನರು ನಂಬುತ್ತಾರೆ? ಹೀಗಿರುವಲ್ಲಿ ಪ್ರಮಾಣಾದಿ ವ್ಯವಹಾರವು ಅವಿದ್ಯಾಪೂರ್ವಕವೆಂದದ್ದು ಹೇಗೆ ಸರಿ ?

**ಉತ್ತರ : -** ಇಲ್ಲಿ **'ಅವಿದ್ಯೆ'** ಎಂಬ ಶಬ್ದದ ಪಾರಿಭಾಷಿಕಾರ್ಥವನ್ನು ನೀವು ಮರೆತದ್ದರಿಂದ ಈ ಶಂಕೆಯುಂಟಾಯಿತು. 'ಪ್ರಮಾಣದಿಂದಾದ ಸರಿಯಾದ ತಿಳಿವಳಿಕೆಯು ವಿದ್ಯೆ - ಸರಿಯಾದದ್ದು ; ಅಪ್ರಮಾಣಕ್ಕೆ ವಿಷಯವಾಗಿರುವ - ಅರಿಯದಿರುವದು, ಸಂಶಯಿತವಾಗಿ ತಿಳಿಯುವದು, ತಪ್ಪಾಗಿಯೇ ತಿಳಿಯುವದು - ಎಂಬಿವಕ್ಕೆ ಗೋಚರವಾದ ವಸ್ತುವಿನ ಜ್ಞಾನವು ಅವಿದ್ಯೆ' ಎಂಬುದು ವ್ಯವಹಾರದಲ್ಲಿ ಸುಳ್ಳಲ್ಲ. **ಆದರೆ ವೇದಾಂತದಲ್ಲಿ ಅವಿದ್ಯೆ ಎಂಬ ಶಬ್ದವನ್ನು** ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸ ಎಂಬರ್ಥದಲ್ಲಿ ಪಾರಿಭಾಷಿಕವಾಗಿ ಬಳಸಿರುತ್ತದೆ. ಇಲ್ಲಿ ವ್ಯವಹಾರದಲ್ಲಾಗುವ ವಿದ್ಯಾವಿದ್ಯೆಗಳೆರಡೂ ಅವಿದ್ಯೆ - ಎಂದೇ ವ್ಯವಹೃತವಾಗುತ್ತದೆ ; **ಆತ್ಮಸ್ವರೂಪವನ್ನು ನಿರ್ಧಾರಣಮಾಡುವದೊಂದೇ ವಿದ್ಯೆ.** ಕನಸಿನಲ್ಲಿ ಇದು ಸರಿಯಾದ ತಿಳಿವಳಿಕೆ, ಇದು ತಪ್ಪುತಿಳಿವಳಿಕೆ - ಎಂದು ವಿಂಗಡಿಸಿಕೊಂಡಿದ್ದ ಎರಡು ತಿಳಿವಳಿಕೆಗಳೂ ಕನಸಿನಲ್ಲಿಯೇ ಅಡಕವಾಗಿರುವುದರಿಂದ ಹೇಗೆ ಎಚ್ಚರದ ದೃಷ್ಟಿಯಿಂದ ಅವಿದ್ಯೆಯೇ ಆಗಿಬಿಡುವವೋ ಹಾಗೆಯೇ ಆತ್ಮೈಕತ್ವದೃಷ್ಟಿಯಿಂದ ನೋಡಿದಾಗ ಪ್ರಮಾಣದಿಂದಾದ ಜ್ಞಾನ, ಅದರಿಂದಾಗದ ಅಥವಾ ಅದಕ್ಕೆ ವಿರುದ್ಧವಾದ ಜ್ಞಾನ - ಈ ಎರಡೂ ಅವಿದ್ಯೆಯೇ ಆಗಿರುತ್ತದೆ ಎನ್ನುವದರಲ್ಲಿ ಯಾವ ವಿರೋಧವೂ ಇಲ್ಲ.

ಈಗ ಪ್ರಮಾಣವ್ಯವಹಾರವೆಲ್ಲವೂ ಅವಿದ್ಯಾಪೂರ್ವಕವೇ ಎಂಬುದು ಹೇಗೆಂಬುದನ್ನು ಆಚಾರ್ಯರ ವಾಕ್ಯದಿಂದ ನಿರ್ಣಯಿಸುವದಕ್ಕೆ ಪ್ರಯತ್ನಿಸೋಣ. ಆಚಾರ್ಯರು ಇದನ್ನು

**'ದೇಹೇನ್ದ್ರಿಯಾದಿಷು ಅಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ'** ಎಂಬ ಸಂಗ್ರಹವಾಕ್ಯದಿಂದ ತಿಳಿಸಿದಮೇಲೆ ವಾಕ್ಯದ ಅಭಿಪ್ರಾಯವನ್ನು ತಾವೇ ವಿವರಿಸಿರುತ್ತಾರೆ. ಇಲ್ಲಿ ಪ್ರಮಾಣಾದಿಗಳು ಅವಿದ್ಯಾಪೂರ್ವಕವಾಗಿವೆ - ಎಂಬುದನ್ನೇ ಗೊತ್ತುಮಾಡಿಕೊಡ ಬೇಕಾಗಿರುವದರಿಂದ ಆಚಾರ್ಯರು ಈ ವಾಕ್ಯದಲ್ಲಿ ಯಾವ ಪ್ರಮಾಣವನ್ನೂ ಉದಾಹರಿಸಿಲ್ಲವೆಂಬುದು ತಾನೇ ಏರ್ಪಡುತ್ತದೆ. ಏಕೆಂದರೆ ಪ್ರಮಾಣದ ಸ್ವಭಾವವನ್ನು ಪ್ರಮಾಣದಿಂದಲೇ ನಿರ್ಣಯಿಸುವದಕ್ಕೆ ಹೋಗುವದು **'ಆತ್ಮಾಶ್ರಯ'** (ತನ್ನಿಂದಲೇ ತನ್ನನ್ನು ಸಿದ್ಧಿಮಾಡುವದಕ್ಕೆ ಹೊರಡುವದು) ಎಂಬ ತರ್ಕದೋಷಕ್ಕೆ ಪಕ್ಕಾಗುತ್ತದೆ. 'ನಾನು ನಿಜವನ್ನು ಹೇಳುತ್ತೇನೆ, ಏಕೆಂದರೆ ಹಾಗೆಂದು ನಾನೇ ಹೇಳುತ್ತೇನೆ' - ಎಂದರೆ ತನ್ನ ಯೋಗ್ಯತೆಯನ್ನು ತಾನೇ ಸಿದ್ಧಮಾಡಿಕೊಡುವದಕ್ಕೆ ಹೋದಂತಾಗುವದರಿಂದ, ಹೇಗೆ ನಿರಾಧಾರವೆಂದಾಗುವದೋ ಹಾಗೆ ಪ್ರಮಾಣದ ಸ್ವಭಾವವನ್ನು ಪ್ರಮಾಣದಿಂದಲೇ ನಿಶ್ಚಯಿಸುವದಕ್ಕೆ ಹೋಗುವದೂ ತನ್ನ ಹೆಗಲಮೇಲೆ ತಾನೇ ಕುಳಿತುಕೊಂಡನೆಂಬ ಮಾತಿನಂತೆ ಹಾಸ್ಯಾಸ್ಪದವಾಗುವದು. ಆದ್ದರಿಂದ ಆಚಾರ್ಯರು ಇಲ್ಲಿ ಯಾವ ಪ್ರಮಾಣವನ್ನೂ ಉದಾಹರಿಸಿಲ್ಲ ; ಅನುಭವವೇ ಇಲ್ಲಿರುವ ಯುಕ್ತಿಗೆ ಆಧಾರವೆಂದು ಹೇಳಿರುತ್ತಾರೆಂದು ತಿಳಿಯಬೇಕು. ಇದನ್ನು ಆಚಾರ್ಯರು ವಿವರಿಸಿರುವದರ ಸಾರವೇನೆಂದರೆ; ಇಂದ್ರಿಯಗಳನ್ನೇ ನಾವು ಪ್ರತ್ಯಕ್ಷಪ್ರಮಾಣವೆನ್ನುವೆವು, ಅವುಗಳಿಂದಾದ ಅರಿವನ್ನೇ ಪ್ರತ್ಯಕ್ಷಜ್ಞಾನವೆನ್ನುವೆವು. ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿ - ಎಂಬ ಪ್ರಮಾಣಗಳೆಲ್ಲವೂ ಇಂದ್ರಿಯವ್ಯವಹಾರವನ್ನು ಮುಂದುಮಾಡಿಕೊಂಡಿರುವದರಿಂದ ಪ್ರಮಾಣವ್ಯವಹಾರವೆಲ್ಲವೂ ಇಂದ್ರಿಯಪುರಸ್ಸರವಾಗಿದೆ - ಎಂದಾಯಿತು. ಆ ಇಂದ್ರಿಯಗಳಿಗೆ ಆಶ್ರಯವಾಗಿ ದೇಹವು ಬೇಕು. ಆದ್ದರಿಂದ ನಾನು ಪ್ರಮಾಣಗಳಾದ ಇಂದ್ರಿಯಗಳನ್ನು ಬಳಸುತ್ತೇನೆ ಎನ್ನುವದಕ್ಕಿಂತ ಮೊದಲು ದೇಹದಲ್ಲಿ ನಾನೆಂಬ ಅಧ್ಯಾಸವಾಗಿರಬೇಕು. ಇಷ್ಟೆಲ್ಲ ಆದಮೇಲೆಯೇ ಅಲ್ಲವೆ, ಒಬ್ಬು **ಪ್ರಮಾತೃ** ಎನಿಸಿಕೊಳ್ಳುತ್ತಾನೆ? ಆದ್ದರಿಂದ **ಪ್ರಮಾತೃತ್ವವು ಆತ್ಮನಲ್ಲಿ ದೇಹೇಂದ್ರಿಯಾದಿಗಳ ಅಧ್ಯಾಸವೆಂಬ ಅವಿದ್ಯೆಯಿಂದ ಆಗಿರುತ್ತದೆ ; ಆದ್ದರಿಂದ ಪ್ರಮಾತೃತ್ವ ಪೂರ್ವಕವಾಗಿ ಆಗುವ ಪ್ರಮಾಣವ್ಯಾಪಾರವೂ ಅವಿದ್ಯಾಪೂರ್ವಕವಾಗಿದೆ ಎಂದಾಯಿತು.**

**ಪ್ರಶ್ನೆ :** ಜನರು ಪ್ರತ್ಯಕ್ಷಾದಿವ್ಯವಹಾರದಲ್ಲಿ ತೊಡಗಿರುವಾಗ ತಾವು ದೇಹಾದಿಗಳಿಗಿಂತ ಬೇರೆಯಾಗಿರುವೆವೆಂದು ತಿಳಿದುಕೊಂಡೇ ವ್ಯವಹರಿಸುತ್ತಾರೆಂದು ಏತಕ್ಕೆ ತಿಳಿಯಬಾರದು ? ದೇಹವನ್ನು ತಾವೆಂದೂ ಇಂದ್ರಿಯಗಳನ್ನು ತಮ್ಮವೆಂದೂ ತಿಳಿಯುವಷ್ಟು ಅವಿವೇಕಿಗಳಾಗಿದ್ದುಕೊಂಡು ವ್ಯವಹರಿಸುತ್ತಾರೆಂದೇಕೆ ತಿಳಿಯಬೇಕು?

**ಉತ್ತರ :** ಜನರು ಪ್ರತ್ಯಕ್ಷಾದಿವ್ಯವಹಾರದಲ್ಲಿ ಹೇಗೆ ತೊಡಗುತ್ತಾರೆಂಬುದನ್ನು ಪರಿಶೀಲಿಸಿದರೆ ಇದು ಸ್ಪಷ್ಟವಾಗುವದು. ಆಚಾರ್ಯರು ಇದನ್ನೊಂದು ವಾಕ್ಯದಿಂದ

ಸ್ಫುಟಗೊಳಿಸಿರುತ್ತಾರೆ : **'ಪಶ್ವಾದಿಭಿಶ್ಚಾವಿಶೇಷಾತ್ '** ಪಶುಪಕ್ಷಿಮೃಗಾದಿಗಳು ಹೇಗೆ ಪ್ರತ್ಯಕ್ಷಾದಿ ಪ್ರಮಾಣಗಳನ್ನು ಬಳಸಿಕೊಂಡು ವ್ಯವಹರಿಸುತ್ತಿರುವವೋ ಹಾಗೆಯೇ ಮನುಷ್ಯರೂ ವ್ಯವಹರಿಸುತ್ತಿರುವರು. ಪಶ್ವಾದಿಗಳು ಇಂದ್ರಿಯಪ್ರಮಾಣದಿಂದ ವಿಷಯದ ಜ್ಞಾನವಾದ ಬಳಿಕ 'ಇದು ಇಷ್ಟವಾದದ್ದು' ಎಂದಾದರೆ ಮುನ್ನುಗ್ಗುತ್ತವೆ ; ಅನಿಷ್ಟವೆಂದಾದರೆ ಹಿಂಜಗ್ಗುತ್ತವೆ. ಉದಾಹರಣೆಗೆ ಕೈಯಲ್ಲಿ ಹಸಿರುಹುಲ್ಲನ್ನು ಹಿಡಿದುಕೊಂಡಿರುವವನನ್ನು ಕಂಡರೆ ಅವನ ಕಡೆಗೆ ಬರುತ್ತವೆ, ದೊಣ್ಣೆಯನ್ನು ಎತ್ತಿ ಹಿಡಿದುಕೊಂಡಿರುವವನನ್ನು ಕಂಡರೆ ಅತ್ತ ಸರಿಯುತ್ತವೆ. ಹೀಗೆ ಅವು ಮಾಡುವಾಗ ಅದು ನಿಜವಾಗಿ ಹಸಿರುಹುಲ್ಲಾಗಿರಬೇಕೆಂದೂ, ದೊಣ್ಣೆಯನ್ನು ಎತ್ತಿಹಿಡಿದುಕೊಂಡಿರುವವನು ಮನುಷ್ಯನೇ ಆಗಿರಬೇಕೆಂದೂ ನಿಯಮವೇನೂ ಇಲ್ಲ. ಚಿತ್ರದಲ್ಲಿ ಬರೆದಿರುವ ದ್ರಾಕ್ಷಿಹಣ್ಣನ್ನು ತಿನ್ನುವದಕ್ಕೆ ಹೋಗುವ, ಹೊಲದಲ್ಲಿ ಮನುಷ್ಯನ ಆಕಾರದಲ್ಲಿ ಮಾಡಿಟ್ಟಿರುವ ಗೊಂಬೆಯನ್ನು ನೋಡಿ ಅಲ್ಲಿಂದ ಓಡುವ ಹಕ್ಕಿಗಳನ್ನು ನಾವು ಕಂಡಿರುತ್ತೇವಲ್ಲವೆ? ಆದ್ದರಿಂದ ಪಶ್ವಾದಿಗಳ ವ್ಯವಹಾರವು ವಿವೇಕಪುರಃಸರವಲ್ಲವೆಂಬುದು **ಇದರಂತೆ ಮನುಷ್ಯರೂ ರೂಪಾಯಿ ಇರಬಹುದೆಂದು ಬಗೆದು ತವರದ ತಗಡಿನ ಕಡೆಗೆ ಅದನ್ನು ತೆಗೆದುಕೊಳ್ಳೋಣವೆಂಬ ಬುದ್ಧಿಯಿಂದ ಹೋಗುವದು, ದೂರಕ್ಕೆ ಹಾವಿನಂತೆ ಕಂಡ ಹಗ್ಗಕ್ಕೆ ಹೆದರಿ ಹಿಂಜರಿಯುವದು - ಇವೇ ಮುಂತಾದ ವ್ಯವಹಾರಗಳಲ್ಲಿ ತೊಡಗಿರುವದು ಕಂಡುಬರುವದರಿಂದ, ಇದು ಒಳ್ಳೆಯದೆಂಬ ಭಾವನೆಯಿಂದ ವಿಷಯದ ಕಡೆಗೆ ಮುನ್ನುಗ್ಗುವದೂ ಕೆಟ್ಟದ್ದೆಂಬ ಭಾವನೆಯಿಂದ ಹಿಂಜಗ್ಗುವುದೂ ಅವರಿಗೂ ಪಶ್ವಾದಿಗಳಂತೆಯೇ ಸ್ವಭಾವದಿಂದ ಆಗಿರುತ್ತದೆ ಎಂದು ತೀರ್ಮಾನಿಸಬೇಕಾಗಿರುತ್ತದೆ. ಆದ್ದರಿಂದ ಜನರಿಗೆ ಪ್ರತ್ಯಕ್ಷಾದಿಗಳಿಂದಾಗುವ ಪ್ರವೃತ್ತಿನಿವೃತ್ತಿರೂಪವಾದ ವ್ಯವಹಾರವು ಆ ವ್ಯವಹಾರದ ಕಾಲಕ್ಕೆ ಪಶ್ವಾದಿಗಳ ವ್ಯವಹಾರದಂತೆಯೇ ಅವಿವೇಕಪೂರ್ವಕವಾಗಿ ಸ್ವಭಾವದಿಂದಲೇ ಆಗುತ್ತದೆ** ಎಂದು ನಿಶ್ಚಯಿಸಬೇಕಾಗಿದೆ. ಆದ್ದರಿಂದ ಪ್ರಮೇಯದ ವಿಷಯದಲ್ಲಾಗುವ ಜ್ಞಾನದಿಂದುಂಟಾಗುವ ವ್ಯವಹಾರವು ಹೇಗೆ ಅವಿವೇಕಪೂರ್ವಕವಾಗಿರುತ್ತದೋ ಪ್ರಮಾತೃಸ್ವರೂಪದಲ್ಲಾಗಿರುವ ಕರ್ತೃಭೋಕ್ತೃತ್ವ ವ್ಯವಹಾರವೂ ಹಾಗೆಯೇ ಅವಿವೇಕಪುರಃಸ್ಸರವಾಗಿರಬೇಕೆಂದು ಊಹಿಸಬಹುದಾಗಿರುತ್ತದೆ.

## ಶಾಸ್ತ್ರ ಪ್ರವೃತ್ತಿಯೂ ಅವಿದ್ಯಾಪುರಃಸರವೇ

**ಪ್ರಶ್ನೆ :-** ಲೋಕದಲ್ಲಿ ಸಾಮಾನ್ಯಜನರ ಪ್ರವೃತ್ತಿಗಳು ಹೀಗೆ ಅವಿದ್ಯಾಪೂರ್ವಕವಾಗಿರಬಹುದು. ಆದರೆ ವಿವೇಕಿಗಳಾದ ವಸ್ತುಪರೀಕ್ಷಕರೂ ಹಾಗೆಯೇ ವ್ಯವಹರಿಸುತ್ತಾರೆಂದು ಏಕೆ ನಿಶ್ಚಯಿಸಬೇಕು ? ಭೌತಿಕವಿಜ್ಞಾನ ಶಾಸ್ತ್ರದ ತಿಳಿವಳಿಕೆಯಿಂದ ಭೂಜಲವಾಯ್ವಾಕಾಶಗಳ ಜ್ಞಾನವನ್ನು ಸಂಪಾದಿಸಿಕೊಂಡು ಹೊಸ ಹೊಸ ಶೋಧಗಳನ್ನು ಮಾಡಿರುವ

ಮಹನೀಯರಿಲ್ಲವೆ? ವೇದದಲ್ಲಿ ಹೇಳಿರುವ ಪರಲೋಕಾದಿಗಳಲ್ಲಿ ತಮಗೆ ಸಿದ್ಧಿಸುವ ಉತ್ತಮ ಫಲಗಳನ್ನು ಶಾಸ್ತ್ರದಿಂದ ತಿಳಿದುಕೊಂಡು ಆ ಫಲಗಳಿಗೆ ಸಾಧನವೆಂದು ವಿಹಿತಕರ್ಮಗಳನ್ನು ಮಾಡುವ ಮಹನೀಯರನ್ನೂ ಅವಿದ್ಯಾವಂತರೆನ್ನಬಹುದೆ ? ಅಂಥ ಅತೀಂದ್ರಿಯ ಫಲದ ವಿಷಯವನ್ನು ಉಪದೇಶಿಸುವ ಶಾಸ್ತ್ರವೂ ಅವಿದ್ಯಾವಂತರಿಗೋಸ್ಕರವಾಗಿ ಹೊರಟಿದೆ ಎನ್ನಬಹುದೆ ?

**ಉತ್ತರ :-** ವಿವೇಕದಿಂದ ವಿಚಾರಮಾಡಿಕೊಂಡು ವಸ್ತುಶೋಧಗಳನ್ನು ಮಾಡುವವರು ಇಲ್ಲವೆಂದೇನೂ ನಾವು ಹೇಳಲಿಲ್ಲ. ಎಂಥ ವಿವೇಕಿಗಳೇ ಆಗಲಿ, ಕರ್ಮಗಳಲ್ಲಿ ತೊಡಗುವಾಗ ವಿವೇಕಪೂರ್ವಕವಾಗಿಯೇ ತೊಡಗುತ್ತಾರೆಂಬ ನಿಯಮವಿಲ್ಲ. ಹಾಗೆ ತೊಡಗುವೆವೆಂಬ ಸಂಕಲ್ಪವು ಕೆಲವರಿಗೆ ಕರ್ಮದಲ್ಲಿ ತೊಡಗುವ ಮುಂಚೆ ಇರಬಹುದು ; ಆದರೆ ವ್ಯವಹಾರದಲ್ಲಿ ತೊಡಗಿರುವಾಗಲೂ ಅವರಿಗೆ ವಿವೇಕಪೂರ್ವಕವಾಗಿಯೇ ಪ್ರವೃತ್ತಿಯಾಗುತ್ತಿರುವದೆಂದು ಯಾರೂ ಹೇಳಲಾರರು. ಹಾಗಿದ್ದರೆ ತಾವು ಮಾಡಿರುವ ಹಡಗುಗಳ ಸಮೇತವಾಗಿಯೇ ಸಮುದ್ರದಲ್ಲಿ ಮುಳುಗಿಹೋಗುವವರೂ ವಾಯುವಿಮಾನಗಳಿಂದ ಕೆಳಕ್ಕುರುಳಿದವರೂ ಆಕಾಶದ ಮೇಲಕ್ಕೇರಿದ ಮೇಲೆ ತಮ್ಮ ಕೈ ಮೀರಿದ ಆಕಾಶಯಾನಗಳಿಂದ ಮಂಕಾದವರೂ ಇರುತ್ತಿರಲಿಲ್ಲ. ಇದಂತಿರಲಿ, ಪ್ರಮೇಯದ ವಿವೇಕವನ್ನು ಸ್ವಲ್ಪಮಟ್ಟಿಗೆ ಮಾಡಿಕೊಂಡವರಿಗೂ ತಮ್ಮ ಆತ್ಮಸ್ವರೂಪದ ವಿಷಯಕ್ಕೆ ಅವಿದ್ಯೆಯು ವ್ಯವಹಾರದಲ್ಲಿದ್ದೇ ಇರುತ್ತದೆ - ಎಂಬುದು ನಿಶ್ಚಿತ.

ಇನ್ನು ಸ್ವರ್ಗಾದಿಗಳಲ್ಲಿ ತಮಗೆ ದಿವ್ಯಭೋಗವು ದೊರಕುವದೆಂಬ ನಂಬಿಕೆಯುಂಟಾಗಿ ದೇಹಾದಿಗಳಿಗಿಂತ ತಮ್ಮ ಆತ್ಮಸ್ವರೂಪವು ಬೇರೆಯಾಗಿದೆ ಎಂಬ ಜ್ಞಾನವನ್ನು ನಂಬಿಕೆಯಿಂದ ಸಂಪಾದಿಸಿಕೊಂಡವರು ಕೂಡ ನಿಜವಾಗಿ ಆತ್ಮಸ್ವರೂಪವನ್ನು ಅರಿತಂತೆ ಅಲ್ಲ. ಏಕೆಂದರೆ ವೇದಾಂತದಲ್ಲಿ ತಿಳಿಸಿಕೊಟ್ಟಿರುವ ಆತ್ಮಸ್ವರೂಪದ ಜ್ಞಾನವು ಅವರಿಗೂ ಇರುವದಿಲ್ಲ. ವೇದಾಂತದಲ್ಲಿ ಹೇಳಿರುವ ಆತ್ಮಸ್ವರೂಪವು ಹೇಗಿರುತ್ತದೆ ? - ಎಂಬುದನ್ನು ಆಚಾರ್ಯರು ಹೀಗೆಂದು ಬರೆದಿರುತ್ತಾರೆ. :

**'ಅಶನಾಯಾದ್ಯತೀತಮ್, ಅಪೇತಬ್ರಹ್ಮಕ್ಷತ್ರಾದಿಭೇದಮ್, ಅಸಂಸಾರ್ಯಾತ್ಮ ತತ್ತ್ವಮ್'**

ಈ ವಾಕ್ಯದಲ್ಲಿರುವ ವಿಶೇಷಣಗಳಿಂದ ಸೂಚಿತವಾಗಿರುವ ವೇದಾಂತ ವಾಕ್ಯಗಳಿವು :

(१) योऽशनायापिपासे शोकं मोहं जरां मृत्युमत्येति ॥

बृ. ३-५-१.

(२) ब्रह्म तं परादाद् योऽन्यत्राऽऽत्मनो ब्रह्म वेद, क्षत्रं तं परादाद् योऽन्यत्राऽऽत्मनो क्षत्रं वेद, लोकास्तं परादुर्योऽन्यत्राऽऽत्मनो लोकान् वेद, देवास्तं परादुर्योऽन्यत्राऽऽत्मनो

देवान् वेद, भूतानि तं परादुर्योऽन्यत्राऽऽत्मनो भूतानि वेद, सर्वंतं परादाद् योऽन्यत्रात्मनः सर्वंवेद ॥

बृ. २-४-६.

ಆತ್ಮನಿಗೆ ಹಸಿವು ನೀರಡಿಕೆಗಳೆಂಬ ಪ್ರಾಣಧರ್ಮಗಳಿರುವದಿಲ್ಲ; ಶೋಕಮೋಹಗಳೆಂಬ ಮನೋಧರ್ಮಗಳಿರುವದಿಲ್ಲ ; ಮುಪ್ಪುಸಾವುಗಳೆಂಬ ದೇಹಧರ್ಮಗಳೂ ಇರುವದಿಲ್ಲ. ಏಕೆಂದರೆ ಅವನ ಸ್ವಭಾವವು ದೇಹಪ್ರಾಣಮನಗಳನ್ನು ಮೀರಿರುವದು ; ಈ ಧರ್ಮಗಳನ್ನು ಅವಿವೇಕಿಗಳು ಆತ್ಮನಲ್ಲಿ - ಆಕಾಶದಲ್ಲಿ ನೀಲವರ್ಣವನ್ನು ಅಧ್ಯಾರೋಪಮಾಡಿಕೊಂಡು 'ಆಕಾಶವು ನೀಲವಾಗಿದೆ' ಎಂದು ಬಗೆಯುವಂತೆ - ಅಧ್ಯಾರೋಪಿಸಿಕೊಂಡಿರುತ್ತಾರೆ. ಹೀಗೆಂದು ಮೊದಲನೆಯ ಶ್ರುತಿಯ ಅರ್ಥ.

ಬ್ರಾಹ್ಮಣಜಾತಿಯು ಆತ್ಮನಿಗಿಂತ ಬೇರೆಯಾಗಿ ನಿಜವಾಗಿಯೂ ಸ್ವತಂತ್ರವಾಗಿದೆ ಎಂದು ಯಾವನು ಬಗೆಯುವನೋ ಅವನನ್ನು ಆ ಬ್ರಾಹ್ಮಣಜಾತಿಯು ತಿರಸ್ಕರಿಸುವದು; ಹೀಗೆಯೇ ಕ್ಷತ್ರಿಯಜಾತಿಯು ಆತ್ಮನಿಗಿಂತ ಬೇರೆಯಾಗಿರುವದೆಂದು ಯಾವನು ಬಗೆಯುವನೋ ಅವನನ್ನು ಆ ಜಾತಿಯು ತಿರಸ್ಕರಿಸುವದು, ಕರ್ಮವನ್ನು ಮಾಡಿ ಪಡೆದುಕೊಳ್ಳಬೇಕಾಗಿರುವ ಲೋಕಗಳು ಆತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾಗಿಯೇ ನಿಜವಾಗಿರುವವೆಂದು ಬಗೆಯುವವನನ್ನು ಆ ಲೋಕಗಳು ನಿರಾಕರಿಸುವವು. ಯಾವ ದೇವತೆಗಳನ್ನು ಉದ್ದೇಶಿಸಿ ಯಾಗ ಮಾಡುವದರಿಂದ ಕರ್ಮಫಲವು ದೊರಕುವದೋ ಆ ದೇವತೆಗಳು ಆತ್ಮನಿಗಿಂತ ಬೇರೆಯಾಗಿರುವರೆಂದು ಬಗೆಯುವವನನ್ನು ಆ ದೇವತೆಗಳು ನಿರಾಕರಿಸುವರು ; ಯಾವ ಪ್ರಾಣಿಗಳು ಯಜ್ಞಕರ್ಮಕ್ಕೆ ಬೇಕಾಗಿರುವವೋ ಅವು ಆತ್ಮನಿಗಿಂತ ಬೇರೆಯಾಗಿರುವವೆಂದು ಬಗೆಯುವವನನ್ನು ಅವು ನಿರಾಕರಿಸುವವು ; ಹೆಚ್ಚೇಕೆ ? ಯಾವದೇ ಆಗಲಿ, ಆತ್ಮನಿಗಿಂತ ಬೇರೆಯಾಗಿದ್ದು ಕೊಂಡಿರುವದೆಂದು ಬಗೆಯುವವನನ್ನು ಅದೆಲ್ಲವೂ ನಿರಾಕರಿಸುವದು, 'ಆತ್ಮಸ್ವರೂಪವಾಗಿರುವ ನಮ್ಮನ್ನು ಆತ್ಮನಿಗಿಂತ ಬೇರೆಯಾಗಿರುವೆವೆಂದು ತಿಳಿಯುತ್ತಿರುವನಲ್ಲ!' ಎಂದು ಅವನನ್ನು ಪರಮ ಫಲದಿಂದ ವಂಚಿತನನ್ನಾಗಿ ಮಾಡುವದು. ನಿಜವೇನೆಂದರೆ, ಎಲ್ಲವೂ ಆತ್ಮನೇ, ಆ ಆತ್ಮನಲ್ಲಿ ಬ್ರಹ್ಮಕ್ಷತ್ರಾದಿಭೇದಗಳು ನಿಜವಾಗಿರುವವೆಂದು ಬಗೆಯುವದು ಅವಿವೇಕದ ಫಲ - ಎಂಬುದು ಎರಡನೆಯ ಶ್ರುತಿಯ ಅರ್ಥ.

ಹೀಗೆ ವೇದಾಂತವೇದ್ಯವಾಗಿರುವ, ಎಂದರೆ ಉಪನಿಷತ್ತುಗಳಿಂದ ಮಾತ್ರವೇ ತಿಳಿಯಬರುವ ಆತ್ಮತತ್ತ್ವದಲ್ಲಿ ಯಾವ ಜಾತಿಯಾಗಲಿ, ದೇಹಪ್ರಾಣಮನಸ್ಸುಗಳ ಸಂಬಂಧವಾಗಲಿ, ಕ್ರಿಯಾಕಾರಕಫಲಸ್ವರೂಪವಾಗಲಿ- ನಿಜವಾಗಿ ಇರುವದೇ ಇಲ್ಲ. ಈ ನಿಜವನ್ನರಿತುಕೊಂಡವರೇ ಕರ್ಮವನ್ನು ಮಾಡುತ್ತಾರೆಂಬ ನಿಯಮವಿಲ್ಲ; ಏಕೆಂದರೆ ಕರ್ಮಕ್ಕೆ ಈ ಆತ್ಮಜ್ಞಾನದಿಂದ ಯಾವ ಉಪಯೋಗವೂ ಆಗಬೇಕಾಗಿಲ್ಲ. ಇಷ್ಟೇ ಅಲ್ಲ, ಈ ಜ್ಞಾನವು

ಕರ್ಮಾಧಿಕಾರಕ್ಕೆ ವಿರುದ್ಧವೂ ಆಗಿರುತ್ತದೆ. 'ನಾನು ಬ್ರಾಹ್ಮಣನಲ್ಲ, ಕ್ಷತ್ರಿಯನಲ್ಲ'- ಎಂದು ಮುಂತಾಗಿ ತಿಳಿದವನು ಬ್ರಾಹ್ಮಣಾದಿಗಳಿಗೆ ವಿಧಿಸಿರುವ ಕರ್ಮವನ್ನೇಕೆ ಮಾಡಿಯಾನು ? ಕರ್ಮವು ಸತ್ಯವಲ್ಲ, ಅದಕ್ಕೆ ಬೇಕಾಗಿರುವ ಸಂಪ್ರದಾನಾದಿಕಾರಕಗಳೂ ಸತ್ಯವಲ. ಕರ್ಮದಿಂದಾಗುವ ಫಲವೂ ಸತ್ಯವಲ್ಲ - ಎಂದು ನಿಶ್ಚಯವಾಗಿರುವವನು ಕರ್ಮವನ್ನು ಕಣ್ಣೆತ್ತಿಯಾದರೂ ನೋಡಿಯಾನೆ? ಅಥವಾ ಅವನು ಹೊರಗಿನವರ ದೃಷ್ಟಿಯಿಂದ ಕರ್ಮವನ್ನು ಮಾಡುತ್ತಿದ್ದರೂ ಅದು ಕರ್ಮವೆನಿಸೀತೆ? ಪರಮಾರ್ಥವಾಗಿ ಬ್ರಹ್ಮವೇ ಆಗಿಬಿಟ್ಟಿರುವದರಿಂದ ಅವನು ನಿಜವಾಗಿ ಕರ್ಮಿಯೇ ಅಲ್ಲವೆಂದು ಒಪ್ಪಬೇಕಾಗುವದು. ಗೀತೆಯಲ್ಲಿರುವ 'ಬ್ರಹ್ಮಾರ್ಪಣಮ್'.(೪-೨೪) ಎಂಬ ಶ್ಲೋಕದ ಭಾಷ್ಯವನ್ನು ನೋಡಿ.

ಅಂತೂ ಕರ್ಮಕಾಂಡರೂಪವಾದ ಶಾಸ್ತ್ರವೂ ಆತ್ಮತತ್ತ್ವವನ್ನು ಅರಿಯದ ಅವಿದ್ಯಾವಂತರಿಗೇ ಎಂದಾಯಿತು. ಆದ್ದರಿಂದ ಪ್ರಮಾಣಪ್ರಮೇಯವ್ಯವಹಾರವು ಲೌಕಿಕವಾಗಿರಲಿ, ಶಾಸ್ತ್ರೀಯವಾಗಿರಲಿ - ಎರಡೂ ಅವಿದ್ಯಾಪೂರ್ವಕವಾಗಿಯೇ ನಡೆಯುತ್ತಿರುವದೆಂದೇ ಸಿದ್ಧವಾಯಿತು.

## ವೇದಾಂತಜ್ಞಾನದ ಹೆಚ್ಚುಗಾರಿಕೆ

**ಪ್ರಶ್ನೆ** - ನೀವು ಹೇಳುವಂತೆ ಲೌಕಿಕವ್ಯವಹಾರವಲ್ಲದೆ ವೈದಿಕವ್ಯವಹಾರವೂ ಅವಿದ್ಯೆಯಿಂದಾದದ್ದೇ ಎನ್ನುವದೇ ನಿಜವೆಂದರೆ ವೇದಾಂತಶಾಸ್ತ್ರವೂ ಕರ್ಮಶಾಸ್ತ್ರದಂತೆ ಅವಿದ್ಯಾಕಲ್ಪಿತವಾಗಿಯೇ ಇರುತ್ತದೆ, ಅವಿದ್ಯಾವಂತರಿಗೇ ಹೇಳಿದ್ದು - ಎಂದಾಯಿತಲ್ಲ ! ಆಗ ಉಪನಿಷತ್ತುಗಳ ಹೆಚ್ಚುಗಾರಿಕೆಯೇನೆಂದಾಯಿತು ?

**ಉತ್ತರ :-** ನಿಜ, ಮೋಕ್ಷಶಾಸ್ತ್ರವೂ ಅವಿದ್ಯಾಕಲ್ಪಿತವೇ. ಆದ್ದರಿಂದಲೇ ಆಚಾರ್ಯರು ಹೀಗೆಂದು ಬರೆದಿರುತ್ತಾರೆ:

> **"ತಮೇತಮವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ !"**

ಲೌಕಿಕವೈದಿಕಪ್ರಮಾಣಪ್ರಮೇಯವ್ಯವಹಾರಗಳೂ, ವಿಧಿಪ್ರತಿಷೇಧಗಳನ್ನೂ ಮೋಕ್ಷವನ್ನೂ ಪ್ರತಿಪಾದಿಸುವ ಶಾಸ್ತ್ರಗಳೂ ಆತ್ಮಾನಾತ್ಮರ ಅವಿದ್ಯೆ ಎಂಬ ಹೆಸರಿನ ಆತ್ಮಾನಾತ್ಮಾಧ್ಯಾಸವನ್ನು ಮುಂದುಮಾಡಿಕೊಂಡೇ ಹೊರಟಿರುತ್ತವೆ - ಎಂದು ವಾಕ್ಯದ ಅರ್ಥ. ಯಾವ ವ್ಯವಹಾರವೇ ಆಗಲಿ, ಅವಿದ್ಯೆಯ ಕ್ಷೇತ್ರದಲ್ಲಿಯೇ ಹೊರತು, ಪರಮಾರ್ಥದಲ್ಲಿಲ್ಲ. ಹೀಗಿದ್ದರೂ ಮೋಕ್ಷಶಾಸ್ತ್ರವೆನಿಸಿರುವ ವೇದಾಂತಗಳಲ್ಲಿ ಒಂದು ಹೆಚ್ಚುಗಾರಿಕೆಯಿದೆ. ಅದೇನೆಂದರೆ, ಕರ್ಮಶಾಸ್ತ್ರವು ಕರ್ಮತತ್ತ್ವವನ್ನು ತಿಳಿಸಿಕೊಟ್ಟಮೇಲೂ ಆ ಶಾಸ್ತ್ರವನ್ನು ಶ್ರವಣ ಮಾಡಿದ ಅಧಿಕಾರಿಗೆ ಪ್ರಮಾತೃತ್ವವೂ ಕರ್ತೃತ್ವವೂ ನಿಜವಾಗಿ ಉಳಿದುಕೊಂಡಿರುತ್ತದೆ. ಆದ್ದರಿಂದ

ಅವನು ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮಸಾಮಗ್ರಿಗಳನ್ನು ಒದಗಿಸಿಕೊಂಡು ಕರ್ಮವನ್ನು ಮಾಡಿ ಫಲವನ್ನು ಪಡೆಯಬೇಕಾದದ್ದು ಉಳಿದಿರುತ್ತದೆ. ಆದರೆ **ಉಪನಿಷತ್ತುಗಳಲ್ಲಿ ಹೇಳಿರುವ ಬ್ರಹ್ಮಾತ್ಮಜ್ಞಾನವು ಉಂಟಾದಮೇಲೆ, ಮೇಲೆ ತಿಳಿಸಿರುವಂತೆ ಪ್ರಮಾತೃತ್ವವಾಗಲಿ ಕರ್ತೃತ್ವವಾಗಲಿ ಕ್ರಿಯಾಕಾರಕಫಲಗಳು ಸತ್ಯವೆಂಬ ತಿಳಿವಳಿಕೆಯಾಗಲಿ ಉಳಿದಿರುವದಿಲ್ಲ.** ಜ್ಞಾನಿಯ ದೃಷ್ಟಿಯಿಂದ ಶಾಸ್ತ್ರವು ಕೂಡ ಆವಿದ್ಯಕವೇ ಆಗಿಬಿಟ್ಟಿರುತ್ತದೆ. ಇದೆಲ್ಲವೂ ಆತ್ಮನೇ ಎಂಬ ಆತ್ಮೈಕತ್ವಜ್ಞಾನವುಂಟಾಗಿಬಿಟ್ಟಿರುವದರಿಂದ ಅವನು ಕೃತಕೃತ್ಯನಾಗಿಬಿಟ್ಟಿರುತ್ತಾನೆ. ಗೀತೆಯ **'ವೇದಾವಿನಾಶಿನಮ್'** (೨-೨೧) ಎಂಬ ಶ್ಲೋಕದ ಭಾಷ್ಯವನ್ನು ನೋಡಿರಿ.

## ಆತ್ಮೈಕತ್ವವಿದ್ಯೆ ಹೇಗೆ ದೊರಕುತ್ತದೆ ?

**ಪ್ರಶ್ನೆ :-** ಅವಿದ್ಯೆಯು ಅನರ್ಥಕ್ಕೆ ಕಾರಣವೆಂದೂ ಅದನ್ನು ಕಳೆಯುವದಕ್ಕಾಗಿ ಆತ್ಮೈಕತ್ವವಿದ್ಯೆಯನ್ನು ತಿಳಿಸಿಕೊಡಲೋಸುಗ ವೇದಾಂತಗಳೆಲ್ಲವೂ ಬಂದಿವೆ - ಎಂದೂ ಹೇಳಿದಿರಿ. ಇವೆರಡರಲ್ಲಿ ಯಾವದು ಉಪನಿಷತ್ತುಗಳಿಗೆ ಮುಖ್ಯವಾದ ಗುರಿ ? ಅವಿದ್ಯೆಯನ್ನು ಕಳೆಯುವದೊ, ಆತ್ಮೈಕತ್ವವಿದ್ಯೆಯನ್ನು ತಿಳಿಸಿಕೊಡುವದೊ ?

**ಉತ್ತರ :-** ಅವಿದ್ಯೆಯನ್ನು ಕಳೆಯುವದೇ ಮುಖ್ಯವಾಗಿಟ್ಟುಕೊಂಡಿರುವ ಗುರಿ. ಆತ್ಮನು ಅಪರೋಕ್ಷನೇ ಆಗಿರುವದರಿಂದ ಪ್ರಸಿದ್ಧನೇ ಆಗಿರುತ್ತಾನೆಂದು ಆಗಲೆ ಹೇಳಿದ್ದಾಗಿದೆ. ಹೀಗಿದ್ದರೂ ಆತ್ಮನು ಪರೋಕ್ಷನಾಗಿರುವನೆಂಬ ಭಾವನೆಯು ಸಾಮಾನ್ಯರಿಗೆ ಇರುತ್ತದೆ. ಅವನು ಒಬ್ಬನೇ ಆಗಿದ್ದರೂ 'ಅನೇಕರು ಆತ್ಮರುಗಳು ಇರುತ್ತಾ'ರೆಂಬ ಭಾವನೆ ಜನರಿಗಿದೆ. ಅವನು ಅಸಂಸಾರಿಯಾಗಿಯೇ ಆಗಿದ್ದರೂ ಕರ್ತೃಭೋಕ್ತೃರೂಪನೆಂಬ ಭಾವನೆ ಜನರಿಗಿದೆ. ಅವನು ವೇದಾಂತದಲ್ಲಿ ಹೇಳಿರುವ ಪರಬ್ರಹ್ಮವೆಂಬ ಪರಮಾತ್ಮನೇ ಆಗಿರುತ್ತಿದ್ದರೂ ಅವನು ತನಗಿಂತ ಭಿನ್ನನೆಂಬ ಭಾವನೆ ಜನರಿಗಿರುತ್ತದೆ. ಆದ್ದರಿಂದ ಈ ತಪ್ಪು ಭಾವನೆಗಳಿಗೆ ಮೂಲವಾಗಿರುವ ಅವಿದ್ಯೆಯನ್ನು ಕಳೆದುಹಾಕುವದೇ ಉಪನಿಷತ್ತುಗಳ ಗುರಿಯಾಗಿದೆ. ಅಧ್ಯಾರೋಪಿತವಾಗಿರುವ ಅನಾತ್ಮರೂಪವು ಹೋಯಿತೆಂದರೆ ಆತ್ಮೈಕತ್ವವಿದ್ಯೆಯು - ಆತ್ಮನೊಬ್ಬನೇ ಪರಮಾರ್ಥವೆಂಬ ತಿಳಿವಳಿಕೆಯು - ತನಗೆತಾನೇ ಬಂದುಬಿಡುತ್ತದೆ.

**ಪ್ರಶ್ನೆ :-** ಲೋಕದಲ್ಲಿ ವಸ್ತುವಿನ ಜ್ಞಾನವಾಗದೆ ಅದರ ಅವಿದ್ಯೆಯು ಹೋಗುವದಿಲ್ಲ. ಒಬ್ಬನು ಹಗ್ಗವನ್ನು ಹಾವೆಂದು ತಿಳಿದುಕೊಂಡಿದ್ದರೆ 'ಇದು ಹಾವಲ್ಲ' ಎಂದು ನಿಜವನ್ನು ಬಲ್ಲವನೊಬ್ಬನು ಹೇಳಿಕೊಟ್ಟಮೇಲೂ ಅದೇನೆಂಬುದು ನಿಶ್ಚಿತವಾಗಿ ಗೊತ್ತಾಗುವದಿಲ್ಲ. 'ಇದು ಹಾವಲ್ಲ, ಹಗ್ಗವು' ಎಂದು ಬಲ್ಲವನು ತಿಳಿಸಿಕೊಟ್ಟಮೇಲೂ ತಾನೇ ನೇರಾಗಿ ಅದನ್ನು ನೋಡಿದ ಹೊರತು ಅದು ಹಾವಿನ ಹಾಗೆ ಕಾಣುತ್ತಿರುವ ಅವಿದ್ಯೆಯು ತೊಲಗುವದಿಲ್ಲ. ಅದರಂತೆ ಇಲ್ಲಿಯೂ ಆತ್ಮೈಕತ್ವವಿದ್ಯೆಯನ್ನೇ ಶ್ರುತಿಯು ಮೊದಲು ತಿಳಿಸಿಕೊಡಬೇಕು, ಅದರಂತೆ

ತನಗೆ ಜ್ಞಾನವೂ ಆಗಬೇಕು. ಆಮೇಲೆಯೇ ಅವಿದ್ಯೆಯು ತೀರ ಹೋದೀತು - ಎಂದು ತೋರುತ್ತದೆಯಲ್ಲ!

**ಉತ್ತರ :-** ದೃಷ್ಟಾಂತಬಲದಿಂದ ಹೀಗೆ ಯುಕ್ತಿಯನ್ನು ಮಾಡುವದು ಸರಿಯಲ್ಲ. ಏಕೆಂದರೆ, ಹಗ್ಗವು ನಮ್ಮ ಆತ್ಮನಲ್ಲ, ನಮ್ಮ ಸ್ವರೂಪಕ್ಕಿಂತ ಬೇರೆಯಾಗಿದೆ; ಅದಕ್ಕೂ ನಮಗೂ ದೇಶದ ವ್ಯವಧಾನವಿದೆ, ಆದ್ದರಿಂದ ಅದನ್ನು ಯಾವದು ಮರೆಮಾಡಿಕೊಂಡಿರುವದೋ ಆ ಮರೆಯನ್ನು ಕಳೆಯುವದು ಅವಶ್ಯವಾಗಿರುತ್ತದೆ. ಅದು ಪರೋಕ್ಷವಾಗಿರುವ ಪ್ರಮೇಯವಾಗಿದೆ, ಆದ್ದರಿಂದ ಪ್ರತ್ಯಕ್ಷಪ್ರಮಾಣದಿಂದ ಅದನ್ನು ಅರಿಯತಕ್ಕದ್ದು ಅವಶ್ಯವಾಗಿರುತ್ತದೆ. ಆದ್ದರಿಂದ ಹಗ್ಗವನ್ನು ಹಾವಲ್ಲವೆಂದು ಹೇಳಿದಮಾತ್ರದಿಂದ ಅದರ ವಿಷಯದ ಸಮ್ಯಗ್ಜ್ಞಾನವಾಗ ಲಾರದೆಂಬುದು ಯುಕ್ತವಾಗಿದೆ. ಪ್ರಕೃತದಃ ಆತ್ಮನು ನಮ್ಮ ಸ್ವರೂಪವೇ ಆಗಿರುತ್ತಾನೆ ; ನಮಗಿಂತ ಭಿನ್ನನಲ್ಲ. ಅವನು ನಮಗಿಂತ ದೂರದಲ್ಲಿಲ್ಲ. ಅವನಿಗೂ ನಮಗೂ ನಡುವೆ ಯಾವ ಮರೆಯೂ ಇರುವದಿಲ್ಲ. ಅವನು ಅವ್ಯವಹಿತವಾದ ನಮ್ಮ ಸ್ವರೂಪವೇ ಆಗಿದ್ದು ಅತ್ಯಂತಸಂನಿಹಿತನಾಗಿರುತ್ತಾನೆ. ಅವನು ಪ್ರಮೇಯನಲ್ಲ. ಪ್ರಮಾಣಗಳ ವ್ಯಾಪಾರದಿಂದ ಅರಿತುಕೊಳ್ಳಬೇಕಾದವನಲ್ಲ, ಪ್ರಮಾಣಗಳನ್ನು ಕೂಡ ಬೆಳಗುವ ನಿತ್ಯಾಪರೋಕ್ಷ ಚೈತನ್ಯಸ್ವರೂಪನಾಗಿರುತ್ತಾನೆ. ಆದ್ದರಿಂದ ಇಲ್ಲಿ ಆತ್ಮಸ್ವರೂಪ ವಿಷಯವಾಗಿರುವ ಅವಿದ್ಯೆಯನ್ನು ನೀಗುವದೊಂದೇ ಆವಶ್ಯವಾಗಿದೆಯೇ ಹೊರತು ಅವನ ನೇರಾದ ಜ್ಞಾನವನ್ನು ಉಂಟುಮಾಡಿಕೊಡುವ ಆವಶ್ಯಕತೆಯೇನೂ ಇರುವುದೇ ಇಲ್ಲ.

**ಪ್ರಶ್ನೆ :-** ಹಾಗಾದರೆ , ಅವಿದ್ಯೆಯಾದರೂ ಆತ್ಮನನ್ನು ಮುಸುಕಿದೆ, ಆತ್ಮನಿಗೆ ಮರೆ ಯಾಗಿದೆ - ಎಂದಾಯಿತಲ್ಲವೆ ? ಅವಿದ್ಯೆಯಿಲ್ಲದಿದ್ದರೆ ಅದನ್ನು ಕಳೆಯಬೇಕಾದ ಅವಶ್ಯಕತೆ ಯೆಲ್ಲಿ ಬಂತು ? ಹೀಗಿರುವಲ್ಲಿ ಆತ್ಮನಿಗೆ ಯಾವ ಮರೆಯೂ ಇಲ್ಲವೆಂದು ಹೇಳಿದ್ದು ಹೇಗೆ ಸರಿ?

**ಉತ್ತರ :-** ಆತ್ಮನ ವಿಷಯದಲ್ಲಿ ಅವಿದ್ಯೆಯಿದೆ ಎಂದರೆ ಆತ್ಮನನ್ನೇ ಮುಸುಕಿಕೊಂಡು ಅವನಿಗೆ ಮರೆಯಾಗಿದೆ ಎಂದು ಅಭಿಪ್ರಾಯವಲ್ಲ. ಹೊರಗೆ ಕಾಣುವ ವಿಷಯಗಳಲ್ಲಿಯೇ ಆಸಕ್ತರಾಗಿರುವ ಜನರಿಗೆ ತಮ್ಮ ನಿತ್ಯಪ್ರಸಿದ್ಧವಾದ ಆತ್ಮಸ್ವರೂಪವನ್ನು ಅರಿಯುವದಕ್ಕೆ ಅವಕಾಶವಿಲ್ಲವಾಗಿರುತ್ತದೆ ಅಷ್ಟೇ. ಭಗವದ್ಗೀತೆಯ **'ನಿಷ್ಠಾ ಜ್ಞಾನಸ್ಯ ಯಾ ಪರಾ '** (ಗೀ ೧೮-೫೦) ಎಂಬ ವಾಕ್ಯದ ಭಾಷ್ಯವನ್ನು ನೋಡಿರಿ. 'ನನಗೆ ಅವಿದ್ಯಾಭ್ರಮೆಯಿದೆ' ಎನ್ನುವವನಿಗೆ ಕೂಡ ಅವಿದ್ಯೆಯು ವಿಷಯವಾಗಿರುತ್ತದೆ, ಅವನು ಅದನ್ನು ತನ್ನ ಚೈತನ್ಯಸ್ವರೂಪದಿಂದ ವಿಷಯೀಕರಿಸಿಕೊಂಡು ನೋಡುತ್ತಲೇ ಇರುತ್ತಾನೆ. ಆದ್ದರಿಂದ ಅವಿದ್ಯೆಯಿಂದ ಆತ್ಮಸ್ವರೂಪ ದಲ್ಲಿ ಯಾವ ವಿಶೇಷವೂ ಆಗಿರುವದಿಲ್ಲ. ಬೃಹದಾರಣ್ಯಕದಲ್ಲಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ **'ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಸೇರಿ ಹೋಗುತ್ತಾನೆ'** (ಬೃ. ೪-೪-೬) ಎಂಬ ವಾಕ್ಯದ ಭಾಷ್ಯವನ್ನು ನೋಡಿರಿ. ಹೀಗಿರುವದರಿಂದ ಉತ್ತಮಾಧಿಕಾರಿಗಳಿಗೆ 'ದಶಮನು ನೀನು' ಎಂಬ ವಾಕ್ಯದಂತೆ -

ಹತ್ತು ಜನರೊಳಗೆ ತನ್ನನ್ನು ಬಿಟ್ಟು ಮಿಕ್ಕ ಒಂಬತ್ತು ಜನರನ್ನೇ ಎಣಿಸಿಕೊಳ್ಳುತ್ತಿದ್ದ ಮೂಢನಿಗೆ 'ನೀನೇ ಹತ್ತನೆಯವನು' ಎಂದು ಮತ್ತೊಬ್ಬನು ತಿಳಿಸಿಕೊಟ್ಟ ವಾಕ್ಯದಂತೆ - ಉಪನಿಷತ್ತು 'ಆ ಬ್ರಹ್ಮವೇ ನೀನು' (ಛಾಂ ೬-೮-೭) ಎಂದು ತಿಳಿಸಿಕೊಟ್ಟಮಾತ್ರದಿಂದ ಆತ್ಮಜ್ಞಾನವು ಆಗಿಬಿಡುತ್ತದೆ. ಮಿಕ್ಕವರಿಗೆ ಅನಾತ್ಮಾಧ್ಯಾರೋಪವನ್ನು ಕಳೆದೇ ತತ್ತ್ವವನ್ನು ಹೇಳಬೇಕಾಗುತ್ತದೆ. ☞ **ಆತ್ಮಜ್ಞಾನವೆಂದರೆ ಹಗ್ಗವೇ ಮುಂತಾದವುಗಳಂತೆ ಪ್ರಮಾಣದಿಂದ ತಿಳಿದುಕೊಳ್ಳುವದಲ್ಲ, ಅಧ್ಯಾರೋಪನಿವೃತ್ತಿಯಿಂದ ಆತ್ಮಸ್ವರೂಪದಲ್ಲಿ ನಿಲ್ಲುವದೇ ಆಗಿರುತ್ತದೆ.** ಇದನ್ನು ಮೊದಲನೆಯ ಸೂತ್ರದ ವಿವರಣೆಯಲ್ಲಿ ತಿಳಿಸಿಕೊಡಲಾಗುವದು.

## ಮೀಮಾಂಸಾಶಾಸ್ತ್ರಕ್ಕೂ ಉಪನಿಷತ್ತುಗಳಿಗೂ ಸಂಬಂಧ

**ಪ್ರಶ್ನೆ** :- ಎಲ್ಲಾ ಉಪನಿಷತ್ತುಗಳಲ್ಲಿಯೂ ಆತ್ಮನಲ್ಲಾಗಿರುವ ಅಧ್ಯಾರೋಪವನ್ನು ಕಳೆಯುವದರ ಮೂಲಕ ಆತ್ಮೈಕತ್ವವನ್ನು ಪ್ರತಿಪಾದಿಸಿರುತ್ತದೆ ಎಂಬುದು ಹೇಗೆ ಗೊತ್ತಾಗುತ್ತದೆ?

**ಉತ್ತರ** :- ಇದನ್ನು ಈ **ಶಾರೀರಕಮೀಮಾಂಸೆಯಲ್ಲಿ** ನಿರ್ಣಯಿಸಿರುತ್ತಾರೆ. ಅದು ಹೇಗೆಂಬುದನ್ನು ತೋರಿಸುವದಕ್ಕಾಗಿ ಆಚಾರ್ಯರು ಭಾಷ್ಯವನ್ನು ಬರೆದು ಸರ್ವವೇದಾಂತ ತಾತ್ಪರ್ಯವನ್ನೂ ಇಲ್ಲಿ ಉಪೋದ್ಘಾತರೂಪವಾಗಿ ಕೇವಲ ಯುಕ್ತ್ಯನುಭವಗಳಿಂದ ಮೊದಲು ಹೇಳಿರುತ್ತಾರೆ.

**ಪ್ರಶ್ನೆ :- ಶಾರೀರಕಮೀಮಾಂಸಾಶಾಸ್ತ್ರ** ವೆಂದರೇನು?

**ಉತ್ತರ** :- ಶಾರೀರಕನೆಂದರೆ ಶರೀರದಲ್ಲಿರುವ ಜೀವನು ; ಅವನ ಪರಮಾರ್ಥ ಸ್ವರೂಪವು ಅಸಂಸಾರಿಯಾದ ಪರಮಾತ್ಮರೂಪವಾಗಿದೆ ಎಂಬುದನ್ನು ವಿಚಾರಪೂರ್ವಕವಾಗಿ ನಿರ್ಣಯಿಸುವದರಿಂದ ಇದಕ್ಕೆ **ಶಾರೀರಕಮೀಮಾಂಸೆ** ಎಂದು ಹೆಸರು ಬಂದಿದೆ. ಇದಕ್ಕೆ 'ವೇದಾಂತಮೀಮಾಂಸಾಶಾಸ್ತ್ರ' ವೆಂಬ ಹೆಸರೂ ಇದೆ. ವೇದಾಂತಗಳು ಎಂದರೆ ಉಪನಿಷತ್ತುಗಳು ಎಂದು ಆಗಲೆ ಹೇಳಿರುತ್ತೇವೆ. ವೇದಾಂತವಾಕ್ಯಗಳನ್ನೆಲ್ಲ ಹೊಂದಿಕೆಯಾಗಿ ಒಂದುಗೂಡಿಸಿ ನೋಡಿದರೆ ಆ ಆತ್ಮೈಕತ್ವವಿದ್ಯೆಯಲ್ಲಿಯೇ ಅವಕ್ಕೆ ತಾತ್ಪರ್ಯ ವಿರುತ್ತದೆಯೆಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಶಾಸ್ತ್ರದಲ್ಲಿ ವೇದಾಂತವಾಕ್ಯಗಳನ್ನು ವಿಚಾರಕ್ಕೆ ಇಟ್ಟುಕೊಂಡಿದೆ. ಈ ಕಾರಣದಿಂದ **'ವೇದಾಂತಮೀಮಾಂಸಾಶಾಸ್ತ್ರ'** ವೆಂಬ ಹೆಸರು. ಹೀಗೆಂದು ಆಚಾರ್ಯರೇ ಭಾಷ್ಯದಲ್ಲಿ ಹೇಳಿರುತ್ತಾರೆ.

**ಪ್ರಶ್ನೆ** :- ಹೀಗೆ ಶ್ರುತಿಯುಕ್ತ್ಯನುಭವಗಳಿಗೆ ಹೊಂದುಗೆಯಾಗುವಂತೆ ನಿರ್ಣಯಿಸಿರುವ ಈ ಅಭಿಪ್ರಾಯವನ್ನು ಎಲ್ಲರೂ ಏತಕ್ಕೆ ಒಪ್ಪಿರುವದಿಲ್ಲ?

**ಉತ್ತರ** :- ಆಚಾರ್ಯರು ಸೂತ್ರಭಾಷ್ಯವನ್ನು ಬರೆಯುವದಕ್ಕಿಂತ ಮುಂಚೆಯೇ ಹಲವು ಜನರು ತಮ್ಮ ತಮ್ಮ ಮತಕ್ಕೆ ಅನುಸಾರವಾಗಿ ಇದಕ್ಕೆ ವ್ಯಾಖ್ಯಾನವನ್ನು ಬರೆದಿದ್ದರು.

ಉಪನಿಷತ್ತುಗಳ ಮುಖ್ಯತಾತ್ಪರ್ಯದ ವಿಷಯಕ್ಕೆ ಅವರಿಗೆಲ್ಲ ಭಿನ್ನಭಿನ್ನಾಭಿಪ್ರಾಯಗಳು ಇರುತ್ತಿದ್ದವು. ಆಚಾರ್ಯರು ಶ್ರೀಗೌಡಪಾದಾಚಾರ್ಯರೇ ಮೊದಲಾದ ತಮ್ಮ ಸಂಪ್ರದಾಯದವರ ಅಭಿಪ್ರಾಯವೇ ಉಪನಿಷತ್ತುಗಳಿಗೆ ಎಲ್ಲಾ ಬಗೆಯಿಂದಲೂ ಹೊಂದುವದೆಂದು ತೋರಿಸಿಕೊಡುವದಕ್ಕೆಂದು ತಮ್ಮ ಭಾಷ್ಯವನ್ನು ಬರೆದರು. ಮಿಕ್ಕ ಸಂಪ್ರದಾಯದವರ ಅಭಿಪ್ರಾಯಗಳೆಲ್ಲ ಅಷ್ಟುಮಾತ್ರದಿಂದ ಮೂಲೆಗೆ ಬೀಳಲಿಲ್ಲ. ಅವರ ಗ್ರಂಥಗಳು ಈಗ ಸಿಕ್ಕುವದಿಲ್ಲವಾದರೂ ಆಚಾರ್ಯರ ಭಾಷ್ಯದ ಮೇಲೆ ಬರೆದಿರುವ ವ್ಯಾಖ್ಯಾನಗಳಲ್ಲಿಯೂ ಅವು ರೂಪಾಂತರದಿಂದ ತೂರಿಕೊಂಡು ಬಂದಿರುತ್ತವೆ. ವ್ಯಾಖ್ಯಾನಗಳೂ ಒಂದಕ್ಕೊಂದು ವಿರುದ್ಧವಾಗಿದ್ದು ಅದ್ವೈತಸಂಪ್ರದಾಯದವರಲ್ಲದ ಬೇರೆಯ ಮತದವರು ಇವೆಲ್ಲವನ್ನೂ ಸೇರಿಸಿದ ಕಲಸುಮೇಲೋಗರವನ್ನೇ ಶಾಂಕರಾದ್ವೈತವೆಂದು ಇಟ್ಟುಕೊಂಡು ತಾವು ಹೊಸದಾಗಿ ಬರೆದಿರುವ ಭಾಷ್ಯಗಳಲ್ಲಿ ಈ ವಾದವನ್ನು ಖಂಡಿಸಿರುತ್ತಾರೆ. ಇವೆಲ್ಲವನ್ನೂ ವಿಮರ್ಶಿಸಿ ಶುದ್ಧ ಪ್ರಕ್ರಿಯೆಯನ್ನು ಜಿಜ್ಞಾಸುಗಳಿಗೆ ತಿಳಿಯಪಡಿಸುವದಕ್ಕಾಗಿ ಈ ಗ್ರಂಥವನ್ನು ಬರೆಯಲಾಗಿದೆ.

# ೩. ವ್ಯಾಖ್ಯಾನಪ್ರಸ್ಥಾನಗಳಂತೆ ಅಧ್ಯಾಸ

## ವ್ಯಾಖ್ಯಾನಗಳು ಭಾಷ್ಯಕ್ಕಿಂತ ಬೇರೆಯ ಮತವನ್ನು ಅನುಸರಿಸಿದ್ದೇಕೆ ?

**ಪ್ರಶ್ನೆ :-** ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವವರು ಆಚಾರ್ಯರ ಶಿಷ್ಯರೆಂದೇ ಪ್ರಸಿದ್ಧರಾಗಿರುತ್ತಾರೆ. ಅವರ ನೇರಾದ ಶಿಷ್ಯರುಗಳಿಗೂ ಆಚಾರ್ಯರ ಹೃದಯವು ತಿಳಿಯಲಿಲ್ಲವೆಂದು ಕಲ್ಪಿಸುವದು ಸರಿಯಾದೀತೆ?

**ಉತ್ತರ :-** ಆಚಾರ್ಯರ ನೇರಾದ ಶಿಷ್ಯರು ಬರೆದವೆಂದು ಪ್ರಸಿದ್ಧವಾಗಿರುವ ಗ್ರಂಥಗಳು ಎರಡು ಮಾತ್ರ. ಶಂಕರಾಚಾರ್ಯರ ಸಾಕ್ಷಾಚ್ಛಿಷ್ಯರೆಂದು ಪ್ರಸಿದ್ಧರಾಗಿರುವ ಪದ್ಮಪಾದಾಚಾರ್ಯರು[1] ಬರೆದದ್ದೆಂದು ಜನರು ಭಾವಿಸುತ್ತಿರುವ **ಪಂಚಪಾದಿಕೆ**ಯೊಂದು; ಶಂಕರರ ಪಾದಸೇವೆಯಿಂದ ಜ್ಞಾನವನ್ನು ಪಡೆದುಕೊಂಡಿರುವೆನೆಂದು ತಮ್ಮ **'ನೈಷ್ಕರ್ಮ್ಯಸಿದ್ಧಿ'** ಎಂಬ ಗ್ರಂಥದಲ್ಲಿ (೩-೭೪) ಬರೆದುಕೊಂಡಿರುವ ಸುರೇಶ್ವರಾಚಾರ್ಯರು ಬರೆದಿರುವ ತೈತ್ತಿರೀಯ, ಬೃಹದಾರಣ್ಯಕ- ಈ ಉಪನಿಷತ್ತುಗಳ **'ವಾರ್ತಿಕ'**ವು ಮತ್ತೊಂದು. ಇವರಿಬ್ಬರನ್ನು ಬಿಟ್ಟರೆ ಮಿಕ್ಕವರು ಯಾರೂ ಆಚಾರ್ಯರ ಕಾಲದಲ್ಲಿದ್ದವರಲ್ಲ. ಪಂಚಪಾದಿಕೆಯನ್ನು ಪದ್ಮಪಾದರೇ ಬರೆದರೆಂಬುದಕ್ಕೂ ಜನರು ಹಾಗೆಂದು ಆಡಿಕೊಳ್ಳುವದನ್ನು ಬಿಟ್ಟರೆ ಬೇರೆ ನಿಃಸಂಶಯವಾದ ಪ್ರಮಾಣವೇನೂ ಇಲ್ಲ. ಪಂಚಪಾದಿಕೆ, ವಾರ್ತಿಕಗ್ರಂಥಗಳು- ಇವೆರಡೂ ಒಂದಕ್ಕಿಂತ ಒಂದು ತೀರ ಭಿನ್ನವಾದ ಪ್ರಸ್ಥಾನಗಳನ್ನು ಒಳಗೊಂಡಿದೆ; ಒಂದರಲ್ಲಿ ಮತ್ತೊಂದರ ಪರಾಮರ್ಶವಿಲ್ಲವಾದ್ದರಿಂದ ಅವುಗಳೆರಡರಲ್ಲಿ ಯಾವದು ಮೊದಲು ಬರೆದದ್ದು- ಎಂದು ನಿರ್ಣಯಿಸುವದೂ ಕಷ್ಟವಾಗಿರುತ್ತದೆ. ಹೀಗಿರುವಲ್ಲಿ ನೀವು ಕೇಳಿರುವ ಪ್ರಶ್ನೆಗೆ ಯಾವ ಸ್ಪಷ್ಟವಾದ ಉತ್ತರವನ್ನೂ ಹೇಳುವದಾಗುವಂತಿಲ್ಲ. ಪಂಚಪಾದಿಕೆಯ ಪ್ರತಿಪಾದನಕ್ರಮವಂತೂ ಭಾಷ್ಯಕ್ಕಿಂತ ತೀರ ಭಿನ್ನವಾಗಿದೆ.

## ವ್ಯಾಖ್ಯಾನಗಳು ಸ್ವತಂತ್ರಪ್ರಕ್ರಿಯೆಯನ್ನೇ ಒಪ್ಪಿದರೆ ದೋಷವೇನು?

**ಪ್ರಶ್ನೆ :** ಶ್ರುತಿ, ಯುಕ್ತಿ, ಅನುಭವ- ಇವುಗಳಿಗೆ ಹೊಂದುವಂತೆ ಇದ್ದರೆ ಯಾವ ರೀತಿಯಿಂದ ತತ್ತ್ವವನ್ನು ತಿಳಿಸಿದರೂ ಆಗಬಹುದಲ್ಲವೆ? ಭಾಷ್ಯಕ್ಕೆ ಹೊಂದುಗೆಯಾಗಿಯೇ ಇರಬೇಕೆಂಬ ನಿಯಮವೇತಕ್ಕೆ ? ಒಂದೂರಿಗೆ ಹೋಗುವ ಹಲವು ಹಾದಿಗಳು ಇರಬಹುದಷ್ಟೆ?

---

1. ಪದ್ಮಪಾದಾಚಾರ್ಯರ ಕಥೆಯ ವಿಷಯಕ್ಕಿರುವ ಮತಭೇದಗಳನ್ನು **'ಶಂಕರ ಭಗವತ್ಪಾದವೃತ್ತಾಂತಸಾರಸರ್ವಸ್ವ'**- ಎಂಬ ಗ್ರಂಥದಲ್ಲಿ ವಿಮರ್ಶಿಸಲಾಗಿದೆ.

**ಉತ್ತರ :-** ಭಾಷ್ಯಕ್ಕೇ ವ್ಯಾಖ್ಯಾನವನ್ನು ಬರೆದಿದ್ದೇನೆಂದು ಪ್ರತಿಜ್ಞೆಮಾಡಿರುವ ಪಂಚಪಾದಿಕಾಕಾರರು, ಭಾಷ್ಯಕ್ಕೆ ಹೊಂದುಗೆಯಾಗಿ ಬರೆದಿದ್ದಾರೆಯೆ, ಇಲ್ಲವೆ?- ಎಂಬುದನ್ನು ನೋಡುವದಕ್ಕೆ ಹೊರಡುವದೇನೂ ತಪ್ಪಲ್ಲ. ಭಾಷ್ಯ, ಪಂಚಪಾದಿಕೆ- ಈ ಎರಡರ ವಿಚಾರಕ್ರಮಗಳು ಬೇರೆ ಬೇರೆ ಎಂದು ನಿರ್ಣಯವಾದಮೇಲೂ ಇವೆರಡರಲ್ಲಿ ಯಾವದು ಯುಕ್ತ್ಯನುಭವಗಳಿಗೆ ಹೊಂದುಗೆಯಾಗಿದೆ ಎಂಬುದನ್ನೂ ಅತ್ಯವಶ್ಯವಾಗಿ ವಿಚಾರಮಾಡಬೇಕು. ಏಕೆಂದರೆ ವೇದಾಂತಸಿದ್ಧಾಂತವು ಉಪನಿಷತ್ತುಗಳಿಂದಲೇ ತಿಳಿಯಬರತಕ್ಕದ್ದಾಗಿರುವದೆಂದು ಆಚಾರ್ಯರು ಹೇಳಿರುತ್ತಾರೆ, ಇದನ್ನು ವ್ಯಾಖ್ಯಾನಕಾರರೆಲ್ಲರೂ ಒಪ್ಪಿರುತ್ತಾರೆ. ಬ್ರಹ್ಮಜಿಜ್ಞಾಸೆಯು ಅನುಭವದಲ್ಲಿ ಕೊನೆಗಾಣತಕ್ಕದ್ದಾಗಿದೆ- ಎಂದರೆ ಎಲ್ಲರಿಗೂ ಅನುಭವದಲ್ಲಿ ತೋರುವ ವಸ್ತುವನ್ನೇ ಶ್ರುತಿಯು ಹೇಳುತ್ತದೆ- ಎಂಬುದನ್ನು ಆಚಾರ್ಯರಂತೆ ವ್ಯಾಖ್ಯಾನಕಾರರೆಲ್ಲರೂ ಒಪ್ಪಿರುತ್ತಾರೆ ; ಆಚಾರ್ಯರ ಶಿಷ್ಯರು, ಅವರ ಅಭಿಪ್ರಾಯವನ್ನೇ ವಿವರಿಸುವವರು- ಎಂದು ಹೇಳಿಕೊಳ್ಳುವವರು ಇದನ್ನು ಒಪಲೇಬೇಕೆಂಬ ನಿಯಮವಿರಬೇಕಾದದ್ದು ಯುಕ್ತವೂ ಆಗಿದೆಯಷ್ಟೆ? ಪ್ರಕೃತದಲ್ಲಿ ಅಧ್ಯಾಸಭಾಷ್ಯವು ಯುಕ್ತ್ಯನುಭವಗಳಿಗೆ ಹೊಂದಿಯೇ ಇದೆ ಎಂಬುದನ್ನು ಹಿಂದಿನ ಖಂಡದಲ್ಲಿ ತಿಳಿಸಿಕೊಟ್ಟಿರುತ್ತೇವೆ. ಆದ್ದರಿಂದ ವ್ಯಾಖ್ಯಾನಗಳನ್ನೂ ಆ ಒರೆಗಲ್ಲಿಗೆ ತಿಕ್ಕಿನೋಡುವದು

## ಇಲ್ಲಿ ವ್ಯಾಖ್ಯಾನಗಳ ವಿಮರ್ಶೆಯನ್ನು ಹೇಗೆ ಮಾಡಿದೆ?

**ಪ್ರಶ್ನೆ :-** ವ್ಯಾಖ್ಯಾನಕಾರರು ಹಲವರಿದ್ದರೆ ಅವರ ಗ್ರಂಥಗಳೆಲ್ಲವನ್ನೂ ಒಂದೇಸಲಕ್ಕೆ ವಿಚಾರಕ್ಕಿಟ್ಟುಕೊಳ್ಳುವದು ಸಾಧ್ಯವೆ? ಎಲ್ಲಾ ಗ್ರಂಥಗಳೂ ಭಾಷಾಂತರವಾಗಿಲ್ಲ; ಸಂಸ್ಕೃತ ಭಾಷೆಯನ್ನು ತಿಳಿಯದವರು ನಿಮ್ಮ ಅಭಿಪ್ರಾಯಗಳ ಯುಕ್ತಾಯುಕ್ತತೆಯನ್ನು ವಿಮರ್ಶಿಸುವದು ಹೇಗಾದೀತು?

**ಉತ್ತರ :-** ಎಲ್ಲಾ ವ್ಯಾಖ್ಯಾನಗಳನ್ನೂ ಸದ್ಯಕ್ಕೆ ನಾವು ವಿಚಾರಕ್ಕೆ ತೆಗೆದುಕೊಳ್ಳುವದಿಲ್ಲ. ಪಂಚಪಾದಿಕೆಯ ಒಂದನೆಯ ವರ್ಣಕವನ್ನು ಆಗಲೇ ಮೂಲಸಹಿತವಾಗಿ ಕನ್ನಡಿಸಲಾಗಿದೆ. ಅಲ್ಲಿ ಬರೆದಿರುವ ಟಿಪ್ಪಣಿಗಳ ಸಹಾಯದಿಂದ ಆ ಗ್ರಂಥದ ಅರ್ಥವನ್ನು ಗ್ರಹಿಸಿರುವವರು ಈ ವಿಚಾರದಲ್ಲಿ ಮನಸ್ಸುಮಾಡಬಹುದು. ವಿಷಯವನ್ನು ಯುಕ್ತ್ಯನುಭವಗಳಿಗೆ ಹೊಂದಿಸಿಯೇ ನೋಡಬೇಕಾಗಿರುವದರಿಂದ ಅದಕ್ಕೆ ಸಿದ್ಧರಾಗಿರುವ ಅಧಿಕಾರಿಗಳು ಅವಶ್ಯವಾಗಿ ಭಾಷ್ಯ ಪಂಚಪಾದಿಕೆ- ಈ ಎರಡು ಪ್ರಸ್ಥಾನಗಳನ್ನೂ ಹೊಂದಿಸಿ ನೋಡಬೇಕಾಗಿದೆ. ವಾಚಸ್ಪತಿಮಿಶ್ರರು ಬರೆದಿರುವ **'ಭಾಮತಿ'** ಎಂಬ ಸೂತ್ರಭಾಷ್ಯವ್ಯಾಖ್ಯಾನವು ತಾನೇ ಒಂದು ಸ್ವತಂತ್ರ ಪ್ರಸ್ಥಾನವನ್ನು ಜಿಜ್ಞಾಸುಗಳ ಮುಂದಿಟ್ಟಿದೆ ; ಪ್ರಕೃತವಿಷಯಕ್ಕೆ ಸಂಬಂಧಪಟ್ಟಷ್ಟು ಮಟ್ಟಿಗೆ ಅದರಿಂದ ಆರಿಸಿದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ವಿಮರ್ಶೆಗೆ ಇಟ್ಟುಕೊಳ್ಳುವೆವು. ಮಿಕ್ಕ

ವ್ಯಾಖ್ಯಾನಕಾರರು ಬಲು ಮಟ್ಟಿಗೆ ಪಂಚಪಾದಿಕೆಯ ಕ್ರಮವನ್ನು ಅನುಸರಿಸುವವರೇ ಆಗಿರುತ್ತಾರಾದ್ದರಿಂದ ಜಿಜ್ಞಾಸುಗಳು ತಕ್ಕಮಟ್ಟಿಗೆ ಈ ವಿಷಯದ ಪರಿಚಯವನ್ನು ಮಾಡಿಕೊಳ್ಳಬಹುದಾಗಿದೆ.

## ವ್ಯಾಖ್ಯಾನಗಳು ಅವಿದ್ಯಾವಾಕ್ಯಗಳನ್ನು ತಿರಿಚಿರುವ ರೀತಿ

**ಪ್ರಶ್ನೆ :-** ಪಂಚಪಾದಿಕಾಕಾರರು ನಿಜವಾಗಿಯೂ ಭಾಷ್ಯಕ್ಕೆ ಬೇರೆಯ ವಿಧವಾಗಿಯೇ ವ್ಯಾಖ್ಯಾನವನ್ನು ಬರೆದಿರುತ್ತಾರೆಯೆ?

**ಉತ್ತರ :-** ಪಂಚಪಾದಿಕೆಯಲ್ಲಿರುವ ವಿಷಯಗಳನ್ನೆಲ್ಲ ಈಗ ನಾವು ವಿಚಾರಕ್ಕೆ ತೆಗೆದುಕೊಳ್ಳುವದಿಲ್ಲ. ಅಧ್ಯಾಸಕ್ಕೆ ಸಂಬಂಧಪಟ್ಟಷ್ಟನ್ನು ಮಾತ್ರ ಇಲ್ಲಿ ವಿಮರ್ಶಿಸುವೆವು. ಭಾಷ್ಯದ ಮೊಟ್ಟಮೊದಲನೆಯ ವಾಕ್ಯಕ್ಕೇ ಅವರು ಬೇರೊಂದು ಬಗೆಯಿಂದ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಹೇಗೆಂದರೆ:

(೧) **'ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಮ್, ಮಮೇದಮ್- ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ।।'**

ಎಂದು ಭಾಷ್ಯ. ಇದನ್ನು ಇದ್ದದ್ದು ಇದ್ದಂತೆ ಕನ್ನಡಿಸಿದರೆ 'ಸತ್ಯ' ಮತ್ತು 'ಅನೃತ'- ಇವೆರಡನ್ನು ಕಲೆಬೆರಕೆಮಾಡಿ 'ನಾನು ಇದು', 'ನನ್ನದಿದು'- ಎಂದು ಜನರು ಮಾಡುವ ಮಿಥ್ಯಾಜ್ಞಾನನಿಮಿತ್ತವಾದ ಈ ವ್ಯವಹಾರವು ಸ್ವಾಭಾವಿಕವಾದದ್ದು[1] - ಎಂದಾಗುತ್ತದೆ. ಇದನ್ನು ಈ ಟೀಕಾಕಾರರು ಮಾಡಿರುವ ವ್ಯಾಖ್ಯಾನದಲ್ಲಿ ವಿವರಿಸಿರುವ ಪ್ರಕಾರವಿದು :

(1) **ನೈಸರ್ಗಿಕ :** (ಸ್ವಾಭಾವಿಕವಾದ) ಎಂದರೆ ಪ್ರತ್ಯಕ್ಚೈತನ್ಯದ ಸತ್ತಾಮಾತ್ರಕ್ಕೆ ಸಂಬಂಧಿಸಿರುವ ಎಂದರ್ಥ. (ಪು. ೧೪)[2] **ಈ ವ್ಯಾಖ್ಯಾನಕಾರರು ಅವಿದ್ಯೆಯೆಂಬುದು ಆತ್ಮನನ್ನೇ ಆಶ್ರಯಿಸಿಕೊಂಡು ಇರುತ್ತದೆ ಎಂಬ ಮತವನ್ನು ಒಪ್ಪುವವರು; ಅದಕ್ಕೆ ಅನುಗುಣವಾಗಲೆಂದು ಭಾಷ್ಯಕ್ಕೆ ಹೀಗೆ ವ್ಯಾಖ್ಯಾನಮಾಡಿರುತ್ತಾರೆ. ಆದರೆ ಭಾಷ್ಯದಲ್ಲಿ ಈ ವ್ಯವಹಾರವು ಸ್ವಾಭಾವಿಕವಾಗಿರುತ್ತದೆ, ಇದೇನೂ ವಿಚಾರದಿಂದ ನಿಶ್ಚಯಿಸಿ ಕೊಂಡಿರುವದಲ್ಲ- ಎಂಬ ಭಾವವಿರುತ್ತದೆ. ಭಾಷ್ಯದಲ್ಲಿ 'ಸ್ವಾಭಾವಿಕ' ವೆಂಬ ಮಾತನ್ನು ಈ ಅರ್ಥದಲ್ಲಿ ಉಪಯೋಗಿಸುವ ಪದ್ಧತಿ ಇದೆ ಎಂಬುದಕ್ಕೆ ಇವು ಕೆಲವು ಉದಾಹರಣೆಗಳು : 'ಸ್ವಾಭಾವಿಕಪ್ರವೃತ್ತಿ' (೧-೧-೪, ಭಾ.ಭಾ. ೫೨), ಸ್ವಾಭಾವಿಕ ಕರ್ತೃತ್ವಭೋಕ್ತೃತ್ವ (೧-೩-೧೯, ಭಾ.ಭಾ. ೨೬೯), 'ಸ್ವಾಭಾವಿಕಸ್ಯ ಶಾರೀರಾತ್ಮತ್ವಸ್ಯ' (೨-೧-೧೪, ಭಾ.ಭಾ. ೪೩೫), 'ಸ್ವಾಭಾವಿಕೋ ವ್ಯವಹಾರಃ' (೨-೧-೧೪ ಭಾ.ಭಾ. ೪೩೫).**

(2) **ಸತ್ಯಾನೃತೇ** (ಸತ್ಯಾನೃತಗಳನ್ನು). ಇದಕ್ಕೆ ವ್ಯಾಖ್ಯಾನ : ಸತ್ಯವಾದದ್ದು ಅನಿದಂಚೈತನ್ಯವು;

1. ಇದನ್ನು ಇಷ್ಟರಲ್ಲಿಯೇ ವಿವರಿಸಲಾಗುವದು.
2. ಪಂಚಪಾದಿಕೆಯ ಪುಟಸಂಖ್ಯೆಯು ಕನ್ನಡ ಅನುವಾದದ ಪುಸ್ತಕದ್ದು.

ಅನೃತವಾದದ್ದು ಎಂದರೆ ಯುಷ್ಮದರ್ಥವು (ನೀನು ಎನಿಸಿಕೊಳ್ಳಬಲ್ಲ ವಿಷಯವು, ಏಕೆಂದರೆ ಅದು ಸ್ವರೂಪದಿಂದಲೂ ಅಧ್ಯಸ್ತವಾದ ಸ್ವರೂಪವುಳ್ಳದ್ದಾಗಿದೆ. (ಪು. ೧೪).

ಈ ವ್ಯಾಖ್ಯಾನಕಾರರು ಅನಾತ್ಮವು ತನ್ನ ರೂಪದಿಂದಲೂ ಆತ್ಮನಲ್ಲಿ ಅಧ್ಯಾರೋಪಿತವಾಗಿರುತ್ತದೆ; ಆದರೆ ಆತ್ಮನು ಮಾತ್ರ ಹಾಗಲ್ಲ, ಅವನ ಸಂಬಂಧವು ಮಾತ್ರವೇ ಅನಾತ್ಮದಲ್ಲಿ ಅಧ್ಯಸ್ತವಾಗಿದೆ- ಎನ್ನುವವರು. ಹೀಗೆ ಭಾಷ್ಯದಲ್ಲಿಲ್ಲದ ಅರ್ಥವನ್ನು ತೆಗೆದಿರುತ್ತಾರೆ.

(3) ಮಿಥ್ಯಾಜ್ಞಾನನಿಮಿತ್ತ (ತಪ್ಪು ತಿಳಿವಳಿಕೆಯ ನಿಮಿತ್ತದಿಂದಾಗಿರುವ). ಇದಕ್ಕೆ ವ್ಯಾಖ್ಯಾನ : ಮಿಥ್ಯೆಯಾದ ಅಜ್ಞಾನವು ಮಿಥ್ಯಾಜ್ಞಾನವು. 'ಮಿಥ್ಯೆ' ಎಂಬ ಮಾತಿನಿಂದ ಅನಿರ್ವಚನೀಯತ್ವವನ್ನು ಹೇಳಿದೆ ; ಅಜ್ಞಾನವೆಂಬ ಮಾತಿನಿಂದ ಜಡಾತ್ಮಕವಾದ ಅವಿದ್ಯಾಶಕ್ತಿಯನ್ನು- ಜ್ಞಾನವನ್ನು ಅಲ್ಲಗಳೆದು- ಹೇಳಿದೆ. ಅದನ್ನು ನಿಮಿತ್ತವಾಗುಳ್ಳದ್ದು, ಎಂದರೆ ಅದೇ ಉಪಾದಾನವಾಗುಳ್ಳದ್ದು ಎಂದರ್ಥ (ಪು. ೧೬).

ಈ ವ್ಯಾಖ್ಯಾನವು ಭಾಷ್ಯಾಕ್ಷರಕ್ಕೆ ತೀರ ಹೊಸದು. ಭಾಷ್ಯದಲ್ಲಿ 'ಮಿಥ್ಯಾಜ್ಞಾನ' ಎಂಬ ಪದವನ್ನು ಹೀಗೆ ಎಲ್ಲಿಯೂ ವಿವರಿಸಿಲ್ಲ. ತಪ್ಪು ತಿಳಿವಳಿಕೆ ಎಂಬರ್ಥದಲ್ಲಿ- 'ಸಮ್ಯಗ್ಜ್ಞಾನ'ವೆಂಬ ಮಾತಿಗೆ ಪ್ರತಿದ್ವಂದ್ವಿಯಾದ ಅರ್ಥದಲ್ಲಿ - ಮಾತ್ರವೇ ಈ ಮಾತನ್ನು ಭಾಷ್ಯದಲ್ಲಿ ಪ್ರಯೋಗಿಸಿರುವದು ಕಂಡುಬರುತ್ತದೆ. ಈ ಉದಾಹರಣೆಗಳನ್ನು ನೋಡಿ ; 'ಮಿಥ್ಯಾಜ್ಞಾನಾಪಾಯಶ್ಚ' (೧-೧-೪, ಭಾ.ಭಾ.೪೫ ) 'ಶರೀರಾತ್ಮಾಭಿಮಾನಲಕ್ಷಣಂ ಮಿಥ್ಯಾಜ್ಞಾನಮ್' (೧-೧-೪, ಭಾ.ಭಾ. ೫೮) 'ಸಮ್ಯಗ್ಜ್ಞಾನಾಪನೋದ್ಯಸ್ಯ ಮಿಥ್ಯಾಜ್ಞಾನಸ್ಯ' (೨-೧-೧೪, ಭಾ.ಭಾ. ೪೩೫) **ಅಜ್ಞಾನವೆಂಬುದು ಜಡಶಕ್ತಿ ಎಂದಾಗಲಿ ಅದು ಅನಿರ್ವಚನೀಯ ವಾದ್ದರಿಂದ ಮಿಥ್ಯೆ ಎಂದಿದೆ ಎಂದಾಗಲಿ ಭಾಷ್ಯದಲ್ಲಿ ಎಲ್ಲಿಯೂ ಒಮ್ಮೆಯೂ ಹೇಳಿಲ್ಲ. 'ನಿಮಿತ್ತ'ವೆಂಬ ಮಾತನ್ನು ಉಪಾದಾನವೆಂಬರ್ಥದಲ್ಲಿ ಪ್ರಯೋಗಿಸಿರುವದಂತೂ ಭಾಷ್ಯದಲ್ಲಿ ಎಲ್ಲಿಯೂ ಕಾಣಬರುವದಿಲ್ಲ.**

## ಭಾಷ್ಯದಲ್ಲಿ ಅವಿದ್ಯಾಶಕ್ತಿವಾದದ ಮೂಲ

**ಪ್ರಶ್ನೆ :** - ಈ ವ್ಯಾಖ್ಯಾನದಲ್ಲಿ 'ಮಿಥ್ಯಾಜ್ಞಾನ' ಶಬ್ದಕ್ಕೆ ಅಸ್ವಾಭಾವಿಕವಾದ ಅರ್ಥವನ್ನು ಕೊಟ್ಟು ಇವರು ಏಕೆ ಹೀಗೆ ವ್ಯಾಖ್ಯಾನ ಮಾಡಿದರು ?

**ಉತ್ತರ :-** ಶಂಕರಭಗವತ್ಪಾದರವರ ಹಿಂದಿನ ಕಾಲದಲ್ಲಿ ಅವರ ಸಂಪ್ರದಾಯಕ್ಕೆ ಸೇರಿದವರೇ ಅಲ್ಲದೆ, ಬೇರೆಯ ಪ್ರಕ್ರಿಯೆಗಳಿಂದ ಅದ್ವೈತವನ್ನು ಉಪನಿಷತ್ತುಗಳ ಪ್ರಮಾಣದಿಂದ ಸ್ಥಾಪಿಸುವದಕ್ಕೆ ಹೊರಟಿದ್ದ ವೇದಾಂತಿಗಳೂ ಇದ್ದರು. ಅವರಲ್ಲಿ ಈ ಅವಿದ್ಯಾವಾದವನ್ನು ಹೇಳುವವರೂ ಕೆಲವರು ಇದ್ದರೆಂತ ಕಾಣುತ್ತದೆ. ಏಕೆಂದರೆ **'ಬ್ರಹ್ಮಸಿದ್ಧಿ'** ಎಂಬ ಅದ್ವೈತಗ್ರಂಥವನ್ನು ಬರೆದಿರುವ **ಮಂಡನಮಿಶ್ರ**ರೆಂಬ ಆಚಾರ್ಯರು ಒಂದು ಕಡೆಯಲ್ಲಿ

(ಪ್ರ ೧೦) **"ತಥಾಚೋಕ್ತಮ್ ಅವಿದ್ಯೋಪಾದಾನಭೇದವಾದಿಭಿಃ ಅನಾದಿರಪ್ರಯೋಜನಾ ಚ ಅವಿದ್ಯಾ ಇತಿ"** (ಆದ್ದರಿಂದಲೇ ಭೇದಕ್ಕೆ ಅವಿದ್ಯೆಯೇ ಉಪಾದಾನವೆನ್ನುವ ವಾದಿಗಳು 'ಅವಿದ್ಯೆಯು ಅನಾದಿ, ಪ್ರಯೋಜನವಿಲ್ಲದ್ದು' ಎಂದು ಹೇಳಿರುತ್ತಾರೆ) ಎಂದು ಬರೆದಿರುತ್ತಾರೆ. ಈ ವಾಕ್ಯವು ಪಂಚಪಾದಿಕೆಯಲ್ಲಿ ಎಲ್ಲಿಯೂ ಕಾಣುತ್ತಿಲ್ಲ; ಈ ವಾದದವರೆಂದು ನಮಗೆ ಗೊತ್ತಿರುವವರಲ್ಲೆಲ್ಲ ಪಂಚಪಾದಿಕಾಕಾರರೇ ಅತ್ಯಂತಪ್ರಾಚೀನರು. ಆದ್ದರಿಂದ ಅವರಿಗಿಂತ ಹಿಂದೆಯೇ ಯಾರೋ ಈ ಪ್ರಸ್ಥಾನವನ್ನು ಹಿಡಿದಿದ್ದ ವಾದಿಗಳು ಇದ್ದರೆಂದೂ ಈಗ್ಗೆ ಅವರ ಗ್ರಂಥವು ನಮಗೆ ಸಿಕ್ಕಿಲ್ಲವಾದರೂ ಮಂಡನಮಿಶ್ರರ ಗ್ರಂಥದಲ್ಲಿ ಈ ಒಂದು ವಾಕ್ಯವು ಹೇಗೋ ನುಸುಳಿಕೊಂಡು ಉಳಿದಿದೆ ಎಂದೂ ತಿಳಿಯಬೇಕಾಗಿದೆ. ಪೂರ್ವದಲ್ಲಿ ಬೇರೊಂದು ಸ್ವತಂತ್ರಪ್ರಸ್ಥಾನವಾಗಿದ್ದುಕೊಂಡಿದ್ದ ಈ ಮತವು ಆಚಾರ್ಯರ ಭಾಷ್ಯವು ಬಂದಮೇಲೆ ತನಗೆ ತಕ್ಕಷ್ಟು ಬೆಂಬಲವಿಲ್ಲದ್ದರಿಂದ ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆಯುವ ನೆಪದಿಂದ- ಉಪನದಿಯು ಮಹಾನದಿಯಲ್ಲಿ ಸೇರಿಕೊಳ್ಳುವಂತೆ- ಶಾಂಕರಪ್ರಸ್ಥಾನದಲ್ಲಿ ಸೇರಿಹೋಗಿರಬಹುದು. ಅಥವಾ ಈ ಮತವು ಆಚಾರ್ಯರಿಂದೀಚೆಗೆ ಯಾರೋ ಹೊಸದಾಗಿ ಹುಟ್ಟಿಹಾಕಿದ್ದು ಎಂತಲೂ ಕಲ್ಪಿಸುವದಕ್ಕೆ ಬರುತ್ತದೆ. ಏಕೆಂದರೆ ಆಚಾರ್ಯರಿಗಿಂತ ಹಿಂದೆಯೇ ಈ ಮತವು ಇದ್ದಿದ್ದರೆ ಭಾಷ್ಯದಲ್ಲಾಗಲಿ ವಾರ್ತಿಕದಲ್ಲಾಗಲಿ ಇದನ್ನು ಖಂಡನೆಗಾಗಲಿ ಮಂಡನೆಗಾಗಲಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇದರ ಸುಳಿವೂ ಭಾಷ್ಯವಾರ್ತಿಕಗಳಲ್ಲಿಲ್ಲ. ಹೇಗೇ ಆಗಲಿ, ಈಗ್ಗೆ ಈ ಮತವು ಶಂಕರಭಗವತ್ಪಾದರ ಮತವೆಂದೇ ಜನರು ನಂಬುವಷ್ಟು ಪ್ರಸಿದ್ಧವಾಗಿಬಿಟ್ಟಿರುವದರಿಂದ ಇದರ ಸಾರಾಸಾರತೆಯನ್ನು ವಿಚಾರಮಾಡುವದು ಅವಶ್ಯವಾಗಿರುತ್ತದೆ.

## ಎರಡು ವ್ಯಾಖ್ಯಾನ ಪ್ರಸ್ಥಾನಗಳು

**ಪ್ರಶ್ನೆ :-** ಇದೇ ಭಾಷ್ಯವಾಕ್ಯಕ್ಕೆ ಬೇರೆಯ ವ್ಯಾಖ್ಯಾನಕಾರರು ಹೇಗೆ ಅರ್ಥವನ್ನು ಬರೆದಿರುತ್ತಾರೆ?

**ಉತ್ತರ :-** ಭಾಷ್ಯದ ಮೇಲೆಯೇ ನೇರಾಗಿ ವ್ಯಾಖ್ಯಾನವನ್ನು ಬರೆದಿರುವವರು **ವಾಚಸ್ಪತಿಮಿಶ್ರರು.** ಅವರು ಸಂಪೂರ್ಣಭಾಷ್ಯಕ್ಕೂ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಆಚಾರ್ಯರಿಗಿಂತ ಈಚಿನವರೆಂದು ಸ್ಪಷ್ಟವಾಗಿ ಗೊತ್ತಾಗಿರುವವರು ಅವರು. ಅವರು ಮಹಾವಿದ್ವಾಂಸರಾದ್ದರಿಂದ ಅನೇಕದರ್ಶನಗಳ ಮೇಲೆ ಗ್ರಂಥಗಳನ್ನು ಬರೆದಿರುತ್ತಾರೆ. ಅವರ ಮತವು ಕೆಲವು ಸಂದರ್ಭಗಳಲ್ಲಿ ಪಂಚಪಾದಿಕೆಗೆ ಹೊಂದಿಕೆಯಾಗಿದೆ, ಮತ್ತೆ ಕೆಲವು ಸಂದರ್ಭಗಳಲ್ಲಿ ಬಹಳ ಬಿಡುತ್ತದೆ. ಪ್ರಕೃತವಾಗಿರುವ **'ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಮ್ ಮಮೇದಮ್ ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ'** ಎಂಬ ಭಾಷ್ಯಕ್ಕೆ ಅವರ ವ್ಯಾಖ್ಯಾನವಿದು:

**(1) ನೈಸರ್ಗಿಕ :- ಸ್ವಾಭಾವಿಕವಾದ, ಎಂದರೆ ಈ ವ್ಯವಹಾರವು ಅನಾದಿ, ಈ ವ್ಯಾಖ್ಯಾನದಲ್ಲಿ ಭಾಷ್ಯಕ್ಕೆ ಅನುಗುಣವಾಗಿ 'ಸ್ವಾಭಾವಿಕ' ವೆಂಬರ್ಥವನ್ನು ತೆಗೆದುಕೊಂಡಿದ್ದರೂ 'ಅನಾದಿ' ಎಂಬ ಹೆಚ್ಚಿಗೆ ಅರ್ಥವೊಂದನ್ನು ತೆಗೆದಿದೆ. ವ್ಯವಹಾರವು ಅನಾದಿ ಎಂಬುದರ ಅಭಿಪ್ರಾಯವನ್ನು ಹೀಗೆ ಬರೆದಿದೆ :**

'ವ್ಯವಹಾರವು ಅನಾದಿ' ಎಂದದ್ದರಿಂದ ಅದಕ್ಕೆ ಕಾರಣವಾಗಿರುವ ಅಧ್ಯಾಸವು ಅನಾದಿ ಎಂದಂತೆ ಆಯಿತು. ಮಿಥ್ಯಾಜ್ಞಾನದಿಂದ ಕಂಡುಬರುವ ಹಿಂದು ಹಿಂದಿನ ಬುದ್ಧಿ, ಇಂದ್ರಿಯ, ಶರೀರ-ಮುಂತಾದವುಗಳು ಮುಂದುಮುಂದಿನ ಅಧ್ಯಾಸಕ್ಕೆ ಉಪಯೋಗವಾಗುತ್ತವೆಯಾಗಿ ಬೀಜಾಂಕುರಗಳಂತೆ ಅನಾದಿಯಾಗಿವೆ; ಆದ್ದರಿಂದ ಅಧ್ಯಾಸದಿಂದ ಶರೀರ, ಶರೀರದಿಂದ ಅಧ್ಯಾಸ- ಎಂಬ ಅನ್ಯೋನ್ಯಾಶ್ರಯದೋಷವಿಲ್ಲ' (ಪು. ೧೭).[1]

(2) **ಸತ್ಯಾನೃತೇ ಮಿಥುನೀಕೃತ್ಯ :** ವಿಂಗಡಿಸಿ ತಿಳಿಯದೆ ಇದ್ದದ್ದರಿಂದ ಅಧ್ಯಾಸಮಾಡಿ ಎಂದರ್ಥ. ಸತ್ತು ಎಂದರೆ ಚಿದಾತ್ಮನು ; ಅನೃತವೆಂದರೆ ಬುದ್ಧೀಂದ್ರಿಯದೇಹಾದಿಗಳು. ಆ ಎರಡು ಧರ್ಮಿಗಳನ್ನು ಮಿಥುನೀಕರಣಮಾಡಿ ಬೆರಕೆಮಾಡಿಕೊಂಡು ಎಂದರ್ಥ. ಅವಿದ್ಯಾಸತ್ತು, ಪರಮಾರ್ಥಸತ್ತು ಇವೆರಡಕ್ಕೂ ನಿಜವಾಗಿ ಬೆರಕೆಯಾಗಲಾರದೆಂಬುದನ್ನು ತಿಳಿಸುವದಕ್ಕೆ 'ಮಿಥುನೀ' ಎಂಬಲ್ಲಿ ಹಾಗಿಲ್ಲದ್ದು ಆಗುವದು ಎಂಬರ್ಥವನ್ನು ಸೂಚಿಸುವ ಚ್ವಿ (ಈ) ಎಂಬ ಪ್ರತ್ಯಯವನ್ನು ಪ್ರಯೋಗಿಸಿದೆ.' **ಈ ವ್ಯಾಖ್ಯಾನವು ಭಾಷ್ಯಕ್ಕೆ ಹತ್ತಿರವಿದೆ. ಪಂಚಪಾದಿಕೆಗೆ (ಪು. ೧೬) ಬಿಡುತ್ತದೆ. ಹೋಲಿಸಿ ನೋಡಿರಿ.**

(3) **ಮಿಥ್ಯಾಜ್ಞಾನನಿಮಿತ್ತಃ :** 'ಮಿಥ್ಯಾಜ್ಞಾನವೆಂದರೆ ಅಧ್ಯಾಸವು; ಅದರ ನಿಮಿತ್ತದಿಂದಾದದ್ದು ವ್ಯವಹಾರವು); ಏಕೆಂದರೆ ಅದಿದ್ದರೆ ವ್ಯವಹಾರ, ಇಲ್ಲದಿದ್ದರೆ ವ್ಯವಹಾರವೂ ಇಲ್ಲ ಎಂದರ್ಥ.' ಈ ವ್ಯಾಖ್ಯಾನವೂ ಭಾಷ್ಯಕ್ಕೆ ಹೊಂದುಗೆಯಾಗಿದೆ. ಇಲ್ಲಿ 'ಮಿಥ್ಯಾಜ್ಞಾನ,' ಎಂಬ ಮಾತನ್ನು ಪಂಚಪಾದಿಕೆಯಂತೆ 'ಮಿಥ್ಯಾ ಅಜ್ಞಾನ' - ಎಂದು ಬಿಡಿಸಿಕೊಂಡಿಲ್ಲ ಅನಿರ್ವಚನೀಯವೆಂಬರ್ಥವನ್ನೂ ತೆಗೆದಿಲ್ಲ. ಲೋಕವ್ಯವಹಾರವೆಂದರೆ ಜನರ ವ್ಯವಹಾರವು ನಾನು ಇಂಥವನು ಎಂದು ಆಡಿಕೊಳ್ಳುವದು ; ಇತಿ ಎಂಬ ಮಾತಿಗೆ ಶರೀರಾದಿಗಳಿಗೆ ಅನುಕೂಲವಾಗಿರುವದನ್ನು ತೆಗೆದುಕೊಳ್ಳುವದು, ಪ್ರತಿಕೂಲವನ್ನು ಬಿಡುವದು-ಮುಂತಾದದ್ದು (ಪು. ೧೫) ಎಂದು ಬರೆದಿದೆ. ಪಂಚಪಾದಿಕೆಯಲ್ಲಿ ಲೋಕವ್ಯವಹಾರವೆಂದರೆ 'ನಾನು ಮನುಷ್ಯನು ಎಂಬ ಅಭಿಮಾನವು' (ಪು. ೧೪) ಎಂದು ಬರೆದಿದೆ; ವ್ಯವಹಾರವೆಂದರೂ ಅಹಂಕಾರಾಧ್ಯಾಸವೇ ( ಪು. ೧೪೫) ಎಂದಿದೆ.

**ಈ ಹೀಗೆ ವ್ಯಾಖ್ಯಾನಪ್ರಕಾರದಲ್ಲಿ ಇವೆರಡಕ್ಕೂ ವೈಲಕ್ಷಣ್ಯವಿದೆ. ವಾಚಸ್ಪತಿಮಿಶ್ರರು** ಮಂಡನಮಿಶ್ರನೆಂಬಾತನು ಬರೆದಿರುವ ಬ್ರಹ್ಮಸಿದ್ಧಿಗೂ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಅವರಿಗೆ ಬ್ರಹ್ಮಸಿದ್ಧಿಯ ಪ್ರಸ್ಥಾನವೆಂದರೆ ಬಹಳ ಮೆಚ್ಚು; ಆದ್ದರಿಂದ **ಮಂಡನಮಿಶ್ರರ ಮತವನ್ನು ಭಾಷ್ಯದ ಅಭಿಪ್ರಾಯಗಳಿಗೆ ತಾಡಹಾಕಿರುತ್ತಾರೆ.** ಇದನ್ನು ಮುಂದೆ ತಿಳಿಸಿಕೊಡುವೆವು. ಅವರು ತಮಗಿಂತ ಹಿಂದೆಯೇ ಬರೆದಿದ್ದ

1. ಭಾಮತೀಗ್ರಂಥದ ಪುಟಸಂಖ್ಯೆಯನ್ನು ನಿರ್ಣಯಸಾಗರ ಪ್ರೆಸ್‌ನಲ್ಲಿ (೧೯೧೭ರಲ್ಲಿ) ಅಚ್ಚಾಗಿರುವ ಸಂಸ್ಕೃತಪುಸ್ತಕದಂತೆ ಕೊಟ್ಟಿದೆ.)

ಪಂಚಪಾದಿಕೆಯನ್ನು ಎಲ್ಲಾ ರೀತಿಯಿಂದಲೂ ಅನುಸರಿಸಬೇಕೆಂಬ ನಿಯಮವನ್ನೇನೂ ಇಟ್ಟುಕೊಂಡಿಲ್ಲ.

## ಪಂಚಪಾದಿಕಾಭಾಮತೀಪ್ರಸ್ಥಾನಗಳೆರಡೂ ಅನಿರ್ವಚನೀಯವಾದದವು

**ಪ್ರಶ್ನೆ :-** 'ಮಿಥ್ಯಾಜ್ಞಾನ' ಎಂಬ ಶಬ್ದಕ್ಕೆ ಅನಿರ್ವಚನೀಯವಾದ ಅವಿದ್ಯೆ-ಎಂಬರ್ಥವನ್ನು ತೆಗೆದುಕೊಳ್ಳದೆ ಇರುವ ಈ ಭಾಮತೀವ್ಯಾಖ್ಯಾನಕಾರರು ಅನಿರ್ವಚನೀಯವಾದವನ್ನೇ ಕೈಬಿಟ್ಟರೆಂದು ಹೇಳಬೇಕಲ್ಲವೆ?

**ಉತ್ತರ :-** ಹಾಗೇನೂ ಇಲ್ಲ. ಅನಿರ್ವಚನೀಯವಾದವು ಮಂಡನನಿಗೂ ಬೇಕಾದ್ದರಿಂದ ಭಾಮತಿಗೂ ಬೇಕೇ ಆಗಿದೆ. ಪಂಚಪಾದಿಕೆಯ ಅವಿದ್ಯೆಯನ್ನು ಅವರು ಪ್ರಕೃತವ್ಯಾಖ್ಯಾನದಲ್ಲಿ ತೆಗೆದುಕೊಳ್ಳದೆ ಇದ್ದರೂ ಬೇರೊಂದು ಕಡೆಯಲ್ಲಿ ಪ್ರಕಾರಾಂತರದಿಂದ ಒಪ್ಪಿರುತ್ತಾರೆ.

## ಅಧ್ಯಾಸಲಕ್ಷಣವಾಕ್ಯ

**ಪ್ರಶ್ನೆ :-** ಈ ವ್ಯಾಖ್ಯಾನಕಾರರು ಅಧ್ಯಾಸಕ್ಕೆ ಲಕ್ಷಣವನ್ನು ಹೇಗೆ ಹೇಳಿರುತ್ತಾರೆ?

**ಉತ್ತರ :-** ಭಾಷ್ಯಕಾರರು 'ಈ ಅಧ್ಯಾಸವೆಂಬುದು ಯಾವದು?' ಎಂಬ ಪ್ರಶ್ನೆಯನ್ನು ಎಬ್ಬಿಸಿ ಅದಕ್ಕೆ ಉತ್ತರವಾಗಿ ಮೊಟ್ಟಮೊದಲು ಬರೆದಿರುವ ಲಕ್ಷಣ ವಾಕ್ಯವಿದು : **'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ'** (ಸೂ. ಭಾ. ಭಾ. ಭಾ. ೨) ಹಿಂದೆ ಕಂಡ (ಒಂದು ವಸ್ತು) ಮತ್ತೊಂದರಲ್ಲಿ ಸ್ಮೃತಿರೂಪವಾಗಿ ತೋರುವದೇ (ಅಧ್ಯಾಸವು)- ಎಂದು ವಾಕ್ಯಕ್ಕೆ ಅಕ್ಷರಾರ್ಥ, ಈ ವಾಕ್ಯವನ್ನು ಪಂಚಪಾದಿಕೆಯಲ್ಲಿ ವ್ಯಾಖ್ಯಾನಮಾಡಿರುವ ರೀತಿಯನ್ನೂ ಭಾಮತಿಯಲ್ಲಿ ವ್ಯಾಖ್ಯಾನ ಮಾಡಿರುವ ರೀತಿಯನ್ನೂ ಹೋಲಿಸಿ ನೋಡುವದರಿಂದ ಲಾಭವುಂಟು.

### ಪಂಚಪಾದಿಕೆಯಲ್ಲಿರುವ ವ್ಯಾಖ್ಯಾನ

'ಪರತ್ರ (ಮತ್ತೊಂದು ಕಡೆಯಲ್ಲಿ)' ಎಂದರೆ 'ಮತ್ತೊಂದರ ತೋರಿಕೆ' ಎಂದು ತಾನೇ ಅರ್ಥವಶದಿಂದ ಏರ್ಪಡುತ್ತದೆ. ಅದಕ್ಕೆ 'ಸ್ಮೃತಿರೂಪ'ವಾಗಿರುವದೆಂಬುದು ವಿಶೇಷಣವು. **ಸ್ಮರಿಸಲ್ಪಡುವದರಿಂದ 'ಸ್ಮೃತಿ' ಎನಿಸುತ್ತದೆ.** ಸ್ಮರಿಸಲ್ಪಡುವ ವಸ್ತುವಿನ ರೂಪದಂತೆ ಇದರ ರೂಪವಿರುತ್ತದೆಯೇ ಹೊರತು ನಿಜವಾಗಿ ಸ್ಮರಿಸಲ್ಪಡುವದೇ ಅಲ್ಲ; ಏಕೆಂದರೆ ಸ್ಪಷ್ಟವಾಗಿ ಎದುರಿಗಿದೆ ಎಂದೇ ತೋರುತ್ತಿರುತ್ತದೆ. ಪೂರ್ವದೃಷ್ಟಾವಭಾಸ, 'ಹಿಂದೆ ಕಂಡದ್ದರ ತೋರಿಕೆ' - ಎಂಬುದು, ಇದು ಸ್ಮೃತಿರೂಪವಾಗಿರುವದಕ್ಕೆ ಉಪಪತ್ತಿ; ಏಕೆಂದರೆ ಹಿಂದೆ ಬೆಳ್ಳಿಯನ್ನು ಕಾಣದೆ ಇದ್ದವನಿಗೆ ಶುಕ್ತಿಯು ಕಣ್ಣಿಗೆ ಬಿದ್ದರೆ ಬೆಳ್ಳಿ ಕಾಣಿಸುವದಿಲ್ಲ.

ಅರ್ಥವಶದಿಂದ ಈ ವಿಷಯದ ಅವಭಾಸಕ್ಕೂ- ಎಂದರೆ **ಜ್ಞಾನಕ್ಕೂ - ಇದೇ ಲಕ್ಷಣವನ್ನು ಹೇಳಿದಂತಾಗಿದೆ.** ಹೇಗೆಂದರೆ ಹೇಳುತ್ತೇವೆ: ''ಸ್ಮೃತಿಯ ರೂಪದಂತೆ ರೂಪವು ಇದಕ್ಕೆ ಇದೆಯೇ ಹೊರತು ಇದು ಸ್ಮೃತಿಯೇ ಎನ್ನುವದಕ್ಕಿಲ್ಲ; ಏಕೆಂದರೆ ಹಿಂದಿನ ಯಾವದೊಂದು ಪ್ರಮಾಣವೂ ಈ ಗೊತ್ತಾದ ವಿಷಯವನ್ನು ಹಾಗೆಂದು ತಿಳಿಸಿರುವದಿಲ್ಲ. ಹಾಗಾದರೆ ಸ್ಮೃತಿರೂಪತ್ವವೆಂದರೇನು? ಎಂದರೆ ಹಿಂದಿನ ಪ್ರಮಾಣದ ಮೂಲಕ ಇದು ಉಂಟಾಗಿರುತ್ತದೆ. ಇಂದ್ರಿಯಸಂಯೋಗವಾಗದೆ ತೋರುವ ವಸ್ತು ಹಿಂದೆ ಅದನ್ನು ತೋರಿಸಿದ್ದ ಪ್ರಮಾಣದ ಮೂಲಕವಾಗಿ ಎದ್ದುಕೊಳ್ಳುವದೇ ಹೊರತು ತಾನೇ ಉಂಟಾಗುವದಿಲ್ಲ.'' (ಪಂ. ೨೫)

ಮೇಲೆ ನಾವು ಪಂಚಪಾದಿಕೆಗೆ ಕನ್ನಡ ಅನುವಾದವನ್ನು ಮಾಡಿರುವ ಪುಸ್ತಕದಲ್ಲಿರುವದಕ್ಕಿಂತಲೂ ಸ್ವಲ್ಪ ಹೆಚ್ಚು ಸರಳವಾಗುವಂತೆ ವಾಕ್ಯಗಳನ್ನು ಕನ್ನಡಿಸಿದ್ದೇವೆ. ಆದರೂ ಇದರ ಅಭಿಪ್ರಾಯವು ಸ್ವಲ್ಪ ವಿವರಣೆಯಿಲ್ಲದೆ ಸ್ಪಷ್ಟವಾಗುವಂತಿಲ್ಲ. ಇದರ ಒಟ್ಟು ಸಾರಾಂಶವಿಷ್ಟು: **ಈ ವ್ಯಾಖ್ಯಾನಕಾರರು ಲಕ್ಷಣವಾಕ್ಯದಲ್ಲಿ ಮುಖ್ಯವಾಗಿ ಶುಕ್ತಿರಜತ, ರಜ್ಜುಸರ್ಪ- ಮುಂತಾದ ಹುಸಿತೋರಿಕೆಯ ವಸ್ತುವನ್ನೇ ಅಧ್ಯಾಸವೆಂಬ ಶಬ್ದಕ್ಕೆ ಅರ್ಥವಾಗಿ ಹಿಡಿದು ಭಾಷ್ಯವಾಕ್ಯಕ್ಕೆ ಅರ್ಥವನ್ನು ಮಾಡಿರುತ್ತಾರೆ.** ಹಿಂದೆ ಬೆಳ್ಳಿಯೇ ಮುಂತಾದ ವಸ್ತುಗಳನ್ನು ನೋಡಿದ್ದವನಿಗೇ ಶುಕ್ತಿ ಮುಂತಾದವುಗಳಲ್ಲಿ ಹುಸಿಬೆಳ್ಳಿಯೇ ಮುಂತಾದದ್ದು ತೋರಿಕೊಳ್ಳುತ್ತದೆ. ನಮ್ಮ ಸ್ಮರಣೆಗೆ ಬಂದ ಹಿಂದಿನ ಬೆಳ್ಳಿಯಂತೆಯೇ ಈ ಹುಸಿಬೆಳ್ಳಿಯೂ ತೋರುತ್ತದೆ. ಆದ್ದರಿಂದ **ಈ ಹುಸಿಬೆಳ್ಳಿಯು ಅಧ್ಯಾಸ** ಎಂಬುದು ಮುಖ್ಯವಾಗಿ ಲಕ್ಷಣವಾಕ್ಯಕ್ಕೆ ಅರ್ಥ. ಇದಕ್ಕೆ ಎರಡನೆಯದಾಗಿ ಜ್ಞಾನಪರವಾಗಿಯೂ ಅರ್ಥವನ್ನು ಮಾಡಬಹುದು. ಸ್ಮೃತಿಯಂತೆ ಈ ಹುಸಿಬೆಳ್ಳಿಯ ಜ್ಞಾನವೂ ಹಿಂದೆ ಪ್ರಮಾಣದಿಂದ ಕಂಡ ನಿಜವಾದ ಬೆಳ್ಳಿಯ ಸ್ಮೃತಿಯಂತೆಯೇ ಇರುವದರಿಂದ **ಹುಸಿಬೆಳ್ಳಿಯ ಹುಸಿಅರಿವನ್ನು ಅಧ್ಯಾಸವೆನ್ನಬಹುದು**- ಎಂಬುದು ಎರಡನೆಯ ವ್ಯಾಖ್ಯಾನ.

ಆದರೆ ಭಾಷ್ಯಕಾರರು ಎರಡನೆಯ ವ್ಯಾಖ್ಯಾನವನ್ನೇ ಇಟ್ಟುಕೊಂಡಿರುತ್ತಾರೆ; ಆದ್ದರಿಂದಲೇ ಅವರು 'ಅಧ್ಯಾಸವೆಂದರೆ ಅದಲ್ಲದ್ದನ್ನು ಅದೆಂದು ತಿಳಿಯುವ ಬುದ್ಧಿ ಎಂದು ಹೇಳಿದೆವು'- ಎಂದು ಈ ಲಕ್ಷಣವು ಜ್ಞಾನಪರವೆಂಬುದನ್ನು ಗಟ್ಟಿಗೊಳಿಸಿರುತ್ತಾರೆ. ಹಿಂದೆ (ಪು. ೨೯) ಇದನ್ನು ಹೇಳಿರುತ್ತೇವೆ.

## ಭಾಮತಿಯಲ್ಲಿರುವ ವ್ಯಾಖ್ಯಾನ

''ಅವಸನ್ನವಾದ (ಹಾಳುಮಾಡಿದ) ಅಥವಾ ಅವಮತವಾದ (ಅಲ್ಲವೆಂದ) ಭಾಸವು (ಜ್ಞಾನವು) **ಅವಭಾಸ**ವೆನಿಸುವದು; ಮತ್ತೊಂದು ಪ್ರತ್ಯಯದಿಂದ ಆಗುವದೇ ಅವಸಾದ, ಅಥವಾ ಅವಮಾನ. ಅಂತೂ 'ಮಿಥ್ಯಾಜ್ಞಾನ' ಎಂದು ಹೇಳಿದಂತೆ ಆಯಿತು. ಇದಕ್ಕೆ ಮತ್ತೆ ವ್ಯಾಖ್ಯಾನ ಮಾಡುವದಕ್ಕೆ 'ಪೂರ್ವದೃಷ್ಟಃ......' ಎಂಬ ವಾಕ್ಯವು ಬಂದಿದೆ. ಆರೋಪಕ್ಕೆ ವಿಷಯ

(ವಾದ ಶುಕ್ತ್ಯಾದಿ), ಆರೋಪಣೀಯ (ವಾದ ರಜತಾದಿ)- ಇವುಗಳನ್ನು ಕಲೆಬೆರಕೆಮಾಡದೆ, ತಪ್ಪುತಿಳಿವು ಆಗಲಾರದಾದ್ದರಿಂದ 'ಪೂರ್ವದೃಷ್ಟ' ಎಂಬ ಮಾತಿನಿಂದ' ಅನೃತವಾದ ಆರೋಪಣೀಯವನ್ನು ತಿಳಿಸಿದೆ; ಆ ವಸ್ತುವಿಗೆ ದೃಷ್ಟತ್ವವೊಂದೇ ಇದ್ದರೆ ಸಾಕು, ಅದು ನಿಜವಾಗಿಯೂ ಇರಬೇಕಾದದ್ದಿಲ್ಲ. ಈಗಲೇ ಕಂಡದ್ದು ಆರೋಪಕ್ಕೆ ಉಪಯೋಗ ವಾಗುವದಿಲ್ಲವಾಗಿ 'ಪೂರ್ವ' ದೃಷ್ಟ ಎಂದಿದೆ. ಹಿಂದೆ ನೋಡಿದ್ದು ತನ್ನ ರೂಪದಿಂದ ನಿಜವಾದರೂ ಆರೋಪಣೀಯರೂಪದಿಂದ **'ಅನಿರ್ವಾಚ್ಯ'** ವಾದ್ದರಿಂದ ಅನೃತ. ಆರೋಪದ ವಿಷಯವು ಸತ್ಯವೆಂದು ತಿಳಿಸುವದಕ್ಕೆ 'ಪರತ್ರ'- ಮತ್ತೊಂದರಲ್ಲಿ- ಎಂದಿದೆ. ಮತ್ತೊಂದರಲ್ಲಿ ಎಂದರೆ ನಿಜವಾಗಿರುವ ಶುಕ್ತಿ ಮುಂತಾದ್ದರಲ್ಲಿ; ಇದರಿಂದ ಸತ್ಯಾನೃತಗಳನ್ನು ಕಲೆಬೆರಕೆ ಮಾಡಿದೆ ಎಂದಾಯಿತು. ಹಿಂದೆ ಕಂಡಿದ್ದ ಒಂದು ಹಸುವಿನ ಲಕ್ಷಣವು ಈಗ ಕಾಣುವ ಮತ್ತೊಂದು ಹಸುವಿನಲ್ಲಿರಬಹುದು. ಹಿಂದೆ ಪಾಟಲಿಪುರದಲ್ಲಿದ್ದವನನ್ನೇ ಮಾಹಿಷ್ಮತಿಯಲ್ಲಿ ಕಾಣಬಹುದು; ಆದರೆ ಅದೇನೂ ಅಧ್ಯಾಸವಲ್ಲ. 'ಅವಭಾಸ' ಎಂಬ ಮಾತಿಗೆ ಸರಿಯಾದ ಜ್ಞಾನ ಎಂಬರ್ಥವೂ ಇದೆ. ಆದ್ದರಿಂದ 'ಸ್ಮೃತಿ ರೂಪ' ಎಂದು ಹೇಳಿದ್ದಾರೆ. ಸ್ಮೃತಿಯ ರೂಪದಂತೆ ರೂಪವುಳ್ಳದ್ದು ಸ್ಮೃತಿರೂಪವು ; ಸ್ಮೃತಿರೂಪತ್ವವೆಂದರೆ ಎದುರಿಗೆ ವಿಷಯವಿಲ್ಲದೆ ಇರುವದು. ನಿಜವಾದ ಹಸುವೇ ಮುಂತಾದದ್ದರ ಜ್ಞಾನಕ್ಕೆ ಎದುರಿಗೇ ವಿಷಯವಿರುವದರಿಂದ ಅದು ಪ್ರತ್ಯಭಿಜ್ಞಾನವು. ಆದ್ದರಿಂದ ಅದರಲ್ಲಿ ಲಕ್ಷಣಕ್ಕೆ ಅತಿವ್ಯಾಪ್ತಿಯಾಗುವದಿಲ್ಲ. ಸ್ವಪ್ನಜ್ಞಾನವೂ ಸ್ಮೃತಿರೂಪವಾದ ಭ್ರಾಂತಿಯೇ ಆಗಿರುವದರಿಂದ ಲಕ್ಷಣಕ್ಕೆ ಅದರಲ್ಲಿ ಅವ್ಯಾಪ್ತಿಯೂ ಇಲ್ಲ. (ವಾ. ಭಾ. ಪು. ೧೯-೨೦).

ಇಲ್ಲಿ ಲಕ್ಷಣದಲ್ಲಿರುವ ವಿಶೇಷಣಗಳಿಗೆಲ್ಲ ಪಂಚಪಾದಿಕೆಯಲ್ಲಿಲ್ಲದ ಬೇರೆಯ ರೀತಿಯಿಂದಲೇ ಸಾರ್ಥಕ್ಯವನ್ನು ಹೇಳಿದೆ. **ಜ್ಞಾನವನ್ನು ಮಾತ್ರ 'ಅಧ್ಯಾಸ' ವೆಂದು ಕರೆದಿದೆ; ಅಧ್ಯಾಸವನ್ನು ಅನಿರ್ವಾಚ್ಯವೆಂದಿದೆಯಾದರೂ ವಿಷಯವನ್ನೂ ಅನಿರ್ವಾಚ್ಯವೆಂದೇ ಮುಂದೆ ಹೇಳಿರುತ್ತದೆ.** ಹೇಗೆಂದರೆ :

''ಆದ್ದರಿಂದ ಬಿಸಿಲುಕಿರಣದಲ್ಲಿ ಆರೋಪಿತವಾದ ನೀರು ಸತ್ತೂ ಅಲ್ಲ, ಅಸತ್ತೂ ಅಲ್ಲ, (ಸತ್ತು, ಅಸತ್ತು ಎಂಬಿವು) ಒಂದಕ್ಕೊಂದು ವಿರುದ್ಧವಾಗಿರುವದರಿಂದ ಸದಸತ್ತೂ ಅಲ್ಲ, **ಅನಿರ್ವಾಚ್ಯವೇ** ಎಂದು ಒಪ್ಪಬೇಕು. ಈ ಕ್ರಮದಿಂದ ಅಧ್ಯಸ್ತವಾದ ನೀರು ಸತ್ಯವಾದ **ನೀರಿನಂತೆಯೂ ಪೂರ್ವದೃಷ್ಟವಾದಂತೆಯೂ ಇದೆ; ನಿಜವಾಗಿ ನೋಡಿದರೆ ನೀರೂ ಅಲ್ಲ, ಪೂರ್ವದೃಷ್ಟವೂ ಅಲ್ಲ, ಮತ್ತೇನೆಂದರೆ ಅನೃತವು, ಅನಿರ್ವಾಚ್ಯವು.''** (ವಾ. ಭಾ. ಪು. ೨೪)

ಇಲ್ಲಿ ಪೂರ್ವದೃಷ್ಟವಾಗಿರುವಂತೆ ಇದ್ದರೆ ಆಯಿತು, ನಿಜವಾಗಿ ಪೂರ್ವ ದೃಷ್ಟವಾಗಿರಬೇಕಾದದ್ದಿಲ್ಲ ಎಂದಿರುವದನ್ನು ಲಕ್ಷಿಸಬೇಕು. **ಅಂತೂ ಜ್ಞಾನಾಧ್ಯಾಸ, ಅರ್ಥಾಧ್ಯಾಸ- ಎಂಬ ಎರಡು ಅಧ್ಯಾಸಗಳನ್ನು ಈ ಇಬ್ಬರು ವ್ಯಾಖ್ಯಾನಕಾರರೂ**

**ಒಪ್ಪಿರುತ್ತಾರೆ. ಭಾಷ್ಯದಲ್ಲಿ ಮಿಥ್ಯಾಜ್ಞಾನವನ್ನು ಮಾತ್ರ ಹೇಳಿದೆ, ಅರ್ಥಾಧ್ಯಾಸವನ್ನು ಒಪ್ಪಿಲ್ಲ-** ಎಂದಾಯಿತು.

## ಅವಿದ್ಯೆಯ ವಿಷಯದಲ್ಲಿ ವ್ಯಾಖ್ಯಾನಗಳ ಸಾಮ್ಯವೈಷಮ್ಯಗಳು

**ಪ್ರಶ್ನೆ :-** ಭಾಮತೀಕಾರರು ಅಧ್ಯಾಸವನ್ನೂ ಅಧ್ಯಸ್ತ ವಿಷಯವನ್ನೂ ಅನಿರ್ವಚನೀಯ ವೆಂದಿದ್ದಾರೆ- ಎಂದಾಯಿತು. ಅವರು ಪಂಚಪಾದಿಕೆಯಲ್ಲಿ ಹೇಳಿರುವ ಅನಿರ್ವಾಚ್ಯವಾದ ಅಜ್ಞಾನವನ್ನು ಒಪ್ಪಿದಾರೆಯೆ? ಈ ಇಬ್ಬರು ವ್ಯಾಖ್ಯಾನಕಾರರೂ ಅಧ್ಯಾಸಕ್ಕಿಂತ ಬೇರೆಯಾದ 'ಅಜ್ಞಾನ'ವನ್ನು ಒಪ್ಪಿರುವದರಲ್ಲಿ ಏನಾದರೂ ವೈಲಕ್ಷಣ್ಯವಿದೆಯೆ?

**ಉತ್ತರ :-** ಪಂಚಪಾದಿಕೆಯಲ್ಲಿ ಅಧ್ಯಾಸಕ್ಕೆ ಉಪಾದಾನವಾದದ್ದೆಂಬ ಅಜ್ಞಾನವನ್ನು ಹೀಗೆ ಸಮರ್ಥಿಸಿದೆ : **"ಈ ಅವಿದ್ಯಾಶಕ್ತಿಯು ಹೊರಗಿನ ಮತ್ತು ಶರೀರದೊಳಗಿನ ವಸ್ತುಗಳಲ್ಲಿ ಅವುಗಳ ಸ್ವರೂಪಸತ್ತಾಮಾತ್ರಕ್ಕೆ ಸೇರಿಕೊಂಡು ಇದೆ ಎಂದು ಅವಶ್ಯವಾಗಿ ಒಪಬೇಕು.** ಏಕೆಂದರೆ ಹೀಗಲ್ಲದಿದ್ದರೆ ಮಿಥ್ಯಾಪದಾರ್ಥವು ತೋರಲಾರದು. ಇದು ವಸ್ತುಗಳಲ್ಲಿ ಅವುಗಳ ಸ್ವರೂಪವು ತೋರುವದಕ್ಕೆ ಅಡ್ಡಿಯಲ್ಲ; ಏಕೆಂದರೆ ಹಾಣವಿಲ್ಲದ್ದರಿಂದಲೇ ಅವುಗಳನ್ನು ಅರಿಯದಿರುವದೆಂಬುದು ಸಿದ್ಧವಾಗುತ್ತದೆ. ಬೆಳ್ಳಿಯು ೀರುವ ಮುಂಚೆಯೂ ಆಮೇಲೂ ಈ ಅವಿದ್ಯೆಯಿದ್ದರೂ ವಸ್ತುಸ್ವರೂಪವನ್ನು ಜನರು ಹಿಸುವದು ಕಂಡುಬರುತ್ತದೆ. ಆದ್ದರಿಂದ ಅಲ್ಲಿ ಅವು ಮತ್ತೊಂದು ರೂಪದಿಂದ ಕಾಣುವದಕ್ಕೆ ಮಾತ್ರವೇ ಆ ಅವಿದ್ಯಾಶಕ್ತಿಯು ಕಾರಣವಾಗಿರುತ್ತದೆ. ಪ್ರತ್ಯಗಾತ್ಮನಲ್ಲಾದರೊ, ಅವನು ಚೈತನ್ಯಸ್ವರೂಪನಾದರೂ ಸ್ವಯಂಪ್ರಕಾಶನಾಗಿದ್ದರೂ ಅವನ ಬ್ರಹ್ಮಸ್ವರೂಪವು ತಿಳಿಯಬರದೆ ಇರುವದಕ್ಕೆ ಮತ್ತೆ ಯಾವ ನಿಮಿತ್ತವೂ ಇಲ್ಲದ್ದರಿಂದ ಅವನಲ್ಲಿ ಸ್ವಭಾವದಿಂದಲೇ ಸಿದ್ಧವಾಗಿರುವ ಅವಿದ್ಯಾಶಕ್ತಿಯ ಅಡ್ಡಿಯಿಂದಲೇ ಅದು ತೋರದೆ ಇದೆ ಎನ್ನಬೇಕು. ಆದ್ದರಿಂದ ಅದು ಪ್ರತ್ಯಕ್ಚೈತನ್ಯದಲ್ಲಿ ಬ್ರಹ್ಮಸ್ವರೂಪವು ತೋರುವದಕ್ಕೆ ಅಡ್ಡಿಯಾಗಿರುತ್ತದೆ ; ಅದರಲ್ಲಿಲ್ಲದ ಅಹಂಕಾರವೇ ಮುಂತಾದದ್ದು ತೋರುವದಕ್ಕೂ ನಿಮಿತ್ತವಾಗಿರುತ್ತದೆ." ಪಂ. ಪಾ. ಪು. ೧೭.

(ಇದಿಷ್ಟೂ ಪಂಚಪಾದಿಕೆಗೆ ಮೀಸಲು ; ಭಾಷ್ಯದಲ್ಲಾಗಲಿ ಭಾಮತಿಯಲ್ಲಾಗಲಿ ಇದರ ಸುಳಿವಿಲ್ಲ)

ಇಲ್ಲಿ ಹೇಳಿರುವದರಲ್ಲಿ ನೆನಪಿಡಬೇಕಾದ ಮುಖ್ಯವಿಷಯಗಳಿವು :

(1) **ಬ್ರಹ್ಮವು ಜೀವನಾಗಿಯೂ ಶುಕ್ತಿಯು ಬೆಳ್ಳಿಯಂತೆಯೂ ತೋರುವದಕ್ಕೂ ಈ ಅವಿದ್ಯೆಯೇ ಕಾರಣ ಎಂದು ನಾವು ಕಲ್ಪಿಸಬೇಕಾಗಿದೆ.**

(2) ಇದಿಲ್ಲದಿದ್ದರೆ ಹೀಗೆ ಒಂದು ಪದಾರ್ಥವು ಇನ್ನೊಂದು ಬಗೆಯಿಂದ ತೋರಲು ಕಾರಣವಿರಲಾರದು- ಎಂಬ **ಅರ್ಥಾಪತ್ತಿಯೇ ಅವಿದ್ಯೆಗೆ** ಪ್ರಮಾಣ.

(3) ಚೈತನ್ಯಕ್ಕೆ ಇದರ **ಆವರಣವು**- ಮುಸುಕು- ಇರುವದರಿಂದಲೇ ಅದರ ಬ್ರಹ್ಮಸ್ವರೂಪವು ತಿಳಿಯಬರುವದಿಲ್ಲ; ಕಪ್ಪೆಯಚಿಪ್ಪು ಮುಂತಾದ ಹೊರಗಿನ ವಸ್ತುಗಳಿಗೆ ಯಾವ ಮುಸುಕೂ ಇಲ್ಲದಿದ್ದರೂ ಪ್ರಮಾಣಜ್ಞಾನವುಂಟಾಗುವವರೆಗೆ ಅವುಗಳು ತಿಳಿಯಬರುವದಿಲ್ಲ.

**ಭಾಮತೀಕಾರರು** ಮೇಲೆ ಹೇಳಿದಂತೆ ಅಧ್ಯಾಸಕ್ಕೆ ಉಪಾದಾನವಾದ ಅನಿರ್ವಾಚ್ಯಾವಿದ್ಯೆಯನ್ನು ಸಾಧಿಸಿರುವದಿಲ್ಲವಾದರೂ ಇನ್ನೊಂದು ರೀತಿಯಿಂದ ಪಂಚಪಾದಿಕೆಯ ಕಡೆಗೇ ತಮ್ಮ ಮತವನ್ನು ಕೊಟ್ಟಿರುತ್ತಾರೆ. ಹೇಗೆಂದರೆ:

**ಪಂಚಪಾದಿಕೆ :** - ''ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಅಹಂಕಾರವೇ ಮುಂತಾದ ವಿಕ್ಷೇಪಗಳ ಸಂಸ್ಕಾರವಾಗಿ ಉಳಿದುಕೊಂಡಿದ್ದು ಮತ್ತೆ ಉದ್ಭವವಾಗುತ್ತದೆ. ಆದ್ದರಿಂದ ಅಹಂಕಾರಮಮಕಾರರೂಪದ ಮನುಷ್ಯಾದ್ಯಭಿಮಾನವೆಂಬ ಲೋಕವ್ಯವಹಾರವು ನೈಸರ್ಗಿಕವಾದರೂ ಈ ಮಿಥ್ಯಾರೂಪದ ಅಜ್ಞಾನದ ಕಾರ್ಯವೆಂದಿದೆಯೇ ಹೊರತು ಆಗಂತುಕವೆಂಬ ಅಭಿಪ್ರಾಯದಿಂದಲ್ಲ.'' ಪಂ. ಪಾ. ಪು. ೧೭-೧೮.

ಭಾಮತಿ :- (೧) ''ಪ್ರಾಣಮಾತ್ರವು ಸುಷುಪ್ತಿಯಲ್ಲಿ ಉಳಿದಿರುತ್ತದೆ, ಪ್ರಲಯದಲ್ಲಿ ಅದೂ ಉಳಿದಿರುವದಿಲ್ಲ. ಆದರೂ ಕರ್ಮವಿಕ್ಷೇಪಸಂಸ್ಕಾರದಿಂದೊಡಗೂಡಿದ ಲಯಲಕ್ಷಣವಾದ ಅವಿದ್ಯೆಯು ಉಳಿದುಕೊಂಡಿರುವದೆಂಬ ವಿಷಯದಲ್ಲಿ ಈ ಎರಡವಸ್ಥೆಗಳೂ ಒಂದೇ.'' ವಾ. ಭಾ. ೧-೩-೩೦, ಪು. ೩೩೫.

(೨) ಮಹಾಪ್ರಲಯದಲ್ಲಿ ಅಂತಃಕರಣಾದಿಗಳು ವ್ಯಾಪಾರಮಾಡುವ ರೂಪದಲ್ಲಿದ್ದು ಕೊಂಡಿರುವದಿಲ್ಲವಾದರೂ ತಮ್ಮ **ಕಾರಣವಾದ ಅನಿರ್ವಾಚ್ಯಾವಿದ್ಯೆಯಲ್ಲಿ** ಲಯವಾಗಿರು ತ್ತವೆ, ಸೂಕ್ಷ್ಮವಾದ ಶಕ್ತಿರೂಪದಿಂದ ಕರ್ಮವಿಕ್ಷೇಪಕ್ಕೆ ಕಾರಣವಾಗಿರುವ ಅವಿದ್ಯಾವಾಸನೆ ಗಳಿಂದೊಡಗೂಡಿ ಇದ್ದುಕೊಂಡೇ ಇರುತ್ತವೆ.'' ವಾ. ಭಾ. ೩೩೩.

**ಭಾಮತೀಕಾರರು** 'ಅಧ್ಯಾಸವೇ ಅವಿದ್ಯೆ' ಎಂಬುದನ್ನು ಒಪ್ಪಿರುವದೊಂದು ವಿಶೇಷ ಆದರೂ ಹೀಗೆ ಸುಷುಪ್ತಿಯಲ್ಲಿಯೂ ಪ್ರಲಯದಲ್ಲಿಯೂ ಇರುವ ಜಗತ್ತಿನ ಸೂಕ್ಷ್ಮಸ್ಥಿತಿಯಾದ **ಅವ್ಯಾಕೃತವನ್ನು ಅವಿದ್ಯೆಯೆಂದಿರುವದು ಭಾಮತೀಪಂಚಪಾದಿಕೆ ಗಳೆರಡಕ್ಕೂ ಸಮಾನವಾಗಿವೆ.** ಪಂಚಪಾದಿಕೆಯಲ್ಲಿ ಉಪಾದಾನಕಾರಣವಾದ ಅವಿದ್ಯೆಗೆ ಇಷ್ಟು ಹೆಸರುಗಳನ್ನು ಕೊಟ್ಟಿದೆ : ''ನಾಮರೂಪ, ಅವ್ಯಾಕೃತ, ಅವಿದ್ಯೆ, ಮಾಯೆ, ಪ್ರಕೃತಿ, ಅಗ್ರಹಣ, ಅವ್ಯಕ್ತ, ತಮಸ್ಸು, ಕಾರಣ, ಲಯ, ಶಕ್ತಿ, ಮಹಾಸುಪ್ತಿ, ನಿದ್ರೆ, ಅಕ್ಷರ, ಆಕಾಶ.'' ಪಂ. ಪಾ. ೭೯.

**ಪ್ರಶ್ನೆ :-** ಅವಿದ್ಯೆಯ ವಿಷಯದಲ್ಲಿ ಪಂಚಪಾದಿಕೆಗೂ ಭಾಮತಿಗೂ ಮತ್ತೇನಾದರೂ ಸಾಮ್ಯವೈಷಮ್ಯಗಳಿವೆಯೆ?

**ಉತ್ತರ :-** ಅವಿದ್ಯೆಗೆ ಜೀವನೇ ಆಶ್ರಯವೆಂಬುದು ಈ ಎರಡು ಪ್ರಸ್ಥಾನಕ್ಕೂ ಸಮಾನ. ಪಂ. ಪಾ. ೫೭ನೆ ಪುಟದಲ್ಲಿ ಹೀಗಿದೆ :

**ಆಕ್ಷೇಪ :-** (೧) ಜೀವನು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದು ಹೇಳಿದಿರಲ್ಲ !

(ಸಮಾಧಾನ) :- ನಿಜ. ಆದ್ದರಿಂದಲೇ ಅರ್ಥವಶದಿಂದ ಜೀವನಲ್ಲಿ ಬ್ರಹ್ಮ ಸ್ವರೂಪವನ್ನು ಮುಸುಕಿಕೊಂಡಿರುವ **ಅವಿದ್ಯೆಯನ್ನು ಕಲ್ಪಿಸಬೇಕಾಗಿದೆ.**

**(ಛಾಂದೋಗ್ಯ, ಮುಂಡಕ- ಈ ಶ್ರುತಿಗಳಲ್ಲಿ ಅವಿದ್ಯೋಪದೇಶವನ್ನು ಮಾಡಿದೆ ಎಂದೂ ವಿದ್ಯೋಪದೇಶಬಲದಿಂದ ಬಂದೊದಗುವ ಶ್ರುತ್ಯರ್ಥಾಪತ್ತಿಯನ್ನೂ ಹೇಳಿದಬಳಿಕ ಈ ದೃಷ್ಟಾರ್ಥಾಪತ್ತಿಯನ್ನೂ ಕೊಟ್ಟಿದೆ.)**

(೨) ''ಅವಿದ್ಯೆಯು ಬ್ರಹ್ಮಾಶ್ರಿತವಲ್ಲ, ಜೀವಾಶ್ರಿತ; ಅದು ಅನಿರ್ವಚನೀಯವೆಂದೂ ಹೇಳಿದ್ದೇವೆ.'' ವಾ. ಭಾ. ಪು. ೧೨೬.

**(ಇಲ್ಲಿ ಕಾರ್ಯಕಾರಣಾವಿದ್ಯೆಗಳನ್ನು ಜೀವಾಶ್ರಿತವೆಂದಿದೆ.)**

ಹೀಗೆ **ಆಶ್ರಯವಿಷಯದಲ್ಲಿ ಎರಡು ಪ್ರಸ್ಥಾನಗಳಿಗೂ ಸಾಲಕ್ಷಣ್ಯವಿದ್ದರೂ** ಅನಂತಜೀವರು ಕಾಣುವದೇಕೆಂಬ ಬಗ್ಗೆ ಅಭಿಪ್ರಾಯವೈಲಕ್ಷಣ್ಯವಿದೆ. ಹೇಗೆಂದರೆ :

(೩) ''ಅನಾದಿಸಿದ್ಧವಾದ ಅವಿದ್ಯೆಯಿಂದ ಅವಚ್ಛಿನ್ನವಾಗಿರುವ ಅನಂತ ಜೀವರುಗಳ ತೋರಿಕೆಗೆ ಆಸ್ಪದವಾಗಿ ಏಕರಸವಾಗಿರುವದು ಬ್ರಹ್ಮವು ಎಂದು ಶ್ರುತಿಸ್ಮೃತಿನ್ಯಾಯಗಳಲ್ಲಿ ಕುಶಲರಾದವರು ಒಪ್ಪಬೇಕು.'' ಪಂ. ಪಾ. ೫೭-೫೮.

(೪) ''ಸಾಂಖ್ಯರು ಎಲ್ಲಾ ಜೀವರುಗಳಿಗೂ ಪ್ರಧಾನವು ಒಂದೇ ಎಂದು ಹೇಳುವಂತೆ ನಾವು ಅವಿದ್ಯೆಯು ಒಂದೇ ಎಂದು ಹೇಳುವದಿಲ್ಲ. **ಒಬ್ಬೊಬ್ಬ ಜೀವರಿಗೆ ಒಂದೊಂದು ಬೇರೆಬೇರೆಯ ಅವಿದ್ಯೆ ಇದೆ ಎನ್ನುತ್ತೇವೆ.** ಹೀಗಾದರೆ, ಅವಿದ್ಯೋಪಾಧಿಭೇದವು ಸಿದ್ಧವಾದರೆ ಅವಿದ್ಯಾಭೇದವು ಸಿದ್ಧವಾಗುತ್ತದೆ- ಎಂದು ಅನ್ಯೋನ್ಯಾಶ್ರಯದೋಷವು ಬರುವದೆನ್ನುವದಕ್ಕಿಲ್ಲ. ಏಕೆಂದರೆ ಬೀಜಾಂಕುರಗಳಂತೆ ಅನಾದಿಯಾಗಿರುವದರಿಂದ ಎರಡೂ ಸಿದ್ಧವಾಗುತ್ತದೆ. **ಅವಿದ್ಯೆಯೇ ಆಗಿವೆ ಎಂಬುದೊಂದೇ ಕಾರಣದಿಂದ 'ಅವ್ಯಕ್ತ'ವೆಂದೂ 'ಅವ್ಯಾಕೃತ' ವೆಂದೂ ಏಕವಚನದಿಂದ ಉಪಚಾರಕ್ಕೆ ಕರೆದಿರುತ್ತದೆ.'' ವಾ. ಭಾ. ಪು. ೩೭೭, ೩೭೮**

‘ಅಜ ‘ಅವ್ಯಾಕೃತ’- ಎಂಬಿವೆರಡೂ ಅವಿದ್ಯೆಗೆ ಹೆಸರೆಂದು ಸ್ಪಷ್ಟವಾಗಿ ಹೇಳಿರುವದನ್ನು ಲಕ್ಷಿಸಬೇಕು. ಬೀಜಾಂಕುರನ್ಯಾಯವೆಂಬ ಬ್ರಹ್ಮಾಸ್ತ್ರದಿಂದ ಅನ್ಯೋನ್ಯಾಶ್ರಯ ದೋಷವನ್ನು ಖಂಡಿಸುವದೆಂದರೆ ವಾಚಸ್ಪತಿಮಿಶ್ರರಿಗೆ ಬಹಳ ಮೆಚ್ಚು.)

**ಒಂದೇ ಅವಿದ್ಯೆಯಿಂದ ಅನೇಕ ಜೀವತ್ವಾಧ್ಯಾಸವಾಗಿದೆ ಎಂದು ಪಂಚಪಾದಿಕೆ, ಅನೇಕವಿದ್ಯೆಗಳಿಂದ ಅದಾಗಿದೆ ಎಂದು ಭಾಮತಿ. ಅವಿದ್ಯೆಯು ಯಾರಿಗೆ? - ಎಂಬ ಪ್ರಶ್ನೆಯಾಗಲಿ, ಅವಿದ್ಯೆಗಳು ಎಷ್ಟು?- ಎಂಬ ಪ್ರಶ್ನೆಯಾಗಲಿ ಅದನ್ನು ನಿರ್ಧಾರಣ ಮಾಡುವ ಯತ್ನವಾಗಲಿ ಭಾಷ್ಯದಲ್ಲಿಲ್ಲ. ಏಕೆಂದರೆ ಆಶ್ರಯಸಂಖ್ಯಾಪ್ರಶ್ನೆಯೇ ಅವಿದ್ಯೆಯ ಫಲವೆಂಬುದು ಭಾಷ್ಯಕಾರರ ಮತ.**

## ಪ್ರಮಾಣಗಳ ವಿಷಯಕ್ಕೆ
## ಭಾಷ್ಯಕ್ಕೂ ವ್ಯಾಖ್ಯಾನಗಳಿಗೂ ವಿರೋಧ

**ಪ್ರಶ್ನೆ :-** ಅವಿದ್ಯೆಯ ವಿಷಯಕ್ಕೆ ವ್ಯಾಖ್ಯಾನಕಾರರು ಪ್ರಮಾಣವನ್ನು ಕೊಟ್ಟಿಲ್ಲವೆ? ಕೊಟ್ಟಿದ್ದರೆ ಅದನ್ನೇಕೆ ತಿರಸ್ಕರಿಸಬೇಕು?

**ಉತ್ತರ :-** (1) ಪಂಚಪಾದಿಕೆಯಲ್ಲಿ ಶ್ರುತ್ಯರ್ಥಾಪತ್ತಿ, ದೃಷ್ಟಾರ್ಥಾಪತ್ತಿ- ಎಂಬ ಪ್ರಮಾಣಗಳನ್ನು ಕೊಟ್ಟು ಅವಿದ್ಯೆಯನ್ನು ಸಮರ್ಥಿಸಿರುತ್ತಾರೆ.

(2) ಪಂಚಪಾದಿಕೆಯ ವ್ಯಾಖ್ಯಾನವೆಂದು ಬರೆದಿರುವ **ವಿವರಣದಲ್ಲಿ** ಪ್ರತ್ಯಕ್ಷ, ಅನುಮಾನ, ಅರ್ಥಾಪತ್ತಿ, ಶ್ರುತಿ- ಎಂಬ ಎಲ್ಲಾ ಪ್ರಮಾಣಗಳನ್ನೂ ಕೊಟ್ಟಿರುತ್ತದೆ (ಪಂ. ವಿ. ಪು. ೧೨-೧).

(3) **ಇಷ್ಟಸಿದ್ಧಿ** ಎಂಬ ಸ್ವತಂತ್ರಪ್ರಕರಣದಲ್ಲಿ : ‘ಅನುಭೂತಿ’ ರೂಪನಾಗಿರುವ ಆತ್ಮನಿಗೂ ದೃಶ್ಯವಾಗಿರುವ ಪ್ರಪಂಚಕ್ಕೂ ಭೇದವಾಗಲಿ, ಅಭೇದವಾಗಲಿ, ಭೇದಾಭೇದಾವಾಗಲಿ ಸಿದ್ಧವಾಗದೆ ಇರುವದರಿಂದ ಅದು ಅನಿರ್ವಚನೀಯವೆನ್ನಬೇಕಾಗಿದೆ. ಪ್ರಪಂಚವು ಅನಿರ್ವಚನೀಯವಾದ ಮಾಯೆ- ಅಥವಾ ಅವಿದ್ಯೆ-ಯಿಂದ ಆಗಿದೆ. ಎಂದು ಏರ್ಪಡುತ್ತದೆ ಎಂದು ತರ್ಕದಿಂದ ಸಿದ್ಧಪಡಿಸಿ ಇದೇ ಶ್ರುತ್ಯಭಿಪ್ರಾಯವೆಂದು ಇದಕ್ಕೆ ಶ್ರುತಿಯನ್ನು ಪ್ರಮಾಣವಾಗಿ ಉದಾಹರಿಸಿದೆ. (ಇ. ಸಿ. ೩೫-೩೭)

(4) **ಭಾಮತಿಯಲ್ಲಿ ಆತ್ಮತತ್ತ್ವವು** ನಿರವಚ್ಛಿನ್ನವಾಗಿರುವ ಆನಂದ ಚೈತನ್ಯೈಕರಸಸ್ವರೂಪವಾಗಿರುವ ಅದ್ವಿತೀಯರೂಪವಾಗಿದೆ ಎಂದು ಶ್ರುತಿ ಸ್ಮೃತೀತಿಹಾಸ ಪುರಾಣಗಳಲ್ಲಿ ಹೇಳಿರುವದರಿಂದ ‘ನಾನು’ ಎಂಬ ಅನುಭವವು ಇದಕ್ಕೆ ವಿರುದ್ಧವಾಗಿದೆ ಎಂಬ ಕಾರಣದಿಂದ

ಇದನ್ನು ದುಷ್ಟ (ಅವಿದ್ಯಾಕೃತ) ವೆನ್ನಬೇಕಾಗಿದೆ (ವಾ. ಭಾ. ೮-೯) ಎಂದು ಬರೆದಿದೆ. (ಇವರ ಮತದಲ್ಲಿ ಅವಿದ್ಯೆ ಎಂದರೆ ಅಧ್ಯಾಸವೆಂಬ ಅಭಿಪ್ರಾಯವೂ ಉಂಟೆಂಬುದನ್ನು ಮೊದಲೇ ಹೇಳಿದ್ದೇವೆ). ಇದರ ಜೊತೆಗೆ **ಪಂಚಪಾದಿಕೆಯಲ್ಲಿ** ಅಧ್ಯಾಸಕ್ಕೆ ಲಕ್ಷಣವನ್ನೂ ಸಂಭಾವನೆಯನ್ನೂ ಉಪಪಾದಿಸುವದರಿಂದ ಪ್ರಯೋಜನವೇನು? 'ಎಲ್ಲಾ ಲೌಕಿಕವೈದಿಕ ಪ್ರಮಾಣಪ್ರಮೇಯವ್ಯವಹಾರಗಳೂ ಶಾಸ್ತ್ರಗಳೂ ಅಧ್ಯಾಸಪುರಃಸರವಾಗಿ ಹೊರಟಿವೆ' ಎಂಬುದನ್ನು ತಿಳಿಸುವದಕ್ಕೇ ಏತಕ್ಕೆ ಪ್ರಾರಂಭಿಸಬಾರದು?- ಎಂದು ಶಂಕಿಸಿ 'ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವುಳ್ಳವನಿಗೇ ಪ್ರಮಾತೃತ್ವವಿದೆ- ಎಂದು ತಿಳಿಸಿದ ಮಾತ್ರದಿಂದ ಅದು ಅಧ್ಯಾಸಾತ್ಮಕವೆಂತ ಏರ್ಪಡುವದಿಲ್ಲ. ಏಕೆಂದರೆ ಶುಕ್ತಿರಜತಾದಿಗಳಂತೆ ಬಾಧಿತವಾಗುವದಿಲ್ಲವಾದ್ದರಿಂದ 'ಇದು ಸಂಭಾವಿತವೆ?' - ಎಂಬ ಶಂಕೆ ಬರಬಹುದು. ಆದ್ದರಿಂದ ಅದು ಸಂಭಾವಿತವೆಂದೂ ತೋರಿಸಬೇಕು- ಎಂದು (ಪಂ. ೨೧-೨೩) ಬರೆದಿದೆ. ಇದರ ಆಶಯವನ್ನು ಸ್ಪಷ್ಟಪಡಿಸುವದಕ್ಕಾಗಿ **ವಿವರಣದಲ್ಲಿ** 'ಎಲ್ಲಿ ಅಧ್ಯಾಸವಿಲ್ಲವೋ ಅಲ್ಲಿ ವ್ಯವಹಾರವೂ ಇಲ್ಲವೆಂದುಕಂಡಿದೆ' ಎಂದು ವ್ಯತಿರೇಕಾನುಮಾನವನ್ನು ತೋರಿಸುವದು ಭಾಷ್ಯದ ಅರ್ಥವೆಂದು ಬರೆದಿದೆ. ಪ್ರತ್ಯಕ್ಷ, ಅನುಮಾನ, ಅರ್ಥಾಪತ್ತಿ- ಇವುಗಳಲ್ಲದೆ ಆಗಮದಿಂದಲೂ ಅಧ್ಯಾಸವು ಸೂಚಿತವಾಗಿದೆ ಎಂಬರ್ಥವು ಬರುವಂತೆ ಪಂಚಪಾದಿಕೆಯ ಅರ್ಥವನ್ನು ವಿವರಿಸಿದೆ (ಪಂ. ವಿ. ೮೮-೯೩). 1

ಹೀಗೆ ತಾವು ಒಪ್ಪಿರುವ ಅವಿದ್ಯೆಗೂ ಅಧ್ಯಾಸಕ್ಕೂ ವ್ಯಾಖ್ಯಾನಗಳಲ್ಲಿ ಪ್ರಮಾಣಗಳನ್ನೂ ಕೊಟ್ಟಿದ್ದರೂ **ಪ್ರಮಾಣವ್ಯವಹಾರವೇ ಅವಿದ್ಯಾಪೂರ್ವಕವಾಗಿರುತ್ತದೆ ಎಂಬ ಅನುಭವಾನುಸಾರಿಯಾದ ಭಾಷ್ಯಪ್ರಕ್ರಿಯೆಗೆ ಇವೆಲ್ಲವೂ ವಿರುದ್ಧವಾಗಿರುತ್ತವೆ.** ಆದ್ದರಿಂದ ಇವುಗಳನ್ನು ಒಪ್ಪುವಹಾಗಿಲ್ಲ. ವಿವರಣದಲ್ಲಿ ಅವಿದ್ಯೆಯು ಅಭಾವವಿಲಕ್ಷಣವೆಂದು ಪ್ರಮಾಣಗಳಿಂದ ತೋರಿಸುವದಕ್ಕೇ ಪ್ರಮಾಣವನ್ನು ಕೊಟ್ಟಿದೆಯೇ ಹೊರತು ಅವಿದ್ಯಾಸಿದ್ಧಿಗಲ್ಲ; ಅವಿದ್ಯೆಯು ಸಾಕ್ಷಿಸಿದ್ಧವಾಗಿದೆ (ಪಂ. ವಿ. ೪೩)- ಎಂದು ದೋಷವನ್ನು ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸಲಾಗಿದೆ. ಆದರೆ ಸಾಕ್ಷಿಸಿದ್ಧವಾಗಿರುವ ಅವಿದ್ಯೆಯ ವಿಷಯಕ್ಕೆ ವಾದಿಗಳು ಏತಕ್ಕೆ ಭಿನ್ನಾಭಿಪ್ರಾಯವುಳ್ಳವರಾಗಿರುತ್ತಾರೆ?- ಎಂಬ ಪ್ರಶ್ನೆಗೆ ಆ ಗ್ರಂಥದಲ್ಲಿ ಉತ್ತರವಿಲ್ಲ.

**ಅಂತೂ ವ್ಯಾಖ್ಯಾನಗಳು ಒಂದಕ್ಕೊಂದು ಹೊಂದುವದಿಲ್ಲ, ಭಾಷ್ಯಕ್ಕೂ ಯುಕ್ತ್ಯನುಭವಗಳಿಗೂ ಇವು ವಿರುದ್ಧ.**

**ಪ್ರಶ್ನೆ :-** ಹಾಗಾದರೆ ಅವರು ಕೊಟ್ಟಿರುವ ಪ್ರಮಾಣಗಳಿಗೆ ಏನೂ ಬೆಲೆಯಿಲ್ಲವೆ?

1. ಪಂಚಪಾದಿಕಾವಿವರಣದ ಪುಟಗಳನ್ನು ಕಾಶಿಯಲ್ಲಿ ಲಾಜರಸ್ ಕಂಪೆನಿಯಲ್ಲಿ ಅಚ್ಚಾಗಿರುವ ಪುಸ್ತಕದಂತೆ ಕೊಟ್ಟಿರುತ್ತದೆ.

ಪ್ರಮಾಣಗಳನ್ನು ಇಲ್ಲಿ ಉಪಯೋಗಿಸುವದು ಸರಿಯೆ - ಎಂಬುದನ್ನು ವ್ಯಾಖ್ಯಾನಕಾರರಿಬ್ಬರೂ ವಿಮರ್ಶೆಮಾಡಿರುವದಿಲ್ಲ. ಆಚಾರ್ಯರು ಪ್ರಮಾತೃವಿನ ಆತ್ಮನು ಸ್ವಯಂಸಿದ್ಧನಾಗಿರುವದರಿಂದ ಪ್ರಮಾಣವ್ಯವಹಾರಕ್ಕಿಂತ ಮೊದಲೇ ಸಿದ್ಧನಾಗಿರುತ್ತಾನೆ; ಅವನು ಮೊದಲು ಸಿದ್ಧನಾಗಿಯೇ ಇದ್ದು ತಿಳಿಯಬೇಕಾಗಿರುವ ಪ್ರಮೇಯಗಳನ್ನು ಅರಿತುಕೊಳ್ಳುವದಕ್ಕೆ ಪ್ರಮಾಣಗಳನ್ನು ಬಳಸುತ್ತಾನೆ ಎಂದು (ಸೂ. ಭಾ. ೨-೩-೭, ಭಾ. ಭಾ. ೯೦) ಬರೆದಿರುತ್ತಾರೆ. ಆದ್ದರಿಂದ **ಅವಿದ್ಯೆಯ ಸಿದ್ಧಿಗಾಗಿ ಪಂಚಪಾದಿಕೆಯಲ್ಲಿಯೂ ವಿವರಣದಲ್ಲಿಯೂ ಪ್ರಮಾಣಗಳನ್ನು ಉದಾಹರಿಸಿರುವದು ಸರಿಯಲ್ಲ.** ಈ ಎರಡು ಗ್ರಂಥಗಳಲ್ಲಿಯೂ 'ಅವಿದ್ಯೆ' ಎಂದರೆ ನಾಮರೂಪಗಳ ಬೀಜವಾದ ಪ್ರಕೃತಿ ಎಂಬರ್ಥವನ್ನಿಟ್ಟುಕೊಂಡಿರುವದರಿಂದ ಅದೂ ಪ್ರಮೇಯವೇ ಆಗುತ್ತದೆ ; ಆದ್ದರಿಂದ ಅದರ ಸಿದ್ಧಿಗಾಗಿ ಪ್ರಮಾಣಗಳನ್ನು ಉದಾಹರಿಸಬಹುದಾದರೂ ಅದಕ್ಕೂ ಅಧ್ಯಾಸರೂಪವಾದ ಅವಿದ್ಯೆಗೂ ಇರುವ ವೈಲಕ್ಷಣ್ಯವನ್ನು ಮನದಂದುಕೊಳ್ಳದೆಯೇ 'ನಾನು ಅಜ್ಞನು' ಮುಂತಾದ ಪ್ರತ್ಯಕ್ಷವನ್ನೂ ಶ್ರುತಿಯನ್ನೂ ಅರ್ಥಾಪತ್ತಿಯನ್ನೂ ಅದರ ಸಿದ್ಧಿಗೆ ಉದಾಹರಿಸಿರುವದು ಸರಿಯಾಗಿಲ್ಲ, ಅಧ್ಯಾಸರೂಪವಾದ ಅವಿದ್ಯೆಯು ಅನುಭವಸಿದ್ಧವಾಗಿರುವದರಿಂದ ಅದಕ್ಕೆ ಪ್ರಮಾಣವನ್ನು ಕೊಡುವದೂ ಅದನ್ನು ಪ್ರಮೇಯವಾಗಿದ್ದಂತೆ ಭಾವಿಸಿ ಪ್ರಮಾಣಗಳ ಮೂಲಕ ಪರೀಕ್ಷಿಸುವದೂ ಕಾರ್ಯಕಾರಣಾದಿ ವ್ಯವಹಾರಗಳೆಲ್ಲ ಅಧ್ಯಾಸರೂಪವಾದ ಅವಿದ್ಯೆಯಿಂದಾಗಿವೆ ಎಂದು ಹೇಳುವ ಪ್ರಕರಣದಲ್ಲಿ ಅಧ್ಯಾಸವು ಕಾರ್ಯವೆಂದು ಕಲ್ಪಿಸಿ ಅದಕ್ಕೆ ಅವಿದ್ಯಾಶಕ್ತಿಯು ಉಪಾದಾನಕಾರಣವೆಂದು ಹೇಳುವುದೂ ತಪ್ಪೇ ಆಗಿರುತ್ತದೆ.

ಭಾಮತಿಯಲ್ಲಿ ಅಧ್ಯಾಸರೂಪವಾದ ಅವಿದ್ಯಾಸಿದ್ಧಿಗೆ ಪ್ರಮಾಣಗಳನ್ನು ಉದಾಹರಿಸಿದಂತೆ ಕಾಣಲಿಲ್ಲ. ಆದರೂ 'ಪ್ರತ್ಯಕ್ಷಾದಿಪ್ರಮಾಣಗಳಿಗೂ ಶ್ರುತಿಗೂ ವಿರೋಧವು ತೋರುವಾಗ ಶ್ರುತಿಯೇ ಪ್ರಬಲ' ಎಂಬ ಮಂಡನಮಿಶ್ರಾಚಾರ್ಯನ ಯುಕ್ತಿಯನ್ನು ಅಧ್ಯಾಸವಿಮರ್ಶೆಗೆ ತಂದಿರುವದು (ವಾ. ಭಾ. ಪು. ೯-೧೧) ಅವಿದ್ಯಾಪುರಸ್ಸರವಾಗಿಯೇ ಪ್ರಮಾಣಪ್ರಮೇಯವ್ಯವಹಾರವೆಂದು ಆಚಾರ್ಯರು ಅನುಭವಾನುಸಾರವಾಗಿ ತೋರಿಸಿ ಕೊಟ್ಟಿರುವದಕ್ಕೆ ವಿರುದ್ಧವಾಗಿದೆ. ಇದು 'ಪ್ರಮಾಣಗಳು ತಮ್ಮ ತಮ್ಮ ವಿಷಯವನ್ನು ಮಾತ್ರ ತಿಳಿಸುತ್ತವೆಯೇ ಹೊರತು ಅವುಗಳಲ್ಲಿ ಒಂದೊಂದಕ್ಕೆ ವಿರೋಧವೇನೂ ಇರುವಂತಿಲ್ಲ' ಎಂಬ (ಬೃ. ೨-೧-೨೦ ಭಾ. ಭಾ. ೩೧೫-೩೨೧, ೩೨೫) ಬೃಹದಾರಣ್ಯಭಾಷ್ಯಕ್ಕೂ ವಿರುದ್ಧವಾಗಿದೆ. **ಪ್ರಮಾಣ**ವೆಂದರೆ ಮತ್ತೊಂದು ಪ್ರಮಾಣವು ತಿಳಿಸದೆ ಇರುವ ವಿಷಯವನ್ನೇ ತಿಳಿಸುವ ಸಾಧನವು; ಆದ್ದರಿಂದ ಪ್ರಮಾಣಗಳಿಗೆ ಪರಸ್ಪರವಿರೋಧವಿರುವ ಸಂಭವವೇ ಇಲ್ಲ- ಎಂಬ ಯುಕ್ತಿಗೂ ಇದು ವಿರುದ್ಧವಾಗಿರುತ್ತದೆ.

**ಪ್ರಶ್ನೆ** :- ಭಾಷ್ಯಕಾರರು ಪ್ರಮಾಣಪ್ರಮೇಯವ್ಯವಹಾರವು ಅವಿದ್ಯಾಪೂರ್ವಕ ವಾಗಿಯೇ ಉಂಟಾಗುತ್ತದೆ ಎಂದು ಬರೆದಿರುವದನ್ನು ಈ ವ್ಯಾಖ್ಯಾನಗಳು ಹೇಗೆ ವಿವರಿಸಿವೆ?

**ಪಂಚಪಾದಿಕೆ**ಯಲ್ಲಿ ಭಾಷ್ಯದಂತೆಯೇ ಪ್ರಮಾತೃತ್ವವು ಅವಿದ್ಯೆಯ ಕಾರ್ಯ ವೆಂಬುದನ್ನು ಹೇಳಿದೆ. ಆದರೆ ಪ್ರಮಾಣಗಳು 'ಪ್ರಮಾತೃವನ್ನಾಶ್ರಯಿಸಿರಬೇಕು, ಅವಿದ್ಯಾವಂತ ನನ್ನಲ್ಲವಲ್ಲ!' ' ಅವಿದ್ಯಾವಂತರಿಗೇ, ಪ್ರಮಾಣಗಳ ವ್ಯಾಪಾರವೆಂದಾದರೆ ಅವು ಪ್ರಮಾಣಗಳು ಹೇಗಾದಾವು?' ಎಂಬ ಎರಡು ಹೆಚ್ಚಿಗೆಯ ಆಕ್ಷೇಪಗಳನ್ನು ತೆಗದು (ಪಂ. ಪು. ೧೨೩) ಅವಿದ್ಯಾದೋಷವು ಆಗಂತುಕವಲ್ಲವಾದ್ದರಿಂದ ಅದರಲ್ಲಿ ಜನರಿಗೆ ದೋಷಬುದ್ಧಿ ಯುಂಟಾಗುವದಿಲ್ಲ; ಆದ್ದರಿಂದ ಪ್ರಮಾಣಗಳ ಪ್ರಾಮಾಣ್ಯಕ್ಕೇನೂ ಹಾನಿಯಿಲ್ಲ ಎಂಬ ಸಮಾಧಾನವನ್ನು ಹೇಳಿದೆ. (ಪಂ. ಪು. ೧೨೭)

**ಭಾಮತಿಯಲ್ಲಿ**ಯೂ ಈ ವಿಷಯದಲ್ಲಿ ಬಲುಮಟ್ಟಿಗೆ ಪಂಚಪಾದಿಕೆಯನ್ನೇ ಅನುಸರಿಸಿದೆ.

ಭಾಷ್ಯವು 'ಪ್ರಮಾಣವ್ಯವಹಾರವು ಅವಿದ್ಯಾವದ್ವಿಷಯವೆಂಬುದು ಹೇಗೆ?' ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದಕ್ಕೆ ಪ್ರಯತ್ನಿಸಿದೆಯೇ ಹೊರತು ಅವಿದ್ಯಾವಂತರಿಗೆ ಆಗುವ ತಿಳಿವಳಿಕೆಯು ಪ್ರಮೆ ಎಂದರೆ ಸರಿಯಾದ ತಿಳಿವಳಿಕೆ ಎಂದು ಹೇಗೆ ತಾನೆ ಆದೀತು?- ಎಂದಾಗಲಿ, ಪ್ರಮಾಣಗಳು ಅವಿದ್ಯಾವಂತರಿಗೆ ಎಂಬುದು ಹೇಗೆ ಸಮಂಜಸವಾದೀತು?- ಎಂದಾಗಲಿ ಶಂಕೆಯನ್ನು ತೆಗೆದಿಲ್ಲ. **ಆದ್ದರಿಂದ ವ್ಯಾಖ್ಯಾನಗಳು ಭಾಷ್ಯಾಶಯವನ್ನು ಸ್ಫುಟಗೊಳಿಸುವದಿಲ್ಲವೆಂಬುದಿಷ್ಟೇ ಅಲ್ಲ; ವೇದಾಂತಕ್ಕೆ ವಿಷಯವೇ ಅಲ್ಲದ ತರ್ಕಶಾಸ್ತ್ರಕ್ಕೆ ಸಂಬಂಧಪಟ್ಟಿರುವ ಪ್ರಮಾಣತತ್ತ್ವದ ವಿಚಾರವನ್ನು ಇಲ್ಲಿಗೆ ಎಳೆತಂದು ಪ್ರಕೃತವಿಷಯದ ಜಿಜ್ಞಾಸೆಗೆ ತೊಡರನ್ನು ಉಂಟುಮಾಡಿವೆ. ವೇದಾಂತದಲ್ಲಿ ಆತ್ಮಾದಿತತ್ತ್ವಗಳನ್ನು ಅನುಭವದಿಂದ ತಿಳಿಸಿಕೊಡುವದಕ್ಕೆ ಹೊರಟಿದೆಯೇ ಹೊರತು ಅವನ್ನು ಪ್ರಮಾಣಗಳಿಂದ ತಿಳಿಸುವದಕ್ಕೆ ಎಲ್ಲಿಯೂ ಪ್ರಯತ್ನಿಸಿಲ್ಲ** ಎಂಬುದನ್ನು ವ್ಯಾಖ್ಯಾನಗಳು ಕಡೆಗಣಿಸಿದಂತಾಗಿದೆ.

## ಅಧ್ಯಾಸದ ದೃಷ್ಟಾಂತಗಳನ್ನು ವ್ಯಾಖ್ಯಾನಗಳು ಉಪಯೋಗಿಸಿರುವ ರೀತಿ

**ಪ್ರಶ್ನೆ :-** ಶುಕ್ತಿ ರಜತಾದಿದೃಷ್ಟಾಂತಗಳಲ್ಲಿ ಅರ್ಥಾಧ್ಯಾಸದ ಸಂಬಂಧವೇನೂ ಇಲ್ಲವಲ್ಲ! ವ್ಯಾಖ್ಯಾನಕಾರರು ಅದನ್ನು ಹೇಗೆ ಹೊಂದಿಸಿಕೊಂಡಿರುತ್ತಾರೆ?

**ಉತ್ತರ :-** 'ಪರತ್ರ ಪೂರ್ವದೃಷ್ಟಾವಭಾಸಃ' (ಹಿಂದೆ ನೋಡಿದ್ದು ಮತ್ತೊಂದರಲ್ಲಿ ತೋರುವದು) ಎಂಬ ಅಧ್ಯಾಸಲಕ್ಷಣಭಾಷ್ಯಕ್ಕೆ ಈ ಎರಡು ಪ್ರಕ್ರಿಯೆಯವರು ಮಾಡಿರುವ ವ್ಯಾಖ್ಯಾನವನ್ನು ಆಗಲೆ (ಪು. ೪೧, ೪೨ರಲ್ಲಿ) ತಿಳಿಸಿದ್ದಾಗಿದೆ. **'ಇಷ್ಟಸಿದ್ಧಿ'** ಎಂಬ ಪ್ರಕರಣದಲ್ಲಿ

ಅನಾತ್ಮವನ್ನು ಆಶ್ರಯಿಸಿಕೊಂಡಿರುವ 'ಅವಿದ್ಯೆ'ಯು ನಿಜವಾಗಿ ಇಲ್ಲವೆಂದೇ ಹೇಳಿ ಆತ್ಮಾಶ್ರಯವಾದ ಅವಿದ್ಯೆಯೇ ಶುಕ್ತಿರಜತಕ್ಕೆ ಉಪಾದಾನಕಾರಣ (ಇ.ಸಿ. ಪು. ೫೭) ಎಂದಿದೆ. **ವಿವರಣ**ದಲ್ಲಿ ಈ ಮತವನ್ನು ಒಪ್ಪಿ ಶುಕ್ತ್ಯಾಶ್ರಯವಾದ ಅಜ್ಞಾನವು ಮೂಲಾವಿದ್ಯೆಯ ಅವಸ್ಥಾಂತರ (ಪಂ. ವಿ. ಪು. ೧೫) ಎಂದಿದೆ.

**ಪಂಚಪಾದಿಕೆಯಲ್ಲಿ ಅಧ್ಯಾಸಕ್ಕೆ** ದೃಷ್ಟಾಂತದಲ್ಲಿ ಕಾರಣದೋಷ, ವಸ್ತುವಿನಲ್ಲಿರುವ ಸಾದೃಶ್ಯಾದಿದೋಷ, ಇಂದ್ರಿಯದಲ್ಲಿರುವ ಪರೆಯೇ ಮುಂತಾದ ದೋಷ- ಎಂಬ **ದೋಷತ್ರಯವಿರುತ್ತದೆ** (ಪಂ. ೩೪, ೫೫); ಇದರಂತೆ ದಾರ್ಷ್ಟಾಂತಿಕದಲ್ಲಿಯೂ ಅವಿದ್ಯೆ ಎಂಬ ದೋಷವಿದೆ (ಪು. ೫೬) ಎಂದಿದೆ. **ಸಂಕ್ಷೇಪಶಾರೀರಕ**ದಲ್ಲಿ (ಪು. ೩೮) ಅಧ್ಯಾಸಕ್ಕೆ ದೋಷಾಪೇಕ್ಷೆಯೇನೂ ಇಲ್ಲವೆಂದಿದೆ.

**ಶುಕ್ತಿರಜತ**ದಲ್ಲಿ ರಜತವು ಶುಕ್ತಿಯ ಸ್ವರೂಪವಲ್ಲದೆ ಇರುವಂತೆ ಅಹಂಕಾರವು ಚೈತನ್ಯದ ಸ್ವರೂಪವಲ್ಲವೆಂದು ತಿಳಿಸುವದಕ್ಕೆ **ದ್ವಿಚಂದ್ರೋದಾಹರಣೆ**ಯು ಜೀವೇಶ್ವರರಿಗೂ ಜೀವರಿಗೂ ತೋರುವ ಭೇದವು ಮಿಥ್ಯೆ ಎನ್ನುವದಕ್ಕೆ (ಪು. ೫೩) ಎಂದು **ಪಂಚಪಾದಿಕೆ. ಸ್ಫಟಿಕ** (ಪಂ. ೮೧). **ಪ್ರತಿಬಿಂಬ** (ಪಂ. ೮೪), **ರಜ್ಜು ಸರ್ಪ** (ಪಂ. ೯೧), **ಘಟಾಕಾಶ** (ಪಂ. ೯೨)- ಈ ದೃಷ್ಟಾಂತಗಳಿಗೆ ಒಂದೊಂದಕ್ಕೂ ಒಂದೊಂದು ಪ್ರಯೋಜನವನ್ನು ವಿವರಿಸಿರುವದೊಂದು ಇಲ್ಲಿ ವಿಶೇಷ.

**ಮೇಲೆ ತಿಳಿಸಿರುವವು ಪಂಚಪಾದಿಕಾಪ್ರಸ್ಥಾನದಲ್ಲಿ ಅರ್ಥಾಧ್ಯಾಸ ದೃಷ್ಟಾಂತಗಳು. ಭಾಮತೀಪ್ರಸ್ಥಾನದಂತೆ** 'ಪರತ್ರ ಪೂರ್ವದೃಷ್ಟಾವಭಾಸಃ' (ಹಿಂದೆ ನೋಡಿದ್ದು ಮತ್ತೊಂದರಲ್ಲಿ ತೋರುವದು) ಎಂಬ ಲಕ್ಷಣವನ್ನು ಸ್ವಪ್ನ, ಶಂಖವು ಹಳದಿಯ ಬಣ್ಣವುಳ್ಳದ್ದಾಗಿ ತೋರುವದು, ಬೆಲ್ಲವು ಕಹಿಯಾಗಿ ತೋರುವದು, ಪ್ರತಿಬಿಂಬ, ಇಬ್ಬರು ಚಂದ್ರರು, ದಿಙ್ಮೋಹ (ದಿಕ್ಕು ಭ್ರಾಂತಿಯಿಂದ ಬದಲಾಯಿಸಿ ತೋರುವದು), ಅಲಾತಚಕ್ರ (ತಿರುಗಿಸುತ್ತಿರುವ ಕೊಳ್ಳಿ), ಗಂಧರ್ವನಗರ (ಮೋಡದಲ್ಲಿ ನಗರದಂತೆ ಕಾಣುವದು), ವಂಶೋರಗ (ಬಿದಿರುಕೋಲು ಹಾವಿನಂತೆ ಕಾಣುವದು)- ಮುಂತಾದವುಗಳಿಗೆಲ್ಲ ಹೊಂದಿಸಿದೆ (ವಾ. ಭಾ. ೨೦-೨೧), ಅಧ್ಯಸ್ತಪದಾರ್ಥವು ಅನಿರ್ವಚನೀಯವೆಂಬುದನ್ನು ಮರೀಚ್ಯುದಕ ದೃಷ್ಟಾಂತದಿಂದ (ಪು. ೨೩) ತಿಳಿಸಿದೆ. ಎರಡನೆಯ ಚಂದ್ರ (ಪು. ೩೭) ಮುಂತಾದವುಗಳೂ ಅನಿರ್ವಾಚ್ಯವೆಂಬುದನ್ನು ಅಲ್ಲಲ್ಲಿ ತಿಳಿಸಿಕೊಟ್ಟಿದೆ.

## ಅಧ್ಯಾಸದ ವಿಷಯಕ್ಕೆ ಮತಾಂತರೋಪನ್ಯಾಸದ ಅರ್ಥ

**ಪ್ರಶ್ನೆ :-** 'ಭಾಷ್ಯದಲ್ಲಂತೂ ಕಪ್ಪೆಯಚಿಪ್ಪು ಬೆಳ್ಳಿಯಂತೆ ತೋರುತ್ತಿದೆ', 'ಒಬ್ಬನೇ ಚಂದ್ರನು ಎರಡನೆಯ ಚಂದ್ರನೊಡನಿರುವಂತೆ ಕಾಣಿಸುತ್ತಾನೆ' ಎಂಬ ದೃಷ್ಟಾಂತಗಳಲ್ಲಿ ಅಂತೆ

ಎಂಬರ್ಥದ ಪ್ರತ್ಯಯವನ್ನು ಆಚಾರ್ಯರು ಉಪಯೋಗಿಸಿ ಲೋಕಾನುಭವವನ್ನು ಕೊಟ್ಟಿದ್ದಾರೆಂತ ಹಿಂದೆ ( ಪು. ೧೫) ಹೇಳಿರುತ್ತೀರಿ. ಅಧ್ಯಾಸದ ವಿಷಯಕ್ಕೆ ಬೇರೆ ಬೇರೆಯ ಮತಗಳನ್ನು ಉದಾಹರಿಸಿ 'ಹೇಗೆ ಆಗಲಿ, ಒಂದು ವಸ್ತು ಮತ್ತೊಂದರ ಧರ್ಮವುಳ್ಳದ್ದಾಗಿ ತೋರುವದೆಂಬುದನ್ನು ಅಧ್ಯಾಸವು ಬಿಟ್ಟಿರುವದಿಲ್ಲ' ಎಂದು ಭಾಷ್ಯದಲ್ಲಿ ( ಸೂ. ಭಾ. ಭಾ. ೨) ಸ್ಪಷ್ಟವಾಗಿ ಬರೆದಿದೆ. ಎಲ್ಲರೂ ಒಪ್ಪಿರುವ ಅಧ್ಯಾಸವನ್ನು ಹೀಗೆ ಅನಿರ್ವಚನೀಯವಾದ ಅರ್ಥಾಧ್ಯಾಸದ ಪರವಾಗಿ ಹೊಂದಿಸುವದು ವ್ಯಾಖ್ಯಾನಕಾರರಿಗೆ ಹೇಗೆ ಒಪ್ಪಿತು?

**ಉತ್ತರ:-** ಬೇರೆ ಬೇರೆಯ ಮತಗಳನ್ನು ಭಾಷ್ಯದಲ್ಲಿ ಕೊಟ್ಟಿರುವದು ಅಧ್ಯಾಸವೆಂದರೆ ಒಂದು ಪದಾರ್ಥವನ್ನು ಮತ್ತೊಂದೆಂದು ಭ್ರಾಂತಿಯಿಂದ ತಿಳಿಯುವದು- ಎಂಬುದು ಸರ್ವಸಂಮತವೆಂದು ತೋರಿಸುವದಕ್ಕೆ- ಎಂಬುದು ಸ್ಪಷ್ಟವೇ ಆಗಿದೆ. ಆದರೆ ಆ ಮತಗಳು ದುಷ್ಟವೆಂದೂ ಅವುಗಳಿಗಿಂತ ವ್ಯತಿರಿಕ್ತವಾಗಿ 'ಅನಿರ್ವಚನೀಯಖ್ಯಾತಿ' ಎಂಬ ಸಿದ್ಧಾಂತವನ್ನು ತಿಳಿಸುವದಕ್ಕೇ ಭಾಷ್ಯಕಾರರು ಈ ಮತಗಳನ್ನು ಉದಾಹರಿಸಿದ್ದಾರೆ ಎಂದೂ ನಂಬಿ ಆ ಅರ್ಥವು ಭಾಷ್ಯಕ್ಕೂ ಹೊಂದುವಂತೆ ವಾಕ್ಯಾರ್ಥವನ್ನು ವಿವರಿಸುವದರಲ್ಲಿ ವ್ಯಾಖ್ಯಾನಕಾರರುಗಳು ತೊಡಗಿರುತ್ತಾರೆ. ಹೇಗೆಂದರೆ:

| ಮತ | ಪಂಚಪಾದಿಕೆಯಲ್ಲಿ (ಪು. ೪೪-೪೫) | ಭಾಮತಿಯಲ್ಲಿ ( ಪು. ೨೫-೩೧) |
|---|---|---|
| (೧) **ತಂ ಕೇಚಿತ್** | ವಿಜ್ಞಾನವಾದಿಗಳ ಮತ್ತು ನೈಯಾಯಿಕರದು. | ಸೌತ್ರಾಂತಿಕ, ವಿಜ್ಞಾನವಾದಿಗಳದ್ದು |
| (೨) **ಕೇಚಿತ್ತು** | ಅಖ್ಯಾತಿವಾದಿಗಳಾದ ಪ್ರಭಾಕರ ಮಿಮಾಂಸಕರ ಮತ | ಅಖ್ಯಾತಿವಾದಿ |
| (೩) **ಅನ್ಯೇ ತು** | ವಿಪರೀತಖ್ಯಾತಿ ಭಾಟ್ಟಮಿಮಾಂಸಕರದು[1] | ವಿಪರೀತಖ್ಯಾತಿ ಭಾಟ್ಟವಿಮಾಂಸಕರದು (ಪು. ೪೫) |

**'ಸರ್ವಥಾಪಿ'** ಹೇಗೆ ಆದರೂ ಎಂಬ ವಾಕ್ಯದರ್ಥವು 'ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ' ಎಂಬ ಲಕ್ಷಣವೇ ಎಲ್ಲರೂ ಒಪ್ಪಿದಂತೆ - ಎಂದು **ಪಂಚಪಾದಿಕೆ. ಹೇಗೇ ಆದರೂ ಒಂದಕ್ಕೆ ಮತ್ತೊಂದರ ಧರ್ಮವನ್ನು ಕಲ್ಪಿಸುವದು,** ಎಂದರೆ ಅನೃತತ್ವ ಎಂದರೆ **ಅನಿರ್ವಚನೀಯ** - ಎಂಬುದು ಸರ್ವಸಮ್ಮತ ಎಂತ ಭಾಮತಿ (ಪು. ೩೨).

1. ಕನ್ನಡದ ಅನುವಾದದಲ್ಲಿ ಇದು 'ಅಸತ್ ಖ್ಯಾತಿವಾದಿಗಳದು' ಎಂದು ಬರೆದಿರುವದು ತಪ್ಪು. ಬೌದ್ಧರ ನಿರಧಿಷ್ಠಾನವಾದವನ್ನು ಪಂಚಪಾದಿಕೆಯಲ್ಲಿ ಮುಂದೆ (ಪು. ೪೬)ರಲ್ಲಿ ಖಂಡಿಸಿದೆ.

## ಆತ್ಮನು ಅಸ್ಮತ್ಪ್ರತ್ಯಯವಿಷಯನೆಂಬುದರ ಅರ್ಥ

**ಪ್ರಶ್ನೆ :-** 'ವಿಷಯನಲ್ಲದ ಪ್ರತ್ಯಗಾತ್ಮನಲ್ಲಿ ವಿಷಯದ ಮತ್ತು ಅದರ ಧರ್ಮಗಳ ಅಧ್ಯಾಸವಾಗಿರುವದು ಹೇಗೆ?' ಎಂಬ ಭಾಷ್ಯಕ್ಕೆ ವ್ಯಾಖ್ಯಾನಕಾರರು ಮಾಡಿರುವ ಅರ್ಥವೇನು?

**ಉತ್ತರ :-** ಆಚಾರ್ಯರು 'ಹೇಳುತ್ತೇವೆ, ಕೇಳು. ಒಂದನೆಯದಾಗಿ ಈ ಆತ್ಮನು ನಿಯಮದಿಂದ ಅವಿಷಯನಾಗಿರುವದಿಲ್ಲ; ಏಕೆಂದರೆ ಇವನು ನಾನು ಎಂಬ ಪ್ರತ್ಯಯಕ್ಕೆ ವಿಷಯನಾಗಿರುತ್ತಾನೆ' ಎಂದು ಒಂದು ಸಮಾಧಾನವನ್ನು ಬರೆದಿರುತ್ತಾರೆ.

ಇದಕ್ಕೆ ವ್ಯಾಖ್ಯಾನಕಾರರು ಬರೆದಿರುವ ವಿವರವು ಹೀಗಿದೆ:

**ಪಂಚಪಾದಿಕೆಯಲ್ಲಿ :** ಆತ್ಮನು ಅಹಂಪ್ರತ್ಯಯವಿಷಯನೆ, ಅಲ್ಲವೆ?- ಎಂಬುದನ್ನು ದೀರ್ಘವಾಗಿ (ಪು. ೬೮ ರಿಂದ ೭೮) ಚರ್ಚಿಸಿ ಬರೆದಿರುವ ಸಿದ್ಧಾಂತವೇನೆಂದರೆ : ಸುಷುಪ್ತಿಯಿಂದ ಎಚ್ಚತ್ತಾಗ ಆಗುವ ಅವಿದ್ಯೆಯ ಪರಿಣಾಮವಾದ ಅಹಂಪ್ರತ್ಯಯಿಯಾದ ಅಂತಃಕರಣದ ಸಂಬಂಧದಿಂದ ಸುಳ್ಳಾಗಿಯೇ **ಆತ್ಮನಿಗೆ ಅಹಂಕರ್ತೃತ್ವವುಂಟಾಗಿದೆ** (ಪು. ೮೧). ಆತ್ಮನು ಚೈತನ್ಯೈಕರಸನಾಗಿರುವದರಿಂದ ವಿಷಯನಲ್ಲದಿದ್ದರೂ ಅಹಂಕಾರದಲ್ಲಿ ವ್ಯವಹಾರಯೋಗ್ಯನಾಗಿರುತ್ತಾನಾಗಿ ಗೌಣವೃತ್ತಿಯಿಂದ ಅವನಿಗೆ ಅಸ್ಮತ್ಪ್ರತ್ಯಯವಿಷಯತ್ವವನ್ನು ಹೇಳಿದೆ. (ಪು. ೯೪)

**ಭಾಮತಿಯಲ್ಲಿ** ನಿಜ, ಪ್ರತ್ಯಗಾತ್ಮನು ಸ್ವಯಂಪ್ರಕಾಶನಾಗಿರುವದರಿಂದ ಸ್ವರೂಪದಿಂದ ಅವಿಷಯನೇ, ನಿರಂಶನೇ; ಆದರೂ ಅನಿರ್ವಚನೀಯವಾದ ಅನಾದ್ಯ-ವಿದ್ಯೆಯಿಂದ ಕಲ್ಪಿತವಾಗಿರುವ ಬುದ್ಧಿ, ಮನಸ್ಸು (ಎಂಬ) ಸೂಕ್ಷ್ಮಶರೀರ, ಸ್ಥೂಲಶರೀರ, ಇಂದ್ರಿಯಗಳು- ಇವುಗಳ ಅವಚ್ಛೇದದಿಂದ, ಸ್ವರೂಪದಿಂದ ಅನವಚ್ಛಿನ್ನನಾದರೂ ಅವಚ್ಛಿನ್ನನಾಗಿರುವಂತೆ, ಅಭಿನ್ನನಾದರೂ ಭಿನ್ನನಾಗಿರುವಂತೆ, ಕರ್ತೃವಲ್ಲದಿದ್ದರೂ ಕರ್ತೃವಾಗಿರುವಂತೆ, ಭೋಕ್ತೃವಲ್ಲದಿದ್ದರೂ ಭೋಕ್ತೃವಾಗಿರುವಂತೆ, ಅವಿಷಯನಾದರೂ ಅಸ್ಮತ್ಪ್ರತ್ಯಯವಿಷಯನಾಗಿರುವಂತೆ ತೋರುತ್ತಿರುತ್ತಾನೆ. ಆದ್ದರಿಂದ ಚಿದಾತ್ಮನು ಸ್ವಯಂಪ್ರಕಾಶನೇ ಆಗಿದ್ದರೂ ಅನವಚ್ಛಿನ್ನನಾಗಿರುವ ಇವನನ್ನು ಅವಚ್ಛಿನ್ನವಾಗಿರುವ ಬುದ್ಧ್ಯಾದಿಗಳಿಗಿಂತ ಬೇರೆಯೆಂದು ಅರಿತುಕೊಳ್ಳದ್ದರಿಂದ ಅವುಗಳ ಅಧ್ಯಾಸದಿಂದ ಜೀವತ್ವವುಂಟಾಗಿರುತ್ತದೆ. ಹೀಗೆ ಅನಿದಮಿದಮಾತ್ಮಕನಾಗಿರುವ ಅವನು ಅಸ್ಮತ್ಪ್ರತ್ಯಯವಿಷಯನೆಂಬುದು ಹೊಂದುತ್ತದೆ (ಪು. ೩೮- ೩೯).

ಅಂತೂ **ಈ ವ್ಯಾಖ್ಯಾನಗಳಲ್ಲಿ ಅಸ್ಮತ್ಪ್ರತ್ಯಯವಿಷಯತ್ವವು ಗೌಣ ಅಥವಾ ಮಿಥ್ಯಾರೂಪವೆಂದಾಯಿತು.** ಇದು **ಭಾಷ್ಯಕಾರರ ಮತವೆಂದಾಗಲಾರದು;** ಏಕೆಂದರೆ **'ಆತ್ಮನು ವಿಷಯನಲ್ಲ; ಅವನಲ್ಲಿ ವಿಷಯಗಳ ಅಧ್ಯಾಸ ಹೇಗೆ?' ಎಂಬ ಆಕ್ಷೇಪಕ್ಕೆ 'ಹೌದು, ನಿಜವಾಗಿ ಆತ್ಮನು ವಿಷಯನಲ್ಲ' ಎನ್ನುವದು ಎಂದಿಗೂ ಸಮಂಜಸವಾದ**

**ಸಮಾಧಾನವಾಗಲಾರದು. ಆತ್ಮನಲ್ಲಿ ಬುದ್ಧ್ಯಾದಿಗಳ ಅಧ್ಯಾಸವಾಗಿರುವದರಿಂದ ಅಸ್ಮತ್ಪ್ರತ್ಯಯವಿಷಯತ್ವವು ಹೊಂದುತ್ತದೆ- ಎಂಬ ಸಮಾಧಾನವೂ ಹೊಂದಲಾರದು.**

**ಪ್ರಶ್ನೆ :-** ವ್ಯಾಖ್ಯಾನಕಾರರು ಈ ನಿಮ್ಮ ಆಕ್ಷೇಪಕ್ಕೆ ಯಾವ ಸಮಾಧಾನವನ್ನೂ ಹೇಳಿಯೇ ಇಲ್ಲವೆ? ಹೇಳಿದ್ದರೆ ಅದನ್ನೇಕೆ ಒಪ್ಪಬಾರದು?

**ಉತ್ತರ :-** ವ್ಯಾಖ್ಯಾನಕಾರರು ಇದು ಪೂರ್ವಪಕ್ಷಕ್ಕೆ ಹೇಗೆ ಸಮಾಧಾನವಾದೀತು?- ಎಂಬ ಆಕ್ಷೇಪಕ್ಕೆ ಉತ್ತರವನ್ನೇನೂ ಬರೆದಿಲ್ಲ. ಆದರೆ ಆತ್ಮನಲ್ಲಿ ಬುದ್ಧ್ಯಾದಿಗಳ ಅಧ್ಯಾಸವಾದದ್ದು ಹೇಗೆ?' ಎಂಬ ಆಕ್ಷೇಪಕ್ಕೆ ಒಂದು ಸಮಾಧಾನವನ್ನೇನೋ, ಬರೆದಿರುತ್ತಾರೆ. ಹೇಗೆಂದರೆ:

**ಪಂಚಪಾದಿಕೆಯಲ್ಲಿ** ವ್ಯವಹಾರಯೋಗ್ಯನಾದರೆ ಅಧ್ಯಾಸ, ಅಧ್ಯಾಸದಿಂದುಂಟಾದ ಅಹಂಪ್ರತ್ಯಯದ ಬಲದಿಂದ ವ್ಯವಹಾರಯೋಗ್ಯತ್ವ- ಎಂದು ಅನ್ಯೋನ್ಯಾಶ್ರಯತ್ವವು ಬಂದೊದಗುವದಲ್ಲ ! - ಎಂಬ ಆಕ್ಷೇಪವನ್ನು ತೆಗೆದು 'ಹಾಗಲ್ಲ, ಏಕೆಂದರೆ ( ಈ ಯೋಗ್ಯತಾಧ್ಯಾಸಗಳ ಸಾಲು) ಅನಾದಿಯಾಗಿರುವದರಿಂದ ಇದಾಗಬಹುದು' ಎಂದು ಸಮಾಧಾನವನ್ನು ಹೇಳಿರುತ್ತದೆ. ( ಪು. ೮೪)

**ಭಾಮತಿಯಲ್ಲಿಯೂ** ಅಧ್ಯಾಸವು ಸಿದ್ಧವಾದರೆ ವಿಷಯತ್ವ, ವಿಷಯತ್ವವು ಸಿದ್ಧವಾದರೆ ಅಧ್ಯಾಸ- ಎಂದು ಅನ್ಯೋನ್ಯಾಶ್ರಯತ್ವವುಂಟಾಯಿತು - ಎಂಬುದೂ ಯುಕ್ತವಲ್ಲ; ಏಕೆಂದರೆ, ಬೀಜಾಂಕುರಗಳಂತೆ ಇವು ಅನಾದಿಯಾಗಿವೆ; ಹಿಂದು ಹಿಂದಿನ ಅಧ್ಯಾಸ, ಅದರ ವಾಸನೆ- ಇವುಗಳಿಗೆ ವಿಷಯನಾದ ಆತ್ಮನು ಮುಂದು ಮುಂದಿನ ಅಧ್ಯಾಸಕ್ಕೆ ವಿಷಯನಾಗಿರುತ್ತಾನೆ' ಎಂದು ಸಮಾಧಾನವನ್ನು ಬರೆದಿದೆ. ( ಪು. ೩೯)

ಈ ಸಮಾಧಾನವು ಸರಿಯಲ್ಲ. ಏಕೆಂದರೆ ಆತ್ಮನು ವಿಷಯನಾಗುವದು, ಆಮೇಲೆ ಮತ್ತೆ ಅವನಲ್ಲಿ ಅಧ್ಯಾಸವಾಗುವದು- ಎಂಬ ಮಾತಿಗೆ ಅರ್ಥವಿಲ್ಲ. **ಆತ್ಮನು ವಿಷಯನಾದದ್ದು ಹೇಗೆ?- ಎಂಬ ಆಕ್ಷೇಪಕ್ಕೆ ಹಿಂದೆ ಎಷ್ಟು ದೂರ ಹೋದರೂ ಸಮಾಧಾನವು ಸಿಕ್ಕುವಂತಿಲ್ಲವಾದ್ದರಿಂದ ಅನವಸ್ಥೆಯಿಂದಾದ ಅಂಧಪರಂಪರಾದೋಷವು ಸಿದ್ಧಾಂತಿಗೆ ಗಂಟುಬೀಳುತ್ತದೆ.**

**ಪ್ರಶ್ನೆ :-** ಹಾಗಾದರೆ ಭಾಷ್ಯಕಾರರು 'ಅಸ್ಮತ್ಪ್ರತ್ಯಯವಿಷಯತ್ವಾತ್' (ಏಕೆಂದರೆ ನಾನೆಂಬ ಅರಿವಿಗೆ ವಿಷಯನಾಗಿರುತ್ತಾನೆ) ಎಂದು( ಸೂ. ಭಾ. ಭಾ. ೩) ಬರೆದದ್ದು ಹೇಗೆ ಹೊಂದುತ್ತದೆ?.

**ಭಾಷ್ಯಕಾರರ ಅಭಿಪ್ರಾಯದಂತೆ :** ಆತ್ಮನಲ್ಲಿ ವಿಷಯತದ್ಧರ್ಮಗಳ ಅಧ್ಯಾಸವು ಹೇಗೆ?- ಎಂಬ ಪ್ರಶ್ನೆಯನ್ನು ಎರಡು ಪ್ರಶ್ನೆಗಳಾಗಿ ಒಡೆದುಕೊಂಡು ಉತ್ತರವನ್ನು ಹೇಳಬೇಕು. 'ಆತ್ಮನು ಅಸ್ಮತ್ಪ್ರತ್ಯಯಕ್ಕೆ ವಿಷಯನೆಂದು (ನಾನು ಎಂಬ ಅರಿವಿಗೆ ಗೋಚರನೆಂದು) ಮಿಕ್ಕ ಕೆಲವರು ವಾದಿಗಳೂ ಲೋಕದ ಜನರೂ ಒಪ್ಪಿರುವ ಸ್ಥಿತಿಯಲ್ಲಿ ವಿಷಯಗಳ ಅಧ್ಯಾಸವಾಗುವದು

ಹೇಗೆ?' ಎಂಬುದು ಪ್ರಶ್ನವಾಕ್ಯದ ಅರ್ಥವಾದರೆ ಆತ್ಮನು ವಿಷಯನೆಂದೇ ಒಪ್ಪಿರುತ್ತೀರಾದ್ದರಿಂದಲೂ ಅವನಲ್ಲಿ ದೇಹಾದಿಗಳ ಧರ್ಮಗಳಾದ ಮುಪ್ಪು ಸಾವು ಮುಂತಾದವುಗಳನ್ನು ತಪ್ಪುತಿಳಿವಳಿಕೆಯಿಂದ ಜನರು ಅಧ್ಯಾಸಮಾಡಿಕೊಳ್ಳುತ್ತಾರೆಂಬುದನ್ನು ಆ ವಾದಿಗಳೂ ಆಸ್ತಿಕರಾದ ಲೌಕಿಕರೂ ಒಪ್ಪುತ್ತಿರುವದರಿಂದಲೂ ಯಾವ ದೋಷವೂ ಇಲ್ಲ. ಹೊರಗಿನ ಎರಡು ವಿಷಯಗಳನ್ನೇ ಒಂದರಲ್ಲೊಂದನ್ನು ಅಧ್ಯಾಸಮಾಡಬೇಕೆಂಬ ನಿಯಮವೇನೂ ಇಲ್ಲ, ಏಕೆಂದರೆ ದಿನದಿನಕ್ಕೂ ಬದಲಾಯಿಸುತ್ತಿರುವ ಶರೀರಧರ್ಮವನ್ನು ಅಸ್ಮತ್ಪ್ರತ್ಯಯವಿಷಯನಾಗಿರುವ ತನ್ನದು ಎಂದು ಜನರು ತಪ್ಪಾಗಿ ತಿಳಿಯುತ್ತಲೇ ಇದ್ದಾರೆ. ವಿಚಾರಮಾಡಿದರೆ ಇದು ಅಧ್ಯಾಸವೆಂದೇ ಗೊತ್ತಾಗುತ್ತದೆ. ಆದ್ದರಿಂದ ಈ ಪಕ್ಷದಲ್ಲಿ ಯಾವ ದೋಷವೂ ಇಲ್ಲ ( ಗೀ. ಭಾ. ೧೩-೨, ಛಾ. ಭಾ. ೭-೫) **ಆತ್ಮನು 'ಇದು' ಎಂಬ ಪ್ರತ್ಯಯಕ್ಕೆ ವಿಷಯನಲ್ಲದಿದ್ದರೂ 'ನಾನು' ಎಂಬ ಪ್ರತ್ಯಯಕ್ಕೆ ವಿಷಯನಾಗಿರುತ್ತಾನಷ್ಟೆ?**- ಎಂಬುದು ಸಮಾಧಾನ.

## ಅವಿಷಯನಾದ ಆತ್ಮನಲ್ಲಿ ನಾನೆಂಬ ಅಧ್ಯಾಸ ಹೇಗೆ?

**ಪ್ರಶ್ನೆ** :- ಹಾಗಾದರೆ ನಾನೆಂಬ ಅಧ್ಯಾಸವಾದದ್ದು ಹೇಗೆ?- ಎಂಬುದಕ್ಕೆ ಭಾಷ್ಯಕಾರರ ಸಮಾಧಾನವೇನು? ಆ ಸಮಾಧಾನವಾಕ್ಯವನ್ನು ವ್ಯಾಖ್ಯಾನಕಾರರು ಹೇಗೆ ವಿವರಿಸಿರುತ್ತಾರೆ?

**ಉತ್ತರ** :- ಸಿದ್ಧಾಂತಿಯ ಮತದಲ್ಲಿ ಆತ್ಮನು ಪರಮಾರ್ಥವಾಗಿ ಯಾವ ಪ್ರತ್ಯಯಕ್ಕೂ ವಿಷಯನೇ ಅಲ್ಲವಲ್ಲ! ಚಿದಾತ್ಮಕನಾದ ಆತ್ಮನಲ್ಲಿ 'ನಾನು' ಮುಂತಾದ ಮಿಥ್ಯಾಪ್ರತ್ಯಯರೂಪವಾದ ಅಧ್ಯಾಸವು ಆದದ್ದು ಹೇಗೆ?'- ಎಂಬುದು ಆಕ್ಷೇಪವಾಕ್ಯಕ್ಕೆ ಎರಡನೆಯ ಅರ್ಥ. ಇದಕ್ಕೆ ಸಮಾಧಾನವೇನೆಂದರೆ : **'ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮ ಪ್ರಸಿದ್ಧೇಃ'** (ಅಪರೋಕ್ಷವಾಗಿರುವದರಿಂದ ಪ್ರತ್ಯಗಾತ್ಮನು ಪ್ರಸಿದ್ಧನಾಗಿರುತ್ತಾನಾದ್ದರಿಂದಲೂ). ಈ ವಾಕ್ಯಕ್ಕೆ ವ್ಯಾಖ್ಯಾನಗಳಲ್ಲಿ ಅರ್ಥವನ್ನು ಮಾಡಿರುವದು ಹೇಗೆಂದರೆ:

**ಪಂಚಪಾದಿಕೆಯಲ್ಲಿ : 'ನ ಕೇವಲಮ್ ಅಸ್ಮತ್ಪ್ರತ್ಯಯವಿಷಯತ್ವಾತ್ ಅಧ್ಯಾಸಾರ್ಹಃ, ಅಪರೋಕ್ಷತ್ವಾಚ್ಚ । ತತ್ಸಾಧನಾರ್ಥಮಾಹ ಪ್ರತ್ಯಗಾತ್ಮಪ್ರಸಿದ್ಧೇಃ॥** ' ಅಸ್ಮತ್ಪ್ರತ್ಯಯವಿಷಯನಾಗಿರುವದರಿಂದ ಮಾತ್ರವೇ ಅಲ್ಲ, ಅಧ್ಯಾಸಕ್ಕೆ ಅರ್ಹನಾಗಿರುವದೆಂಬುದು ; ಮತ್ತೇನೆಂದರೆ ಅಪರೋಕ್ಷನಾಗಿರುವದರಿಂದಲೂ ಅಧ್ಯಾಸಾರ್ಹನಾಗಿರುತ್ತಾನೆ. ಇದನ್ನು ಸಾಧಿಸುವದಕ್ಕಾಗಿ 'ಪ್ರತ್ಯಗಾತ್ಮಪ್ರಸಿದ್ಧೇಃ' ಪ್ರತ್ಯಗಾತ್ಮನು ಪ್ರಸಿದ್ಧನಾಗಿರುವದರಿಂದ- ಎಂದು ಭಾಷ್ಯಕಾರರು ಹೇಳಿರುತ್ತಾರೆ. (ಪಂ. ಪಾ. ೧೧೫-೧೧೬).

(ಇಲ್ಲಿ 'ಪ್ರತ್ಯಗಾತ್ಮಪ್ರಸಿದ್ಧೇಃ' ಎಂಬುದು ಹೇತುವನ್ನು ಹೇಳುವ ಪಂಚಮಿ; 'ಅಪರೋಕ್ಷತ್ವಾಚ್ಚ' ಎಂಬುದು ಅಧ್ಯಾಸಕ್ಕೆ ತಕ್ಕವನಾಗಿರುತ್ತಾನೆ ಎಂಬ ಸಾಧ್ಯಕ್ಕೆ ಹೇತು).

**ಭಾಮತಿಯಲ್ಲಿ** : 'ಪ್ರತ್ಯಗಾತ್ಮನು ತಾನು ಹೊಳೆಯುವದಿಲ್ಲ, ಮತ್ತೊಬ್ಬರಿಂದಲೂ ಹೊಳೆಯುವದಿಲ್ಲ; ಆದ್ದರಿಂದ ಅವಿಷಯನೇ ಆದನಲ್ಲ!' ಎಂದು ಶಂಕಿಸಿ 'ಅಪರೋಕ್ಷತ್ವಾಚ್ಚ-' ಎಂಬೀ ಭಾಷ್ಯವಾಕ್ಯವನ್ನು ಉದಾಹರಿಸಿದೆ. 'ಪ್ರತೀಚ ಆತ್ಮನಃ ಪ್ರಸಿದ್ಧಿಃ ಪ್ರಥಾ, ತಸ್ಯಾ ಅಪರೋಕ್ಷತ್ವಾತ್' ಒಳಗಿನ ಆತ್ಮನ ಪ್ರಸಿದ್ಧಿ ಎಂದರೆ ತೋರಿಕೆ; ಅದು ಅಪರೋಕ್ಷವಾಗಿರುವದರಿಂದ ಎಂದರ್ಥ. (ಇಲ್ಲಿ 'ಪ್ರತ್ಯಗಾತ್ಮಪ್ರಸಿದ್ಧೇಃ' ಎಂಬುದು ಷಷ್ಠೀವಿಭಕ್ತಿ ; 'ಅಪರೋಕ್ಷತ್ವಾತ್' ಎಂಬುದು ಪಂಚಮೀವಿಭಕ್ತಿ) 'ಪ್ರಸಿದ್ಧಿ' ಎಂದರೇನೆಂಬುದನ್ನು ಭಾಮತಿಯಲ್ಲಿ ಹೀಗೆಂದು ವಿವರಿಸಿದೆ : 'ಪ್ರತ್ಯಗಾತ್ಮನಲ್ಲಿ ಅವನಿಗಿಂತ ಬೇರೆಯಾದ ಮತ್ತೊಂದು 'ಪ್ರಸಿದ್ಧಿ' ಇಲ್ಲದಿದ್ದರೂ 'ಪುರುಷನ ಚೈತನ್ಯವು' ಎಂಬಂತೆ ಉಪಚಾರದಿಂದ (ಪ್ರತ್ಯಗಾತ್ಮನಿಗೂ ಚೈತನ್ಯಕ್ಕೂ) ಭೇದವನ್ನು ಕಲ್ಪಿಸಿದೆ. ಇದರ ಅಭಿಪ್ರಾಯವೇನೆಂದರೆ : ಚಿದಾತ್ಮನು ಅಪರೋಕ್ಷನೆಂದು ಅವಶ್ಯವಾಗಿ ಒಪ್ಪಬೇಕು; ಏಕೆಂದರೆ ಅವನು ಬೆಳಗಿ ತೋರಿಕೊಳ್ಳದಿದ್ದರೆ ಯಾವದೂ ಬೆಳಗದೆ ಇಡಿಯ ಜಗತ್ತಿಗೇ ಕುರುಡುಬಂದಂತೆ ಆದೀತು' (ಪು. ೩೯)

ಈ ಎರಡು ವ್ಯಾಖ್ಯಾನಗಳಲ್ಲಿಯೂ ಆತ್ಮನ ಅಪರೋಕ್ಷತ್ವವನ್ನು ಸಾಧಿಸುವದಕ್ಕೆ ಪ್ರಯತ್ನಿಸಿದೆ ಎಂಬುದು ಸ್ಪಷ್ಟ. **ಅಪರೋಕ್ಷತ್ವವೆಂಬುದು ಅನುಭವಗೋಚರವಾಗಿರುವದೇ ಹೊರತು ಅನುಮಾನದಿಂದ ಸಾಧಿಸತಕ್ಕದ್ದಲ್ಲ.** ಅನುಭವದ ಆಧಾರದಿಂದ ಎಲ್ಲವನ್ನೂ ಸಾಧಿಸುತ್ತೇವೆ ; ಪ್ರಮಾಣಾದಿಗಳು ಕೂಡ ಅನುಭವಕ್ಕೆ ವಿಷಯವಾಗಿರುತ್ತವೆ- ಎಂಬುದನ್ನು ಹಿಂದೆ (ಪು. ೨೩) ತಿಳಿಸಿಕೊಟ್ಟದ್ದಾಗಿದೆ. **ಅನುಭವವನ್ನು ಕಡೆಗಣಿಸಿ ಯುಕ್ತಿಯನ್ನು ಹಿಡಿದದ್ದರಿಂದ** ವ್ಯಾಖ್ಯಾನಕಾರರಿಗೆ ಭಾಷ್ಯಕಾರರ ಅಭಿಪ್ರಾಯವು ಸಿಕ್ಕದೆ ಹೋಗಿದೆ; **ಪರಸ್ಪರವಿರೋಧವೂ ಗಂಟುಬಿದ್ದಿದೆ.** ಪ್ರಕೃತದಲ್ಲಿ ಅಪರೋಕ್ಷನಾಗಿರುವದರಿಂದಲೇ ಆತ್ಮನು ಪ್ರಸಿದ್ಧನಾಗಿರುತ್ತಾನೆ; ಆದ್ದರಿಂದ ವಿಷಯನಲ್ಲದಿದ್ದರೂ ಪ್ರಸಿದ್ಧನಾಗಿರುವ ಅವನಲ್ಲಿ ಅಧ್ಯಾಸವಾಗಬಹುದಾಗಿದೆ- ಎಂದು ಅಹಮಧ್ಯಾಸಕ್ಕೆ ಉಪಪತ್ತಿಯನ್ನು ಹೇಳಿದಂತೆ ಆಗಿರುತ್ತದೆ. ಇದೇ ಸರಿಯಾದ ಭಾಷ್ಯಾಭಿಪ್ರಾಯವೆನ್ನುವದಕ್ಕೆ ಅಧ್ಯಾಸದ ಪ್ರಕರಣದಲ್ಲಿಯೇ **ಉಪದೇಶಸಾಹಸ್ರೀ ಗದ್ಯಭಾಗದ** ಎರಡನೆಯ ಪ್ರಕರಣ ( ಪು. ೪೭) ದಲ್ಲಿ ಬರೆದಿರುವದನ್ನು ನೋಡಿ.

ಮುಂದಿನ ಭಾಷ್ಯವಾಕ್ಯದಿಂದಲೂ ಇದು ಸ್ಪಷ್ಟವಾಗುತ್ತದೆ. ಹೇಗೆಂದರೆ **'ನ ಚಾಯಮಸ್ತಿ ನಿಯಮಃ ಪುರೋಽವಸ್ಥಿತ ಏವ ವಿಷಯೇ ವಿಷಯಾನ್ತರಮಧ್ಯಸಿತವ್ಯಮ್ ಇತಿ । ಅಪ್ರತ್ಯಕ್ಷೇಽಪಿ ಹಿ ಆಕಾಶೇ ಬಾಲಾಃ, ತಲಮಲಿನತಾದಿ ಅಧ್ಯಸ್ಯನ್ತಿ ।।'** ಎಂದು ಭಾಷ್ಯ. ಇದಕ್ಕೆ ಸರಳವಾದ ಅರ್ಥವು ಹೀಗಿದೆ : ಎದುರಿಗಿರುವ ವಿಷಯದಲ್ಲಿಯೇ ಮತ್ತೊಂದು ವಿಷಯವನ್ನು ಅಧ್ಯಾಸಮಾಡಬೇಕು ಎಂದು ನಿಯಮವು ಇರುವದೂ ಇಲ್ಲ, ಆಕಾಶವು ಅಪ್ರತ್ಯಕ್ಷವಾಗಿದ್ದರೂ ಅವಿವೇಕಿಗಳು ಅದರಲ್ಲಿ ತಲವು

ಮಲಿನವಾಗಿರುವದೇ ಮುಂತಾದ ಧರ್ಮವನ್ನು ಅಧ್ಯಾಸಮಾಡುತ್ತಾರಲ್ಲವೆ? ಈ ವಾಕ್ಯಕ್ಕೆ ವ್ಯಾಖ್ಯಾನಕಾರರು ಬರೆದಿರುವ ಅರ್ಥವು ಹೀಗಿದೆ:

**ಪಂಚಪಾದಿಕೆಯಲ್ಲಿ** : ಬರಿಯ ಅಪರೋಕ್ಷವಾದದ್ದರಲ್ಲಿ ಅಧ್ಯಾಸವಾಗುವದು ಎಲ್ಲಿಯೂ ಕಂಡಿಲ್ಲವಲ್ಲ! ಇಂದ್ರಿಯಕ್ಕೆ ಗೋಚರವಾಗಿರುವ ಅಪರೋಕ್ಷವಸ್ತುವಿನಲ್ಲಿಯೇ ಅಧ್ಯಾಸವಾಗುವದೆಂದು ಎಲ್ಲೆಲ್ಲಿಯೂ ಕಂಡಿದೆಯಲ್ಲ !- ಎಂದು ಆಶಂಕಿಸಿ ಈ ವಾಕ್ಯವನ್ನು ಅದಕ್ಕೆ ಉತ್ತರವಾಗುವಂತೆ ವ್ಯಾಖ್ಯಾನಮಾಡಿದೆ. ( ಪಂ. ೧೧೭). ಆಕಾಶವು ಅಪ್ರತ್ಯಕ್ಷವೆಂದರೆ ಪರೋಕ್ಷವಾಗಿದೆ ಎಂದರ್ಥ; ಅಥವಾ ಇಂದ್ರಿಯವ್ಯಾಪಾರವಿಲ್ಲದೆಯೂ ಅಪರೋಕ್ಷವಾಗಿರುವದು ಎಂದರ್ಥ ( ಪಂ. ೧೧೭) - ಎಂದು ಪಂಚಪಾದಿಕಾಕಾರರ ಮತ.

**ಭಾಮತಿಯಲ್ಲಿ** ''ಆತ್ಮನು ಅಪರೋಕ್ಷನೆಂದು ಒಪ್ಪಬೇಕು- ಎಂದು ಶ್ರುತಿಯನ್ನು ಉದಾಹರಿಸಿ ಹೇಳಿದ ಬಳಿಕ, ' ಹೀಗೆ ಪರಮಾರ್ಥವಾದ ಪರಿಹಾರವನ್ನು ಹೇಳಿ, ಚಿದಾತ್ಮನು ಪರೋಕ್ಷನೆಂದು ಒಪ್ಪಿಯೂ ಪ್ರೌಢಿವಾದದಿಂದ ' ಎದುರಿಗೇ ಇರುವ ಎಂದರೆ ಅಪರೋಕ್ಷವಾಗಿಯೇ ಇರುವ ಒಂದು ವಿಷಯದಲ್ಲಿ ಮತ್ತೊಂದು ವಿಷಯವನ್ನು ಅಧ್ಯಾಸಮಾಡಬೇಕೆಂಬ ನಿಯಮವೇನೂ ಇಲ್ಲ' ಎಂದು ಮತ್ತೊಂದು ಪರಿಹಾರವನ್ನು ಹೇಳಿರುತ್ತಾರೆ'' ಎಂದು (ವಾ. ಭಾ. ಪು. 39) ಬರೆದಿದೆ. (ಆಕಾಶದಲ್ಲಿ ತಲಮಲಿನತ್ವದ ಅಧ್ಯಾಸವೂ ಪೂರ್ವದೃಷ್ಟತ್ವಸ್ಮೃತಿ ರೂಪತ್ವಗಳೂ ಇವೆ ಎಂದು ಪ್ರಸಂಗದಿಂದ ತೋರಿಸಿರುತ್ತಾರೆ).[1]

ವಿಷಯನಲ್ಲದಿದ್ದರೂ ಪ್ರತ್ಯಗಾತ್ಮನಲ್ಲಿ ಅಧ್ಯಾಸವನ್ನು ಮಾಡಬಹುದೆಂಬುದನ್ನು ತೋರಿಸುವದಕ್ಕೆ ಭಾಷ್ಯವಾಕ್ಯವು ಬಂದಿದೆ- ಎಂಬುದು ಸ್ಪಷ್ಟ. ಇದಕ್ಕೆ ವ್ಯಾಖ್ಯಾನಕಾರರೂ ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ. **ವ್ಯವಹಾರದೃಷ್ಟಿಯಿಂದ ಆತ್ಮನು ಪ್ರತ್ಯಕ್ಷವಿಷಯನಲ್ಲದಿದ್ದರೂ ಅಸ್ಮತ್ಪ್ರತ್ಯಯಗೋಚರನಾಗಿರುವದರಿಂದ ಅವನಲ್ಲಿ ಅನಾತ್ಮಾಧ್ಯಾಸವಾಗಬಹುದು; ಪರಮಾರ್ಥವಾಗಿ ಆತ್ಮನು ವಿಷಯನಲ್ಲದಿದ್ದರೂ ಚೈತನ್ಯಸ್ವರೂಪನಾಗಿ ನಿತ್ಯಾಪರೋಕ್ಷನಾಗಿರುವದರಿಂದ ಅವನಲ್ಲಿ ನಾನು ಎಂಬ ಅಧ್ಯಾಸವಾಗಬಹುದು- ಎಂಬುದು ಭಾಷ್ಯದ ಒಟ್ಟು ತಾತ್ಪರ್ಯ.** ಆಕಾಶವು ಅನುಮೇಯವಾಗಿದ್ದರೂ- ಪ್ರತ್ಯಕ್ಷವಿಷಯವಲ್ಲದಿದ್ದರೂ- ಅದರಲ್ಲಿ ತಲಮಲಿನತ್ವವನ್ನು ಅಧ್ಯಾಸ

1. ಇಲ್ಲಿಯವರೆಗೆ ಕೊಟ್ಟಿರುವ ವ್ಯಾಖ್ಯಾನಕಾರರುಗಳ ಅಭಿಪ್ರಾಯಗಳು ಕೇವಲ ತರ್ಕಪ್ರಧಾನವಾಗಿರುತ್ತವೆಯಾದ್ದರಿಂದ ಅವುಗಳು ಮೊದಲನೆಯ ಸಲಕ್ಕೆ ಓದುವವರಿಗೆ ಅರ್ಥವಾಗದೆ ಇರುವದು ಸ್ವಾಭಾವಿಕವಾಗಿದೆ. ಈ ಭಾಗವನ್ನು ಸಮಾಧಾನದಿಂದ ಓದಿ ಬಲ್ಲವರಲ್ಲಿ ಚರ್ಚಿಸಿ ತಿಳಿದುಕೊಳ್ಳಬೇಕು.

ಮಾಡುವದು ಕಂಡಿದೆ; ಆದ್ದರಿಂದ ಅಧ್ಯಾರೋಪಕ್ಕೆ ಆಸ್ಪದವಾಗಿರುವ ವಸ್ತು ಪ್ರಸಿದ್ಧವಾಗಿದ್ದರೆ ಸಾಕು, ಅದು ಪ್ರತ್ಯಕ್ಷವಿಷಯವೇ ಆಗಿರಬೇಕೆಂಬ ನಿರ್ಬಂಧವಿಲ್ಲ ಎಂಬುದು ದೃಷ್ಟಾಂತದ ಅರ್ಥ. ೧೩ನೆಯ ಅಧ್ಯಾಯದ ಗೀತಾಭಾಷ್ಯ(ಭಾ. ಭಾ. ೭೬೦)ವನ್ನು ನೋಡಿರಿ. ಈ ಭಾಷ್ಯದಲ್ಲಿ **ಕೇವಲ ಯುಕ್ತಿಯನ್ನು** ಕೊಟ್ಟಿದೆ; ಶ್ರುತಿಯನ್ನಾಗಲಿ ಮತ್ತೆ ಯಾವ ಪ್ರಮಾಣವನ್ನಾಗಲಿ ಕೊಟ್ಟಿರುವದಿಲ್ಲ.

ಇದು ಅಧ್ಯಾಸಸಂಭಾವನಾಭಾಷ್ಯ. **ಅಧ್ಯಾಸವು ನಿಜವಾಗಿ ಇದೆ ಎಂಬುದಕ್ಕೆ ಮುಂದಿರುವ ಪ್ರಮಾತೃತ್ವವಿವರಣೆಯಲ್ಲಿ ತೋರಿಸಿರುವ ಅನುಭವಾನುಸಾರಿ ಯುಕ್ತಿಯೇ ಮುಖ್ಯವಾದ ಆಧಾರವಾಗಿದೆ.**

## ಸುಷುಪ್ತಿ ವಿಚಾರ

**ಪ್ರಶ್ನೆ :-** ವ್ಯಾಖ್ಯಾನಕಾರರು ಸುಷುಪ್ತ್ಯನುಭವದಿಂದ ಉಪಾದಾನಕಾರಣರೂಪವಾದ ಅವಿದ್ಯೆಯನ್ನು ಸಾಧಿಸಿಲ್ಲವೆ?

**ಉತ್ತರ :- ಪಂಚಪಾದಿಕೆಯಲ್ಲಿ** ಅವಿದ್ಯೆಯು ಅಹಂಕಾರಾದಿವಿಕ್ಷೇಪಗಳ ಸಂಸ್ಕಾರಮಾತ್ರವಾಗಿರುತ್ತದೆ (ಪಂ.೧೭), ಅದು ಎಚ್ಚರದಲ್ಲಿ ಅಹಂಕಾರರೂಪದಿಂದ ಪರಿಣಾಮವಾಗುತ್ತದೆ (ಪಂ. ೧೭,೭೯) ಎಂದು ಹೇಳಿರುವದು ನಿಜ. ಆದರೆ ವ್ಯಾಖ್ಯಾನವಾದ **ವಿವರಣ**ದಲ್ಲಿ ಮಿಥ್ಯಾಜ್ಞಾನ, ಅದರ ಸಂಸ್ಕಾರ, ಅಗ್ರಹಣ- ಈ ಮೂರಕ್ಕಿಂತ ಬೇರೆಯಾಗಿ ಬ್ರಹ್ಮಸ್ವರೂಪವನ್ನು ಮರೆಮಾಡಿರುವ ಭಾವರೂಪವಾದ ಅವಿದ್ಯೆಯು ಆ ಅವಸ್ಥೆಯಲ್ಲಿ ಇದೆ-ಎಂಬುದನ್ನೂ (ಪಂ. ವಿ. ೧೬-೪೨) ಎಚ್ಚತ್ತವನಿಗೆ ಆಗುವ 'ನನಗೆ ಏನೂ ತಿಳಿಯಲಿಲ್ಲ' ಎಂಬ ಆಕಾರದ ನೆನಪಿನಿಂದ ಅದರ ಅನುಭವವನ್ನೂ ಸಾಧಿಸಿರುವದೂ (ಪಂ. ವಿ. ೫೬), ಭಾಮತಿಯಲ್ಲಿ ಕರ್ಮವಿಕ್ಷೇಪಸಂಸ್ಕಾರದಿಂದೊಡಗೂಡಿದ ಲಯಲಕ್ಷಣಾವಿದ್ಯೆಯು ಸುಷುಪ್ತಿಯಲ್ಲಿದೆ (ಪು. ೩೩೫), ವಿಪರೀತಜ್ಞಾನವು ಅಲ್ಲಿಲ್ಲವಾದ್ದರಿಂದ ಅಷ್ಟರ ಮಟ್ಟಿಗೆ ಜೀವನು ಸ್ವಲ್ಪಮಟ್ಟಿಗೆ ಪರಮಾತ್ಮಭಾವವನ್ನು ಹೊಂದುತ್ತಾನೆ (ಮಾತ್ರಯಾ ಪರಮಾತ್ಮಭಾವಃ, ಪು. ೭೯೬) ಎಂದಿರುವದೂ ನಿಜ. ಆದರೆ ಹೀಗೆಂದು ಜನರಿಗೆ ಅನುಭವವಿಲ್ಲ, ಜಾಗ್ರದವಸ್ಥೆಯಲ್ಲಿ ಸುಷುಪ್ತಿಯ ಸ್ಮೃತಿಯಾಗುವದೆಂಬುದನ್ನು **ವಾರ್ತಿಕ**ದಲ್ಲಿ ತಿರಸ್ಕರಿಸಿದೆ (ಬೃ. ವಾ. ೧-೪-೩೦೦, ೩೦೧); ಸುಷುಪ್ತಿಯಲ್ಲಿ ಅಜ್ಞಾನವಿಲ್ಲವೆಂದೂ ಸ್ಪಷ್ಟವಾಗಿ ಹೇಳಿದೆ (ಬೃ. ವಾ. ೩-೪-೧೯), **ಭಾಷ್ಯ**ದಲ್ಲಂತೂ ಜೀವನು ಆ ಅವಸ್ಥೆಯಲ್ಲಿ ಅಸಂಸಾರಿಯಾಗಿ ತನ್ನ ಪರಮಾರ್ಥವಾದ ಬ್ರಹ್ಮರೂಪದಿಂದ ಇರುತ್ತಾನೆಂದು ಸ್ಪಷ್ಟವಾಗಿ ಸಾರಿರುತ್ತದೆ. (ಸೂ. ಭಾ. ೧-೧-೯, ಭಾ. ಭಾ. ೮೫, ; ೧-೩-೧೫, ೨೫೯ (a) ೧-೩-೨೦, ೨೭೦ (b) ೩-೨-೭, ೨೬೬ (c), ೩-೨-೧೧, ೨೭೬ (d) ೩-೨-೩೪, ೩೦೦-೩೦೧.

**ಹೀಗೆ ಭಾಷ್ಯಕ್ಕೂ ಅನುಭವಕ್ಕೂ ವಿರುದ್ಧವಾಗಿರುವದರಿಂದ ವ್ಯಾಖ್ಯಾನಗಳು ಹೇಳುವ ರೀತಿಯಿಂದ ಸುಷುಪ್ತ್ಯನುಭವವನ್ನು ಒಪ್ಪತಕ್ಕದ್ದಲ್ಲ.** ಇದೂ ಅಲ್ಲದೆ ಅಧ್ಯಾಸಭಾಷ್ಯದಲ್ಲಿ ಸುಷುಪ್ತಿಯ ಹಂಗಿಲ್ಲದೆಯೇ ವಿಚಾರಮಾಡಿರುವದರಿಂದ ಇಲ್ಲಿ ಈ ವಿಷಯವನ್ನು ಹೆಚ್ಚಾಗಿ ವಿಚಾರಮಾಡುವದಕ್ಕೆ ಕಾರಣವೂ ಇಲ್ಲ. ಆಯಾ ಸೂತ್ರಗಳ ಭಾಷ್ಯದ ವಿಚಾರವನ್ನು ಮಾಡುವಾಗ ಮತ್ತೆ ವಿಮರ್ಶಿಸಬಹುದಾಗಿರುತ್ತದೆ.

**ಪ್ರಶ್ನೆ :** ಸುಷುಪ್ತಿಯಲ್ಲಿ ಅವಿದ್ಯಾಶಕ್ತಿಯಿದೆ ಎಂದು ಈ ವಾದಿಗಳು ಒಪ್ಪುವದಕ್ಕೆ ಏನು ಕಾರಣವಿರಬಹುದು?

**ಉತ್ತರ :** ಲೋಕದಲ್ಲಿ ನಿದ್ರೆಯನ್ನು ಮಾಡಿದವರಿಗೆ ಅಲ್ಲಿ ಏತರ ಅರಿವೂ ಆಗುವದಿಲ್ಲ. ಅದನ್ನೇ ಅವರು ಅಲ್ಲಿ ' ಅಜ್ಞರಾಗಿರುತ್ತೇವೆ' ಎನ್ನುತ್ತಾರೆ. ಈ ತಪ್ಪುತಿಳಿವಳಿಕೆಯು ಆತ್ಮಸ್ವರೂಪವನ್ನು ಅರಿಯದ್ದರಿಂದಲೇ ಆಗಿರುವದರಿಂದ ಆತ್ಮಜ್ಞಾನವುಂಟಾದರೇ ಹೋಗಬಹುದೇ ಹೊರತು ಬೇರೆಯ ರೀತಿಯಿಂದ ಹೋಗುವದಿಲ್ಲವಾದ್ದರಿಂದ ನಿದ್ರೆಮಾಡಿದ ಮಾತ್ರದಿಂದ ಹೋಗಲಾರದು ಎಂದು ತಿಳಿಸುವದಕ್ಕೆ ಭಾಷ್ಯದಲ್ಲಿ ಈ ವಾಕ್ಯಗಳು ಕಾಣಬರುತ್ತವೆ:

(೧) ಹೇಗೆ ಸುಷುಪ್ತಿ, ಸಮಾಧಿ- ಮುಂತಾದ ಅವಸ್ಥೆಗಳಲ್ಲಿಯೂ ಸ್ವಾಭಾವಿಕವಾದ ಅವಿಭಾಗಪ್ರಾಪ್ತಿಯೇ ಇದ್ದರೂ ' ಮಿಥ್ಯಾಜ್ಞಾನವು ಇನ್ನೂ ಹೋಗದೆ ಇರುವದರಿಂದ ಮುನ್ನಿನಂತೆಯೇ ಮತ್ತೆ ಎಚ್ಚರದಲ್ಲಿ ವಿಭಾಗವಾಗುತ್ತದೆಯೋ ಹಾಗೆಯೇ ಈ ಪ್ರಳಯದಲ್ಲಿಯೂ ಆಗಬಹುದಾಗಿದೆ. (ಸೂ. ಭಾ. ೨-೧-೯, ಭಾ. ಭಾ. ೪೨೫).

(೨) ಇದೂ ಅಲ್ಲದೆ ಆತ್ಮನಿಗೆ ಬುದ್ಧಿ ಎಂಬ ಉಪಾಧಿಯ 'ಸಂಬಂಧವು ಮಿಥ್ಯಾಜ್ಞಾನ' ಪುರಃಸರವಾಗಿರುತ್ತದೆ. ಮಿಥ್ಯಾಜ್ಞಾನವು ಸಮ್ಯಗ್ಜ್ಞಾನವಿಲ್ಲದೆ ನಿವೃತ್ತಿಯಾಗುವಂತಿಲ್ಲವಾದ್ದರಿಂದ ಎಲ್ಲಿಯವರೆಗೆ ಬ್ರಹ್ಮಾತ್ಮತ್ವವನ್ನು ತಿಳಿದುಕೊಳ್ಳದೆ ಇರುವನೋ, ಅಲ್ಲಿಯವರೆಗೆ ಈ ಬುದ್ಧ್ಯುಪಾಧಿಯ ಸಂಬಂಧವು ನಾಶವಾಗುವದಿಲ್ಲ. (ಸೂ. ಭಾ. ೨-೩-೩೦, ಭಾ. ಭಾ. ೧೪೧)

(೩) ಈ ಬುದ್ಧಿಸಂಬಂಧವೂ ಸುಷುಪ್ತಿಪ್ರಲಯಗಳಲ್ಲಿ ಶಕ್ತಿರೂಪದಿಂದ ಇದ್ದುಕೊಂಡೇ ಮತ್ತೆ ಎಚ್ಚರಸೃಷ್ಟಿಗಳಲ್ಲಿ ತೋರತೋರಿಕೊಳ್ಳುತ್ತದೆ. ( ಸೂ. ಭಾ. ೨-೩-೩೧, ಭಾ. ಭಾ. ೧೪೨).

(೪) ಸುಷುಪ್ತಿಪ್ರಲಯಗಳಲ್ಲಾಗುವಂತೆ ಬೀಜಭಾವದಿಂದ ಕೂಡಿಕೊಂಡಿರುವ ಸತ್ಸಂಪತ್ತಿಯೇ ಈ (ಮರಣದಲ್ಲಾಗುವದು). (ಸೂ. ಭಾ. ೪-೨-೬, ಭಾ. ಭಾ. ೫೪೯).

ಮೇಲಿನ ವಾಕ್ಯಗಳಲ್ಲಿ ಸುಷುಪ್ತಿ, ಪ್ರಳಯ, ಮರಣ- ಇವುಗಳಲ್ಲಿ ಜೀವನು ನಾನಾ ಉಪಾಧಿಯ ಸುತ್ತುಗಟ್ಟೂ ಇಲ್ಲದೆ ಬ್ರಹ್ಮದಲ್ಲಿಯೇ ಸೇರಿರುತ್ತಾನಾದರೂ ಅವನಿಗೆ ಸ

ಆತ್ಮಜ್ಞಾನವಿಲ್ಲದ್ದರಿಂದ ಮಿಥ್ಯಾಜ್ಞಾನದಿಂದಾಗಿರುವ ಅನಾತ್ಮಬಂಧವೂ ಬುದ್ಧಿಯೇ ಮುಂತಾದವುಗಳ ಸಂಬಂಧವೂ ಹಾಗೆಯೇ ಉಳಿದುಕೊಂಡಿರುತ್ತವೆ ಎಂದು ಹೇಳಿದೆ. ಇಲ್ಲಿ **'ಮಿಥ್ಯಾಜ್ಞಾನಕೃತವಾದ'** ಎಂಬ ವಿಶೇಷಣಕ್ಕೆ ಬೆಲೆಯನ್ನು ಕೊಡದೆ **'ಬೀಜ' 'ಶಕ್ತಿ'** - ಮುಂತಾದ ಶಬ್ದಗಳಿಗೆ ಯಥಾಶ್ರುತವಾದ ಅರ್ಥವನ್ನು ಕಲ್ಪಿಸಿಕೊಂಡದ್ದರಿಂದ ಈ ವಾದಿಗಳು ಭಾಷ್ಯಕಾರರ ಅಭಿಪ್ರಾಯವನ್ನು ತಪ್ಪಾಗಿ ತಿಳಿದುಕೊಳ್ಳುವದಕ್ಕೆ ಅವಕಾಶವಾಯಿತು. ಈ ಕಾರಣದಿಂದಲೇ **ವಿವರಣಕಾರರೇ ಮೊದಲಾದ ಕೆಲವರು** ಸಮಾಧಿಯಲ್ಲಿ ಸಮ್ಯಗ್ಜ್ಞಾನವಾಗುತ್ತದೆ ಎಂದು ಕಲ್ಪಿಸಿದರು. ಬಂಧವು ಅವಿದ್ಯೆಯಿಂದ ಆಗಿದೆ, ವಿದ್ಯೆಯಿಂದ ಅವಿದ್ಯೆಯು ಹೋಗಿ ಮುಕ್ತಿಯುಂಟಾಗುತ್ತದೆ- ಎಂಬ ಮಾತುಗಳಿಗೂ ವ್ಯಾಖ್ಯಾನಕಾರರು ಹೀಗೆಯೇ ಅರ್ಥವನ್ನು ಮಾಡಿರುತ್ತಾರೆಂತ ಹೇಳಬೇಕಾಗಿದೆ. **ಅವಿದ್ಯಾದೃಷ್ಟಿಯಿಂದ, ವ್ಯವಹಾರ ದೃಷ್ಟಿಯಿಂದ, ನೋಡಿದರೆ ನಾವು ಬದ್ಧರು, ಅವಸ್ಥಾವಂತರು, ಜನನಮರಣ ವಂತರು; ವಿದ್ಯಾದೃಷ್ಟಿಯಿಂದ, ಪರಮಾರ್ಥದೃಷ್ಟಿಯಿಂದ, ನೋಡಿದರೆ ನಮಗೆ ಯಾವ ಅವಸ್ಥೆಯಾಗಲಿ ಅನಾತ್ಮಸಂಬಂಧವಾಗಲಿ ಇಲ್ಲ, ನಾವು ನಿತ್ಯಮುಕ್ತರು - ಎಂಬುದು ಭಾಷ್ಯಸಂಮತವಾದ ವೇದಾಂತಸಿದ್ಧಾಂತ.** ನಮಗೆ ಅವಿದ್ಯಾಸಂಬಂಧವಿದೆ, ಅದು ವಿದ್ಯೆಯಿಂದ ಹೋಗಬೇಕು- ಎಂಬ ವ್ಯವಹಾರವನ್ನು ಕೂಡ ವ್ಯವಹಾರದೃಷ್ಟಿಯಿಂದಲೇ ಶಾಸ್ತ್ರದಲ್ಲಿ ಕಲ್ಪಿಸಿ ಉಪದೇಶಿಸಿರುತ್ತದೆ ಎಂಬುದನ್ನು ನಾವು ಮರೆಯದೆ ಇರಬೇಕು.

## ಪಶ್ವಾದಿವ್ಯವಹಾರದ ದೃಷ್ಟಾಂತ

**ಪ್ರಶ್ನೆ** :ಭಾಷ್ಯದಲ್ಲಿ ಕಾಣುವ ಪಶ್ವಾದಿವ್ಯವಹಾರದ ದೃಷ್ಟಾಂತಕ್ಕೆ ವ್ಯಾಖ್ಯಾನಕಾರರು ಕಲ್ಪಿಸಿರುವ ಅರ್ಥವೇನು?

**ಉತ್ತರ :- ಪಂಚಪಾದಿಕೆಯಲ್ಲಿ** : ಪ್ರಮಾತೃತ್ವಾದಿವ್ಯವಹಾರಕಾಲದಲ್ಲಿ ಪ್ರವೃತ್ತಿ, ನಿವೃತ್ತಿ, ಔದಾಸೀನ್ಯ- ಇವುಗಳನ್ನು ಹೊಂದುತ್ತಿರುವಾಗ ಪಶ್ವಾದಿಗಳು ಕಾರ್ಯಕರಣ ಸಂಘಾತದಲ್ಲಿಯೇ ನಾನೆಂಬ ಅಭಿಮಾನವನ್ನು ಮಾಡಿಕೊಂಡಿರುತ್ತವೆ. ಮನುಷ್ಯರು ಹುಟ್ಟಿದಂದಿನಿಂದಲೇ ಪಶ್ವಾದಿಗಳಿಗಿಂತ ಹೆಚ್ಚಿನ ವಿವೇಕವುಳ್ಳ ಬುದ್ಧಿಯುಳ್ಳವರಾಗಿ ಶಾಸ್ತ್ರದಿಂದಾಗಿರುವ ಪಾರಲೌಕಿಕಬುದ್ಧಿಶಕ್ತಿಯುಳ್ಳವರಾದರೂ ಅವಕ್ಕೆ ಸಮಾನವಾದ ಯೋಗಕ್ಷೇಮವುಳ್ಳವರಾಗಿರುತ್ತಾರೆ. ಆದ್ದರಿಂದ ಅವರಿಗೂ ಈ ಅಭಿಮಾನವಿರುತ್ತದೆ ಎಂಬುದು ಯುಕ್ತ. (ಪಂ. ೧೨೯).

**ಭಾಮತಿಯಲ್ಲಿ**: ' ಈ ಭಾಷ್ಯದಲ್ಲಿ ಶ್ರೋತ್ರಾದಿಗಳಿಗೆ ಶಬ್ದಾದಿಸಂಬಂಧವುಂಟಾದಾಗ' ಎಂಬ ವಾಕ್ಯಭಾಗದಿಂದ ಪ್ರತ್ಯಕ್ಷಪ್ರಮಾಣವನ್ನು ತೋರಿಸಿದೆ; 'ಶಬ್ದಾದಿಗಳ ಅರಿವು' ಎಂದು ಅದರ ಫಲವನ್ನು ಹೇಳಿದೆ; 'ಪ್ರತಿಕೂಲವಾದರೆ ಎಂದು ಅನುಮಾನಫಲವನ್ನು ಹೇಳಿದೆ.' (ಸೂ. ಭಾ. ಭಾ. ೬; ವಾ. ಭಾ. ಪು. ೪೨).

ಈ ಮೇಲಿನ ವ್ಯಾಖ್ಯಾನಗಳೊಳಗೆ **ಪಂಚಪಾದಿಕೆಯಲ್ಲಿ** 'ವ್ಯುತ್ಪತ್ತಿಮತಾಮಪಿ' ಎಂಬ ಭಾಷ್ಯದ ಶಬ್ದಕ್ಕೆ 'ಶಾಸ್ತ್ರದಿಂದುಂಟಾದ ಬುದ್ಧಿಯುಳ್ಳವರು' ಎಂಬವರೆಗೂ ಅರ್ಥವನ್ನು ಕಟ್ಟಿರುತ್ತದೆ- ಎಂಬುದು ಸ್ಪಷ್ಟ. **ಭಾಮತಿ**ಯಲ್ಲಿಯೂ 'ಆಗಮ, ಉಪಪತ್ತಿ- ಇವುಗಳಿಂದ ಅವರು ದೇಹಾದಿಗಳಿಗಿಂತ ಭಿನ್ನನಾಗಿರುವ ಆತ್ಮನನ್ನು ತಿಳಿದುಕೊಂಡಿದ್ದರೆ, ಇರಲಿ; ಪ್ರಮಾಣಪ್ರಮೇಯವ್ಯವಹಾರದಲ್ಲಿ ಮಾತ್ರ ಸಾಮಾನ್ಯಜೀವರ ಸ್ವಭಾವವನ್ನೇನೂ ಮೀರಿರುವದಿಲ್ಲ' ( ವಾ. ಭಾ. ೪೨) ಎಂದು ಬರೆದಿರುವದರಿಂದ ಮಿಶ್ರರಿಗೂ ಈ ಅಭಿಪ್ರಾಯವು ಸಂಮತವೆಂತ ಹೇಳಬೇಕಾಗಿದೆ. ಭಾಷ್ಯದಲ್ಲಿ ಶಾಸ್ತ್ರದಿಂದಾದ ವ್ಯುತ್ಪತ್ತಿಯನ್ನು ಈ ವಾಕ್ಯಭಾಗದಲ್ಲಿ ಸೇರಿಸಿಕೊಂಡಿದೆಯೊ, ಇಲ್ಲವೊ- ಹೇಳಲಾಗುವದಿಲ್ಲ; ಹೇಗೇ ಆದರೂ **ಶಾಸ್ತ್ರಜ್ಞಾನವು ಲೌಕಿಕವ್ಯವಹಾರದಲ್ಲಿ ಯಾವ ಕೆಲಸಕ್ಕೂ ಬರುವದಿಲ್ಲವಾದ್ದರಿಂದ ಶಾಸ್ತ್ರವನ್ನು ಈ ಭಾಷ್ಯವಾಕ್ಯಾರ್ಥಕ್ಕೆ ಸೇರಿಸದೆ ಇರುವದೇ ಒಳ್ಳೆಯದು.** ಇನ್ನು 'ಪ್ರತ್ಯಕ್ಷಾದಿವ್ಯವಹಾರ' ಎಂಬ ಮಾತಿಗೆ ಪ್ರತ್ಯಕ್ಷ ಅನುಮಾನ, ಶಾಸ್ತ್ರಸಿದ್ಧವಾದ ಪ್ರಮಾಣಗಳ ತಿಳಿವಿನಿಂದಾದ ಜ್ಞಾನ- ಎಂದು ಅರ್ಥವನ್ನು ಮಾಡುವದಕ್ಕೂ ಕಾರಣವಿಲ್ಲ; ಏಕೆಂದರೆ ಪಶ್ವಾದಿಗಳಿಗೆ ಈ ಪ್ರಮಾಣಬುದ್ಧಿಯಿರುವದೇ ಇಲ್ಲ. **ನೈಸರ್ಗಿಕವಾಗಿ ಹೊಳೆಯುವ ಅರಿವಿನಿಂದ (Instinct) ಪಶ್ವಾದಿಗಳು ಪ್ರವೃತ್ತಿನಿವೃತ್ತ್ಯೌದಾಸೀನ್ಯಗಳನ್ನು ಮಾಡುತ್ತಿರುವದರಿಂದ, ಸಾಮಾನ್ಯಜನರ ವ್ಯವಹಾರಕ್ಕೂ ಅಷ್ಟೇ ಸಾಕಾಗಿದೆ; ಆದ್ದರಿಂದ ಲೋಕದ ಜನರ ಪ್ರವೃತ್ತ್ಯಾದಿಗಳು ಅವಿವೇಕದಿಂದುಂಟಾದ ಅಧ್ಯಾಸದಿಂದಲೇ ಸಾಗುತ್ತಿವೆ ಎಂದಾಯಿತು** -ಎಂಬುದಿಷ್ಟೇ ಭಾಷ್ಯದ ಅರ್ಥವೆಂದು ಕಲ್ಪಿಸುವದು ಯುಕ್ತ.

## ಶಾಸ್ತ್ರೀಯವ್ಯವಹಾರ

**ಪ್ರಶ್ನೆ :** ಶಾಸ್ತ್ರೀಯವ್ಯವಹಾರದ ವಿಷಯದಲ್ಲಿ ವ್ಯಾಖ್ಯಾನಕಾರರ ವಿಶೇಷವಾದ ಅಭಿಪ್ರಾಯಗಳೇನಾದರೂ ಇವೆಯೆ?

**ಉತ್ತರ :** ಹೆಚ್ಚಿಗೆಯೇನೂ ಕಾಣುತ್ತಿಲ್ಲ. **ಪಂಚಪಾದಿಕೆಯಲ್ಲಿಯೂ** (ಪು. ೧೩೫), **ಭಾಮತಿಯಲ್ಲಿ**ಯೂ (ಪು. ೪೩) ವೇದಾಂತವಾಕ್ಯಜನ್ಯಜ್ಞಾನವೇನೂ ಕರ್ಮಕ್ಕೆ ಬೇಕಿಲ್ಲ, ಅದಕ್ಕೆ ವಿರುದ್ಧವೂ ಆಗಿರುತ್ತದೆ- ಎಂಬ ಭಾಷ್ಯಾರ್ಥವನ್ನೇ ತಿಳಿಸಿದೆ. **ಭಾಮತಿಯಲ್ಲಿ** ಮಾತ್ರ ವೇದಾಂತಗಳೂ ಅವಿದ್ಯಾವತ್ಪುರುಷರಿಗೇ; ಏಕೆಂದರೆ ಪ್ರಮಾತೃತ್ವಾದಿವಿಭಾಗವಿಲ್ಲದೆ ಅವುಗಳ ಅರ್ಥದ ಜ್ಞಾನವಾಗುವಂತಿಲ್ಲ, ಆದರೂ ಅವು ಶ್ರೋತೃವಿನ ಅವಿದ್ಯೆಯನ್ನು ಕಳೆದು ಸ್ವರೂಪದಲ್ಲಿ ನಿಲ್ಲಿಸುತ್ತವೆ- ಎಂದು (ವಾ. ಭಾ. ೪೩) ಬರೆದಿದೆ. ಉಪನಿಷತ್ತುಗಳಿಂದಾಗುವ ಜ್ಞಾನಕ್ಕಿಂತ ಮುಂಚೆಯೇ ಕರ್ಮದಲ್ಲಿ ತೊಡಗಿರುತ್ತಾರಾದ್ದರಿಂದ ಕರ್ಮಕ್ಕೇನೂ ಅಡ್ಡಿಯಾಗುವದಿಲ್ಲ (ವಾ. ಭಾ. ಪು. ೪೪)- ಎಂದೂ ಬರೆದಿದೆ.

## ಸಾಕ್ಷಿಗೂ ಅಹಂಪ್ರತ್ಯಯಿಗೂ ಆಗಿರುವ ಅಧ್ಯಾಸ

**ಪ್ರಶ್ನೆ :** ಅಹಂಪ್ರತ್ಯಯಿ ಮತ್ತು ಸಾಕ್ಷಿ- ಇವರ ಪರಸ್ಪರಾಧ್ಯಾಸದ ವಿಷಯಕ್ಕೆ ವ್ಯಾಖ್ಯಾನಕಾರರ ಅಭಿಪ್ರಾಯವು ಹೇಗಿದೆ?

**ಉತ್ತರ : ಪಂಚಪಾದಿಕೆಯಲ್ಲಿ** : ಬರಿಯ ಅನಾತ್ಮವೇ ಪ್ರತ್ಯಗಾತ್ಮನಲ್ಲಿ ಅಧ್ಯಾಸವಾದರೆ ಪ್ರತ್ಯಗಾತ್ಮನು ಕಾಣಬಾರದು; ಶುಕ್ತಿಯಲ್ಲಿ ರಜತಾಧ್ಯಾಸವಾದಾಗ ಆ ರಜತವು ಕಾಣುವದಿಲ್ಲವಷ್ಟೆ? ಆದರೆ ಅಹಂಕಾರಾದಿಗಳಲ್ಲಿ ಚೈತನ್ಯವು ಕಾಣುತ್ತಿದೆ. ಹೀಗೆಯೇ ಬರಿಯ ಚೈತನ್ಯವೊಂದನ್ನೇ ಅಹಂಕಾರಾದಿಗಳಲ್ಲಿ ಅಧ್ಯಾಸಮಾಡಿದ್ದರೆ ಆಗ ಅಹಂಕಾರಾದಿಪ್ರಪಂಚವು ಕಾಣಬಾರದು; ಆದರೆ ಅದೇನೋ ಕಾಣುತ್ತಿದೆ. ಈ ಎರಡು (ಅನಿಷ್ಟವೂ) ಆಗಬಾರದೆಂದು ಅನುಭವಾನುಸಾರವಾಗಿ (ಇತರೇತರಾಧ್ಯಾಸವನ್ನು, ಹೇಳಿದೆ)- ಎಂದು ಬರೆದಿದೆ. (ಪಂ. ೧೪೨).

(ಬಿಂಬಪ್ರತಿಬಿಂಬಾಧ್ಯಾಸದಲ್ಲಿ ಬಿಂಬವು ತೋರುತ್ತಿರುವದಲ್ಲ!- ಎಂಬ ಶಂಕೆಗೆ ಈ ಗ್ರಂಥದಂತೆ ಏನು ಸಮಾಧಾನವೋ ತಿಳಿಯದು. ಪ್ರತ್ಯಗಾತ್ಮನು ಪ್ರಕಾಶಿಸುತ್ತಲೇ ಇದ್ದರೂ ಬಹಿರ್ಮುಖವಾದ ಚಿತ್ತವುಳ್ಳವರಿಗೆ ತೋರದಂತೆ ಆಗಿರುತ್ತಾನೆ ಎಂಬುದೇ ಇಲ್ಲಿ ಯುಕ್ತವೆಂದು ತೋರುತ್ತದೆ.)

**ವಿವರಣದಲ್ಲಿ** ಒಂದು ವಿಶೇಷವಚನವಿದೆ : ''ಒಂದೇ ಅಧ್ಯಸ್ತವಾಗಿದ್ದರೆ ಒಂದು ಸಾಮಾನ್ಯವಾಗಿಯೂ ಇನ್ನೊಂದು ವಿಶೇಷವಾಗಿಯೂ ತೋರಬೇಕಾಗಿತ್ತು. ಇಲ್ಲಿ ಚಿಜ್ಜಡರೂಪದಿಂದ ಎರಡೂ ವಿಶೇಷರೂಪದಿಂದ ಕಾಣುತ್ತಿರುವದರಿಂದ ಎರಡೂ ಒಂದರಲ್ಲೊಂದು ಅಧ್ಯಾಸವಾಗಿರಬೇಕೆಂದು ತಿಳಿಯಬೇಕಾಗಿದೆ; ಏಕೆಂದರೆ ವಿಶೇಷರೂಪದಿಂದ ತೋರುವದಕ್ಕೆ ಅಧ್ಯಸ್ತವಾಗಿರುವದೇ ಹೇತು. ಹಾಗಾದರೆ ಎರಡೂ ಮಿಥ್ಯೆ ಎಂದಾಗುವದಲ್ಲ! - ಎನ್ನಕೂಡದು; ಏಕೆಂದರೆ ಚೇತನವು ಅಚೇತನದಲ್ಲಿ ಸ್ವರೂಪದಿಂದಲೇ ಅಧ್ಯಾಸವಾಗಿಲ್ಲ. ಅದು ಸಂಸೃಷ್ಟವಾಗಿಯೇ ಅಧ್ಯಸ್ತವಾಗಿದೆ. 'ಹಾಗಾದರೆ ವಿಶೇಷರೂಪವು ತೋರುತ್ತಿರುವದರಿಂದ ಅದು ಅಧಿಷ್ಠಾನವಾಗುವದು ವಿರುದ್ಧ' ಎನ್ನುವಹಾಗಿಲ್ಲ; ಏಕೆಂದರೆ ವಿಶೇಷವು ಅಧಿಷ್ಠಾನದ ಧರ್ಮವಾಗಿ ತೋರುತ್ತಿಲ್ಲ, ಮತ್ತೊಂದು ಅಧಿಷ್ಠಾನದ ಧರ್ಮವೆಂದೇ ತೋರುತ್ತಿದೆ'' (ಪಂ. ವಿ. ೯೪-೯೫).

ಈ ಮೇಲಿನ ಅಭಿಪ್ರಾಯವು ಪಂಚಪಾದಿಕೆಯಲ್ಲಿ ಸೂಚಿತವಾಗಿದ್ದರೂ (ಪಂ. ೧೪೩) ವಿವರಣದಲ್ಲಿಯೇ ಸ್ಫುಟವಾಗಿ ಯುಕ್ತಿಯಿಂದ ಪುಷ್ಟಿಯನ್ನು ಪಡೆದಿದೆ. ಹೇಗೇ ಆಗಲಿ ಈ ವ್ಯಾಖ್ಯಾನವು ಭಾಷ್ಯಕ್ಕೆ ಅನುಗುಣವಲ್ಲವೆಂದೇ ಹೇಳಬೇಕಾಗಿದೆ. ವ್ಯವಹಾರದಲ್ಲಿ ಅನ್ಯೋನ್ಯಾಧ್ಯಾಸವು ಕಾಣುತ್ತದೆ ಎಂಬುದು ಅನುಭವ. 'ನಾನು' ಎಂದು ನಿರುಪಚರಿತ

ವಾಗಿಯೇ ಅನುಭವವಿರುವಾಗ ಇಲ್ಲಿ ಚೈತನ್ಯಕ್ಕೆ ಸಂಸೃಷ್ಟರೂಪದಿಂದ ಮಾತ್ರವೇ ಅಧ್ಯಾಸವಾಗಿದೆ ಎಂದು ಹೇಳುವದು ಹೇಗೆ ಯುಕ್ತವಾದೀತು? ಸ್ವರೂಪದಿಂದಲೇ ಅಧ್ಯಾಸವಾಗಿದ್ದರೆ ಎರಡೂ ಮಿಥ್ಯೆಯಾಗಬೇಕು- ಎಂಬ ಯುಕ್ತಿಯೂ ಸರಿಯಲ್ಲ; ಏಕೆಂದರೆ, ಸಾಕ್ಷಿಯು ಯಾವ ರೂಪದಿಂದ ಅಧ್ಯಸ್ತವಾಗಿದೆಯೋ ಆ ರೂಪವು ಮಿಥ್ಯೆಯೇ ಆದರೂ ತನ್ನ ಸ್ವರೂಪದಿಂದ ಹಾಗೆಯೇ ಅಚ್ಚಳಿಯದೆ ಇರುತ್ತದೆ. ಅನಾತ್ಮವೋ ಎಂದರೆ ಆತ್ಮನಲ್ಲಿ ಅಧ್ಯಸ್ತವಾದ ರೂಪದಿಂದಲ್ಲದೆ ಬೇರೊಂದು ರೂಪದಿಂದ ಸ್ವತಂತ್ರವಾಗಿ ಇರುವದೇ ಇಲ್ಲ.

**ಭಾಮತಿಯಲ್ಲಿ** : ಅಹಂಪ್ರತ್ಯಯವೆಂಬ ವೃತ್ತಿಯು ಯಾವ ಅಂತಃಕರಣಾದಿಗಳ ವಿಷಯದಲ್ಲಿ ಆಗುತ್ತದೆಯೋ ಅದೇ ಅಹಂಪ್ರತ್ಯಯಿ. ಅದನ್ನು 'ಸ್ವಪ್ರಚಾರಸಾಕ್ಷಿಯಾದ ಪ್ರತ್ಯಗಾತ್ಮನಲ್ಲಿ ಅಧ್ಯಾಸಮಾಡಿ' - ಎಂದರೆ ಅಂತಃಕರಣದ ವೃತ್ತಿಗಳಿಗೆ ಚೈತನ್ಯಔದಾಸೀನ್ಯತೆಗಳಿಗೆ ಸಾಕ್ಷಿಯಾಗಿದ್ದು ಅದರ ಪ್ರತ್ಯಗಾತ್ಮನೆನಿಸಿರುವ ಆತ್ಮನಲ್ಲಿ ಅಧ್ಯಾಸಮಾಡಿ ಎಂದರ್ಥ. ಹೀಗೆ ಹೇಳಿದ್ದರಿಂದ ಕರ್ತೃತ್ವಭೋಕ್ತೃತ್ವಗಳನ್ನು ಹೊಂದಿಸಿ ಹೇಳಿದಂತೆ ಆಯಿತು. (ಅಂತಃಕರಣಕ್ಕೆ) ಚೈತನ್ಯವು ಹೇಗಾಯಿತೆಂಬುದನ್ನು ಹೊಂದಿಸಿ ಹೇಳುವದಕ್ಕಾಗಿ ಆ ಸರ್ವಸಾಕ್ಷಿಯಾದ ಪ್ರತ್ಯಗಾತ್ಮನನ್ನು ಅದಕ್ಕೆ ವಿಪರ್ಯಯವಾಗಿ- ಎಂದರೆ ಅಂತಃಕರಣಾದಿಗಳ ವಿಪರ್ಯಯದಿಂದ; ಅಂತಃಕರಣಾದಿಗಳು ಅಚೇತನವಷ್ಟೆ? ಅದರ ವಿಪರ್ಯಯವೆಂದರೆ ಚೈತನ್ಯವು, ಅದಾಗಿ- ಅಂತಃಕರಣವೇ ಮುಂತಾದವುಗಳಲ್ಲಿ ಅಧ್ಯಾಸಮಾಡಿರುತ್ತದೆ (ವಾ. ಭಾ. ೪೫) ಎಂದು ಬರೆದಿದೆ.

ಭಾಷ್ಯದ ಕನ್ನಡ ಅನುವಾದವು ಈ ವ್ಯಾಖ್ಯಾನಕ್ಕೆ ಹೊಂದುವಂತಿಲ್ಲವಾದ್ದರಿಂದ ಇಲ್ಲಿ ಭಾಮತಿಯಲ್ಲಿರುವಂತೆಯೇ ಅದಕ್ಕೆ ಅನುವಾದವನ್ನು ಮಾಡಿಕೊಂಡಿದೆ. ಈ ವಾಕ್ಯದ ಒಟ್ಟು ಅಭಿಪ್ರಾಯವನ್ನು ಭಾಮತಿಯಲ್ಲಿಯೇ ಬರೆದಿರುವದು ಹೀಗೆ : ''ಇದರಿಂದ, 'ಅಂತಃಕರಣಾದಿಗಳಿಂದ ಅವಚ್ಛಿನ್ನನಾಗಿರುವ ಪ್ರತ್ಯಗಾತ್ಮನು, ಇದಮನಿದಂ ರೂಪನು, ಚೇತನನು, ಕರ್ತೃ, ಭೋಕ್ತೃ ; ( ಈ ಆತ್ಮನೇ) ಕಾರ್ಯಕಾರಣರೂಪವಾದ ಎರಡು ಅವಿದ್ಯೆಗಳಿಗೂ ಆಧಾರವಾಗಿದ್ದು ಅಹಂಕಾರಕ್ಕೆ ಆಸ್ಪದನಾಗಿರುವ ಸಂಸಾರಿಯು, ಸರ್ವಾನರ್ಥಸಂಭಾರಕ್ಕೂ ಪಾತ್ರನೂ ಆಗಿರುವ ಈ ಜೀವಾತ್ಮನು ಇತರೇತರಾಧ್ಯಾಸದಿಂದಾಗಿರುತ್ತಾನೆ, ಅವನನ್ನಾಶ್ರಯಿಸಿ ಅಧ್ಯಾಸವಾಗಿದೆ. ಹೀಗೆ ಅನಾದಿಯಾಗಿರುವದರಿಂದ ಅನ್ಯೋನ್ಯಾಶ್ರಯದೋಷವಿಲ್ಲ' ಎಂದು ಹೇಳಿದಂತಾಗಿದೆ.'' (ವಾ. ಭಾ. ೪೫)

ಇಲ್ಲಿ ಅನ್ಯೋನ್ಯಾಧ್ಯಾಸದಿಂದ ಜೀವನೂ, ಜೀವನನ್ನು ಆಶ್ರಯಿಸಿಕೊಂಡು ಅಧ್ಯಾಸವೂ ತೋರುತ್ತವೆ- ಎಂದಿರುವದರಿಂದ ಜೀವತ್ವವೂ ಅಧ್ಯಾಸವೂ ಬೀಜಾಂಕುರನ್ಯಾಯದಿಂದ ಕಾಲದಲ್ಲಿ ಒಂದಾಗುತ್ತಲೂ ಒಂದು ತೋರಿಕೊಳ್ಳುತ್ತಿರುವವು ಎಂದಂತಾಗಿದೆ. ಬೀಜಾಂಕುರನ್ಯಾಯವನ್ನು ಅಧ್ಯಾಸಕ್ಕೆ ತಗಲಿಸುವದು ಸರಿಯಲ್ಲ; ಏಕೆಂದರೆ ಅಧ್ಯಾಸವು

ಕಾಲವನ್ನಾಶ್ರಯಿಸಿಲ್ಲ ಎಂದು ಹಿಂದೆಯೇ (ಪು.೧೭-೧೮) ಹೇಳಿರುತ್ತೇವೆ. **ಕಲ್ಪತರು'** ಎಂಬ ಭಾಮತೀವ್ಯಾಖ್ಯಾನದಲ್ಲಿ ಶುದ್ಧವಾದ ಸಾಕ್ಷಿಚೈತನ್ಯದಲ್ಲಿ ಅಧ್ಯಾಸವಾಗಿಲ್ಲ- ಎಂಬ ಅಭಿಪ್ರಾಯವನ್ನು ಈ ವಾಕ್ಯಕ್ಕೆ ತೆಗೆದಿದೆ. (ಕ.ತ. ಪು.೪೫) ಅದು ನಿಜವಾದರೆ ಈ ವ್ಯಾಖ್ಯಾನವು ಭಾಷ್ಯಕ್ಕೂ ವಿರುದ್ಧವೆನ್ನಬೇಕಾಗುತ್ತದೆ.

## ಅನರ್ಥನಿವೃತ್ತಿಯೂ ಆತ್ಮೈಕತ್ವವಿದ್ಯಾಪ್ರಾಪ್ತಿಯೂ

**ಪ್ರಶ್ನೆ :-** ಸಂಸಾರಾನರ್ಥದ ನಿವೃತ್ತಿಯ ವಿಷಯಕ್ಕೂ ಆತ್ಮೈಕತ್ವ ವಿದ್ಯೆಯ ಪ್ರಾಪ್ತಿಯ ವಿಷಯಕ್ಕೂ ವ್ಯಾಖ್ಯಾನಕಾರರು ಏನು ಹೇಳುತ್ತಾರೆ?

**ಉತ್ತರ :-** ಕರ್ತೃತ್ವಭೋಕ್ತೃತ್ವಕ್ಕೆ ಕಾರಣವಾಗಿರುವ ಅಧ್ಯಾಸವು ಮಿಥ್ಯಾಪ್ರತ್ಯಯ ರೂಪವಾಗಿದೆ. ಲಕ್ಷಣದಿಂದ ಅದು ಮಿಥ್ಯೆಯಾಗಿದೆ ಎಂದು ಗೊತ್ತಾಗುತ್ತದೆಯೇ ಹೊರತು ವ್ಯವಹಾರದಲ್ಲಿ ಹಾಗೆ ತೋರುವದಿಲ್ಲ- ಎಂದು ತಿಳಿಸುವದಕ್ಕೆ 'ಮಿಥ್ಯಾಪ್ರತ್ಯಯರೂಪ' ಎಂದು ರೂಪಶಬ್ದವನ್ನು ಜೋಡಿಸಿದೆ ಎಂದು **ಪಂಚಪಾದಿಕೆ** (ಪು. ೧೪೭); ಮಿಥ್ಯಾಪ್ರತ್ಯಯಗಳ ರೂಪವೆಂದರೆ ಅನಿರ್ವಚನೀಯವಾಗಿರುವದು ; ಅನಿರ್ವಚನೀಯವಾಗಿದೆ ಎಂದು ತಿಳಿಸುವದಕ್ಕೆ 'ಮಿಥ್ಯಾಪ್ರತ್ಯಯರೂಪ' ವೆಂದಿದೆ ಎಂದು **ಭಾಮತಿ** (ವಾ. ಭಾ. ೪೫).

[ಮಿಥ್ಯಾಪ್ರತ್ಯಯಗಳು ಹೇಗೆ ಅದಲ್ಲದ್ದನ್ನು ಅದೆಂದು ತಿಳಿಸುವವೋ ಹಾಗೆಯೇ ಇದೂ ಆತ್ಮಸ್ವರೂಪವನ್ನು ಬೇರೆಯಾಗಿ ತಿಳಿಸುತ್ತದೆ ಎಂದಿಷ್ಟನ್ನೇ ಮಿಥ್ಯಾಪ್ರತ್ಯಯ ರೂಪವೆಂಬ ಶಬ್ದವು ತಿಳಿಸುತ್ತದೆ- ಎಂದು ನಮ್ಮ ಅಭಿಪ್ರಾಯ. ಮಿಕ್ಕ ಮಿಥ್ಯಾಪ್ರತ್ಯಯಗಳಂತೆ ಇದು ಕಾಲದಲ್ಲಿ ಹುಟ್ಟಿ ಬಾಧಿತವಾಗುವದಲ್ಲ ಎಂಬುದನ್ನು 'ರೂಪ' ಶಬ್ದವು ತಿಳಿಸುತ್ತದೆ.]

**ಪಂಚಪಾದಿಕೆಯಲ್ಲಿ** :- ''ಅಧ್ಯಾಸವು ಅನಾದಿಯಾಗಿರುವದರಿಂದ ಅದನ್ನು ನಾಶಪಡಿಸುವದು ಹೇಗೆ? 'ನಾನು ಮನುಷ್ಯನು' ಎಂಬ ಅನರ್ಥಕ್ಕೆ ಕಾರಣವಾದ ಅಧ್ಯಾಸವು ಶಾಸ್ತ್ರಜ್ಞಾನದಿಂದ ಹೋದಮೇಲೂ ('ನಾನು' ಎಂಬ) ಅಹಂ ಪ್ರತ್ಯಯವು ಇದ್ದೇ ಇರುವದಲ್ಲ!'' ಎಂದು ಶಂಕಿಸಿ ''ತತ್ತ್ವಮಸಿ ಎಂಬ ವಾಕ್ಯದಿಂದ ಆತ್ಮನಿಗೆ ಬ್ರಹ್ಮರೂಪವನ್ನು ತಿಳಿಸುವ ಹೊಸ ಜ್ಞಾನವು ಹುಟ್ಟುವದರಿಂದ ಅಹಂಕಾರಾದಿಕಾರಣವಾದ ಅಜ್ಞಾನವನ್ನು ಕಳೆದೇ ಹುಟ್ಟುತ್ತದೆ. ಆಕ್ಷೇಪದಲ್ಲಿ ಕೊಟ್ಟಿರುವ ದೃಷ್ಟಾಂತದಲ್ಲಿ ಶರೀರಾದಿಗಳೊಡನೆ ಇರುವ ಅಹಂಪ್ರತ್ಯಯವು ಅದಕ್ಕೆ ಅವಿರುದ್ಧವಾಗಿದೆ, ಅದನ್ನು ಹೊಡೆಯುವ ಹೊಸ ಜ್ಞಾನವೂ ಉಂಟಾಗಿಲ್ಲ (?)'' ಎಂಬ ಸಮಾಧಾನವನ್ನು ಬರೆದಿದೆ (ಪಂ. ೧೪೯).

**ವಿವರಣದಲ್ಲಿ** :-ಪ್ರಾಗಭಾವವು ಹೋಗುವದು ಲೋಕದಲ್ಲಿ ಕಂಡಿದೆ ; ಬೌದ್ಧರು ಅನಾದಿವಾಸನಾಸಂತಾನದ ನಾಶವನ್ನು ಒಪ್ಪಿರುತ್ತಾರೆ; ನೈಯಾಯಿಕರು ಮಿಥ್ಯಾಜ್ಞಾನಪ್ರವಾಹವೂ

ಪರಮಾಣುವಿನ ಶ್ಯಾಮತಾ (ಕಪ್ಪು ಎಂಬ) ಗುಣವೂ ನಿವೃತ್ತವಾಗುತ್ತದೆ ಎಂದು ಒಪ್ಪಿರುತ್ತಾರೆ; ಸಾಂಖ್ಯರೂ ಅನಾದಿಯಾದ ಅವಿವೇಕವು ನಾಶವಾಗುವದೆಂದು ಒಪ್ಪಿರುತ್ತಾರೆ. ಮೀಮಾಂಸಕಾದಿಗಳು ಧರ್ಮತತ್ತ್ವಜ್ಞಾನದ ಪ್ರಾಗಭಾವವು ತೊಲಗುವದೆಂದು ಒಪ್ಪಿರುತ್ತಾರೆ. ''ಅನಾದಿಭಾವರೂಪವಾಗಿರುವದರಿಂದ ಅಜ್ಞಾನವು ಆತ್ಮನಂತೆ ಇದೆ; ಅದು ತೊಲಗುವದು ಹೇಗೆ?'' ಎಂದು ಆಕ್ಷೇಪಿಸಬಾರದು, ಏಕೆಂದರೆ ಅಜ್ಞಾನವು ಅನಿರ್ವಚನೀಯವಾಗಿದೆ (ಪಂ. ವಿ. ಪು. ೯೬) ಎಂದು ಬರೆದಿದೆ.

**ಭಾಮತಿ**ಯಲ್ಲಿ ಅನಾದಿಗೆ ನಾಶವು ಹೇಗೆ?- ಎಂಬ ಪ್ರಶ್ನೆಯನ್ನು ತೆಗೆದಿಲ್ಲ. ಅಧ್ಯಾಸರೂಪವಾದ ಅವಿದ್ಯೆಯು ಅನಿರ್ವಚನೀಯವಾದ್ದರಿಂದ ಅದು ವಿದ್ಯೆಯಿಂದ ನಾಶವಾಗಬಹುದು- ಎಂದೇ ಅವರ ಸಮಾಧಾನವಾಗಿರಬೇಕೆಂದು ಮುಂದಿನ ವಾಕ್ಯದಿಂದ ತೋರುತ್ತದೆ.

(ಪಂಚಪಾದಿಕೆಯಲ್ಲಿ 'ಅನಾದಿಗೆ ನಿವೃತ್ತಿ ಹೇಗೆ?' ಎಂಬ ಪ್ರಶ್ನೆಯನ್ನು ಏತಕ್ಕೆ ತೆಗೆದುಕೊಂಡಿದೆಯೋ ತಿಳಿಯದು; ವಿವರಣದಲ್ಲಿ 'ಮಿಕ್ಕ ದರ್ಶನಕಾರರನೇಕರು ಅನಾದಿಗೆ ನಾಶವನ್ನು ಒಪ್ಪಿರುತ್ತಾರೆ, ಆದ್ದರಿಂದ ಅನಾದ್ಯವಿದ್ಯೆಯು ನಾಶವಾಗಬಹುದು' ಎಂದಿರುವದು ಯುಕ್ತಿಯುಕ್ತವಲ್ಲ; ಏಕೆಂದರೆ ಈ ಎಲ್ಲರ ತಿಳಿವಳಿಕೆಯೂ ತಪ್ಪೇ ಆಗಿರಬಾರದೇಕೆ?- ಎಂಬ ಆಕ್ಷೇಪಕ್ಕೆ ಇಲ್ಲಿ ಪರಿಹಾರವಿಲ್ಲ.)

ಅನರ್ಥನಿವೃತ್ತಿಯನ್ನು ಬೇರೆಯಾಗಿ ಹೇಳಿದ್ದೇಕೆಂಬುದಕ್ಕೆ:

**ಪಂಚಪಾದಿಕೆಯಲ್ಲಿ** :- ಬ್ರಹ್ಮವು ನಿರತಿಶಯಾನಂದರೂಪವಾಗಿರುವದರಿಂದಲೂ ಬ್ರಹ್ಮಪ್ರಾಪ್ತಿಗೆ ವಿದ್ಯೆಯು ಸಾಧನವಾಗಿರುವದರಿಂದಲೂ 'ನಿರತಿಶಯಾನಂದಪ್ರಾಪ್ತಿಗಾಗಿ' ಎಂದೇ ಹೇಳಬೇಕು. ''ಅನರ್ಥನಾಶವೂ ಬ್ರಹ್ಮವಿದ್ಯೆಯ ಫಲವೆಂದು ಶ್ರುತಿಯಲ್ಲಿ ಹೇಳಿದೆಯಲ್ಲ!''- ಎಂದರೆ ಆಗಲೂ ಸುಖಪ್ರಾಪ್ತಿ, ಅನರ್ಥನಿವೃತ್ತಿ- ಎರಡನ್ನೂ ಹೇಳಬೇಕು, ಬರಿಯ ಅನರ್ಥನಿವೃತ್ತಿಯನ್ನೇ ಹೇಳಿದ್ದೇಕೆ?'' ಎಂಬ **ಆಕ್ಷೇಪಕ್ಕೆ ಪರಿಹಾರವಿದು**: 'ಆತ್ಮೈಕತ್ವವಿದ್ಯಾಪ್ರಾಪ್ತಿಗಾಗಿ' ಎಂಬುದರಿಂದ ಆನಂದರೂಪಬ್ರಹ್ಮತ್ವಪ್ರಾಪ್ತಿಯು ವಿಷಯದಲ್ಲಿಯೇ ಸೇರಿರುತ್ತದೆ; ಅನರ್ಥಪ್ರಾಪ್ತಿಯು ಹೊರಚ್ಚಾಗಿದೆ (ಪು. ೧೫೦). ಅವಿದ್ಯೆಯನ್ನು ಕಳೆದೇ ಅಲ್ಲವೆ, ಬ್ರಹ್ಮಾತ್ಮಪ್ರಾಪ್ತಿಯಾಗವದು?- ಎಂದರೆ ಹಾಗಾದರೆ ಅನರ್ಥನಿವೃತ್ತಿಯು ಶಾಸ್ತ್ರಪ್ರತಿಪಾದ್ಯವಲ್ಲವಾದ್ದರಿಂದ ಅದನ್ನು ಬೇರೆಯಾಗಿಯೇ ಹೇಳಿದೆ. ಅಜ್ಞಾನವನ್ನು ಕಳೆದೇ ಜ್ಞಾನವು ಉಂಟಾಗಬೇಕಾಗಿರುವದರಿಂದ ಈ ಪಕ್ಷವೇ ಯುಕ್ತ (ಪು. ೧೫೧- ೧೫೨). 'ಈ ಅನರ್ಥಹೇತುವಿನ ನಾಶಕ್ಕಾಗಿ' ಎಂದು ಚತುರ್ಥೀ ವಿಭಕ್ತಿಯನ್ನು ಪ್ರಯೋಗಿಸಿರುವದು ಇದು ವಿದ್ಯೆಯ ಸಾಮರ್ಥ್ಯದಿಂದ ತಾನೇ ಸಿದ್ಧವಾಗುತ್ತದೆ ಎಂಬ ಅಭಿಪ್ರಾಯದಿಂದ; ಅದು

ಪ್ರಯೋಜನವೆಂಬುದೂ ಜನರು ಅನರ್ಥನಿವೃತ್ತಿಯನ್ನು ಬಯಸುತ್ತಾರೆ ಎಂಬ ಕಾರಣದಿಂದ'' (ಪು. ೧೫೫) ಎಂದಿದೆ. **ವಿವರಣದ**ಲ್ಲಿ ಇದನ್ನೇ ಯುಕ್ತಿಗಳಿಂದ ಪುಷ್ಟಿಗೊಳಿಸಿದೆ. **ಭಾಮತಿ**ಯಲ್ಲಿ 'ಅನರ್ಥನಿವೃತ್ತಿಯು ಪ್ರಯೋಜನಕರವೆ, ಅಲ್ಲವೆ?'- ಎಂಬುದನ್ನು ಚರ್ಚಿಸಿಲ್ಲ.

**ಈ ವ್ಯಾಖ್ಯಾನವು ಯುಕ್ತಿಯುಕ್ತವಲ್ಲವೆಂದು ನಮ್ಮ ಅಭಿಪ್ರಾಯ.** ಏಕೆಂದರೆ ಶಾಸ್ತ್ರವು ಬ್ರಹ್ಮವನ್ನು ಇದು ಎಂದು ವಿಷಯೀಕರಿಸಿ ಪ್ರತಿಪಾದಿಸುವದಿಲ್ಲ; ಬ್ರಹ್ಮವು ನಮ್ಮ ಆತ್ಮನೇ, ಅವಿಷಯನೇ ಎಂದು ತಿಳಿಸುವ ಮೂಲಕ ಅವಿದ್ಯಾಕಲ್ಪಿತವಾದ ಜ್ಞಾತೃಜ್ಞಾನಜ್ಞೇಯವೇ ಮುಂತಾದ ಭೇದವನ್ನು ಕಳೆಯುತ್ತದೆ- ಎಂದು ಭಾಷ್ಯಕಾರರು ಮುಂದೆ (೧-೧-೪, ಭಾ, ಭಾ, ೪೭) ಹೇಳಿರುತ್ತಾರೆ. **ಗೀತಾಭಾಷ್ಯ**ದಲ್ಲಿ (೧೮-೫೦, ಭಾ, ಭಾ, ೧೦೯೭) ಅವಿದ್ಯಾಧ್ಯಾರೋಪಿತವಾದದ್ದನ್ನು ಅಲ್ಲಗಳೆಯುವದೇ ಹೊರತು ಬ್ರಹ್ಮವಿಜ್ಞಾನಕ್ಕಾಗಿ ಹೊಸ ಪ್ರಯತ್ನವನ್ನೇನೂ ಮಾಡಬೇಕಾಗಿಲ್ಲ- ಎಂದೇ ಬರೆದಿದೆ. ಈ ಕಾರಣದಿಂದ **ಅವಿದ್ಯಾನಿವೃತ್ತಿಯಲ್ಲಿಯೇ ಶಾಸ್ತ್ರವ್ಯಾಪಾರವೆಂದೂ ಆತ್ಮನ ನಿತ್ಯಸಿದ್ಧವಾದ ಆನಂದಸ್ವರೂಪವನ್ನು ಆ ಮೂಲಕವೇ ತಿಳಿಸಿಕೊಡುವದಕ್ಕೇ ಸರ್ವವೇದಾಂತಗಳೂ ಹೊರಟಿವೆಯೆಂದೂ ಭಾಷ್ಯಕ್ಕೆ ಅಭಿಪ್ರಾಯವನ್ನು ಕಲ್ಪಿಸುವದೇ ಯುಕ್ತವೆಂದು ಹೇಳಬೇಕಾಗಿದೆ.**

ಇನ್ನು **ವಿದ್ಯಾಪ್ರಾಪ್ತಿಯ ವಿಷಯವಾಗಿ** ವ್ಯಾಖ್ಯಾನಕಾರರು ಹೇಳಿರುವದೇನೆಂದರೆ :

**ಪಂಚಪಾದಿಕೆಯಲ್ಲಿ** :- ವಿದ್ಯೆಯು ಗೋವಿನಂತೆ ತನಗಿಂತ ಬೇರೆಯಾಗಿದ್ದು ಪಡೆದುಕೊಳ್ಳತಕ್ಕ ಪದಾರ್ಥವಲ್ಲವಾದ್ದರಿಂದ ಅದನ್ನು ' ಪಡೆದುಕೊಳ್ಳುವದಕ್ಕಾಗಿ' ಎಂದು ಹೇಳಬೇಕಾದದ್ದೇನೂ ಇಲ್ಲ. ಆದರೂ ಆತ್ಮನ ವಿಷಯದಲ್ಲಿ ವಿದ್ಯೆಯು ಹುಟ್ಟಿದಮೇಲೂ ಅದಕ್ಕೆ ನಿಲುಗಡೆಯಿಲ್ಲದೆ ಇರುತ್ತದೆ ; ಏಕೆಂದರೆ ಅದರ ವಿಷಯಕ್ಕೆ ಅಸಂಭಾವನೆಯೂ ವಿಪರೀತ ಭಾವನೆಯೂ ಉಳಿದಿರುತ್ತವೆ, ಆದ್ದರಿಂದಲೇ ಇವುಗಳನ್ನು ಕಳೆಯುವದಕ್ಕಾಗಿ **ತರ್ಕ**ವನ್ನು ಉಪಯೋಗಿಸುತ್ತಾರೆ. ಹೀಗೆ ಅಸಂಭಾವನಾ ವಿಪರೀತಭಾವನಾ ನಿವೃತ್ತಿಯು ಆಗುವ ಮುಂಚೆ ವಿದ್ಯೆಯು ಹುಟ್ಟಿದ್ದರೂ ಅಪ್ರಾಪ್ತವಾದಂತೆ ಇರುತ್ತದೆ ಎಂಬ ಅಭಿಪ್ರಾಯದಿಂದ 'ವಿದ್ಯಾಪ್ರಾಪ್ತಿಗಾಗಿ' ಎಂದಿದೆ (ಪಂ. ಪಾ. ಪು. ೧೫೬, ೧೫೭).

**ವಿವರಣದಲ್ಲಿರುವ ಇದರ ವ್ಯಾಖ್ಯಾನ** :- ಇಲ್ಲಿ '**ವಿದ್ಯೆ**' ಎಂದರೆ ಶಕ್ತಿ ತಾತ್ಪರ್ಯಗಳ ವಿಚಾರಗಳ ಸಹಾಯದಿಂದೊಡಗೂಡಿದ ಶಬ್ದದಿಂದ ಉಂಟಾದ ಪ್ರಮಾಣಜ್ಞಾನ; ಅದರ 'ಪ್ರತಿಷ್ಠೆ' (ನಿಲುಗಡೆ) ಎಂದರೆ **ಅಪರೋಕ್ಷತ್ವ**, ಅದರ ವಿಷಯಕ್ಕೆ ' ಅಸಂಭಾವನೆ' ಎಂದರೆ ಬ್ರಹ್ಮಾತ್ಮಭಾವನೆಯು ಬಲವಾಗದ್ದರಿಂದ ಏಕಾಗ್ರವೃತ್ತಿಗೆ ಬೇಕಾದ ಯೋಗ್ಯತೆಯಿಲ್ಲದಿರುವದು;

'ವಿಪರೀತಭಾವನೆ' ಎಂದರೆ ಶರೀರವೇ ಮುಂತಾದ ಅಧ್ಯಾಸದ ಸಂಸ್ಕಾರವು ಬಲವಾಗಿರುವದು (ಪಂ. ವಿ. ಪು. ೧೦೧)[1] ಎಂದು ಬರೆದಿದೆ. ವಾಚಕರಿಗೆ ಕ್ಲೇಶವಾದೀತೆಂದು ಅಲ್ಲಿರುವ ಹೆಚ್ಚಿನ ವ್ಯಾಖ್ಯಾನವನ್ನು ತಿಳಿಸಿಲ್ಲ. ಒಟ್ಟಿನಲ್ಲಿ (೧) ಶಬ್ದಪ್ರಮಾಣದಿಂದ ನೇರಾಗಿಯೇ ಅಪರೋಕ್ಷಜ್ಞಾನವುಂಟಾದರೂ ಭ್ರಾಂತಿಯಿಂದ ಪರೋಕ್ಷದಂತೆ ತೋರುತ್ತಿರುತ್ತದೆ, ಸಾಧನ ವಿಶೇಷಗಳಿಂದ ಪರೋಕ್ಷತ್ವ ಭ್ರಾಂತಿಯು ಹೋದಮೇಲೆ ಅದೇ ಶಬ್ದವೇ ಅಪರೋಕ್ಷಜ್ಞಾನಕ್ಕೆ ಕಾರಣವಾಗುತ್ತದೆ- ಎಂಬ ಒಂದು ಪಕ್ಷ; (೨) ಮೊದಲುಂಟಾದ ಶಾಬ್ದಜ್ಞಾನದಿಂದ ಪರೋಕ್ಷಜ್ಞಾನವಾಗುತ್ತದೆ, ಮತ್ತೆ ತರ್ಕಸಹಾಯದಿಂದ ಅಪರೋಕ್ಷಜ್ಞಾನವನ್ನು ಶಬ್ದವೇ ಉಂಟುಮಾಡುತ್ತದೆ- ಎಂಬ ಮತ್ತೊಂದು ಪಕ್ಷ- ಹೀಗೆ ಎರಡು ಪಕ್ಷಗಳನ್ನು ಬರೆದಿದೆ. ಅಂತೂ ಅಪರೋಕ್ಷಜ್ಞಾನವುಂಟಾಗುವದಕ್ಕಾಗಿ ಅಥವಾ ಪರೋಕ್ಷತ್ವಭ್ರಮೆಯನ್ನು ನೀಗುವದಕ್ಕಾಗಿ ಮತ್ತೊಂದು ಪ್ರಯತ್ನವು ಬೇಕೆಂಬುದನ್ನು ' ಏಕತ್ವವಿದ್ಯಾಪ್ರಾಪ್ತಿಗಾಗಿ' ಎಂಬ ಭಾಷ್ಯಸ್ಥಪದವು ತಿಳಿಸುತ್ತದೆ- ಎಂಬುದು ವಿವರಣಕಾರರ ಮತವು.

**ಭಾಮತಿಯಲ್ಲಿ** :'' 'ಆತ್ಮೈಕತ್ವವಿದ್ಯಾಪ್ರತಿಪತ್ತಿಗಾಗಿ' ಎಂಬಲ್ಲಿ ಪ್ರತಿಪತ್ತಿ ಎಂದರೆ ಪ್ರಾಪ್ತಿ. ಈ ಪ್ರಾಪ್ತಿಗಾಗಿ ವೇದಾಂತಗಳು ಬಂದಿವೆಯೇ ಹೊರತು ಸುಮ್ಮನೆ ಜಪಿಸುತ್ತಿರ ಬೇಕೆಂಬುದಕ್ಕಲ್ಲ. ಕರ್ಮಗಳಲ್ಲಿ ತೊಡಗಲೆಂದೂ ಅಲ್ಲ. 'ಆತ್ಮೈಕತ್ವ'ವೆಂದರೆ ಆತ್ಮನಲ್ಲಿ ಯಾವ ಪ್ರಪಂಚವೂ ಇಲ್ಲದಿರುವಿಕೆ. ಆನಂದರೂಪನಾಗಿರುವ ಜೀವನಿಗೆ ನಿಃಸಂಶಯವಾಗಿ ಆ ಪ್ರತಿಪತ್ತಿಯನ್ನುಂಟುಮಾಡಿಕೊಡುವ ವೇದಾಂತಗಳು ಅಧ್ಯಾಸವನ್ನು ಬೇರು ಸಹಿತವಾಗಿ ನಾಶಗೊಳಿಸುತ್ತವೆ. .............. ಮಿಥ್ಯಾಜ್ಞಾನದಿಂದ ಪ್ರಸಕ್ತವಾಗಿರುವ ಸ್ವರೂಪವನ್ನು ತತ್ತ್ವಜ್ಞಾನವು ಅಲ್ಲಗಳೆಯುವದು ಶಕ್ಯವಾಗಿದೆ; ಮಿಥ್ಯಾಜ್ಞಾನದ ಸಂಸ್ಕಾರವು ಬಲುಗಟ್ಟಿಯಾಗಿರುತ್ತಿದ್ದರೂ ಅದರ ನೈರಂತರ್ಯದೀರ್ಘಕಾಲತತ್ತ್ವಜ್ಞಾನಾಭ್ಯಾಸ ಗಳಿಂದುಂಟಾದ ತತ್ತ್ವಜ್ಞಾನಸಂಸ್ಕಾರವು ಅದನ್ನು ತೆಗೆದುಹಾಕಬಹುದು''(ಪಾ. ಭಾ. ೪೫).

ಈ ಮತದಲ್ಲಿ ಅಧ್ಯಾಸವು ಮಿಥ್ಯಾಜ್ಞಾನವೆಂದು ಒಪ್ಪಿರುವದರಿಂದ ಮಿಥ್ಯಾಜ್ಞಾನವನ್ನು ಶಬ್ದದಿಂದುಂಟಾದ ತತ್ತ್ವಜ್ಞಾನವು ಬಾಧಿಸಬಹುದೆಂದು ಒಪ್ಪಿಕೊಂಡಿರುವದು ಭಾಷ್ಯಸಂಮತವೇ ಆಗಿರುತ್ತದೆ. ಆದರೆ ಶಬ್ದದಿಂದುಂಟಾದ ತತ್ತ್ವಜ್ಞಾನವು ಪರೋಕ್ಷವಾಗಿಯೇ ಇರುತ್ತದೆ; ತತ್ತ್ವಜ್ಞಾನದ ಅಭ್ಯಾಸದಿಂದ ಅಪರೋಕ್ಷಜ್ಞಾನವುಂಟಾಗುತ್ತದೆ- ಎಂಬ ಮಂಡನಮಿಶ್ರ ಮತವನ್ನೂ ವಾಚಸ್ಪತಿಮಿಶ್ರರು ಒಪ್ಪಿರುತ್ತಾರೆ. ಇದು ಭಾವನಾರೂಪವಾದ ಧ್ಯಾನಕ್ಕೂ ಅಪರೋಕ್ಷ ಫಲವುಂಟೆಂದು ಕಲ್ಪಿಸುವದಕ್ಕೆ ಅವಕಾಶವನ್ನು ಕೊಡುವಂತಿದೆ.

1. ಇಲ್ಲಿ ಕೊಟ್ಟಿರುವ ವಿವರಣದ ಪುಟ ಸಂಖ್ಯೆಯು ಕಾಶಿಯಲ್ಲಿ ಮುದ್ರಿತವಾಗಿರುವ ಲಾಜರಸ್ ಕಂಪನಿಯವರ ಮುದ್ರಣದ ಪುಸ್ತಕದ್ದು.

ಅಂತೂ ಈ ಮೇಲೆ ವರ್ಣಿಸಿರುವ ಎರಡು **ವ್ಯಾಖ್ಯಾನಪ್ರಸ್ಥಾನಗಳೂ ಭಾಷ್ಯವಿರುದ್ಧ**ವಾಗಿರುತ್ತವೆ :

(೧) ಅಪರೋಕ್ಷಜ್ಞಾನವುಂಟಾದ ಮೇಲೂ ಅಸಂಭಾವನೆಯೂ ವಿಪರೀತ ಭಾವನೆಯೂ ಉಂಟಾಗಬಹುದೆಂದು **ಪಂಚಪಾದಿಕೆಯಲ್ಲಿ ಹೇಳಿರುವದು ಭಾಷ್ಯವಿರುದ್ಧ.** ಏಕೆಂದರೆ ಜ್ಞಾನವುಂಟಾದ ಮೇಲೆ ಮಾಡತಕ್ಕದ್ದು ಏನೂ ಇರುವದಿಲ್ಲ- ಎಂಬುದನ್ನು ಆಚಾರ್ಯರು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಸ್ಪಷ್ಟವಾಗಿ ಮತ್ತೆ ಮತ್ತೆ ಹೇಳಿರುತ್ತಾರೆ. ಈ ವ್ಯಾಖ್ಯಾನವು **ಯುಕ್ತಿಗೂ ವಿರುದ್ಧ,** ಏಕೆಂದರೆ ಅಪರೋಕ್ಷಜ್ಞಾನವೆಂದರೆ ಅದ್ವಿತೀಯಬ್ರಹ್ಮವೇ ತಾನೆಂಬ ಅರಿವು; ಅದನ್ನು ಬಾಧಿಸುವದಕ್ಕೆ ದ್ವಿತೀಯಜ್ಞಾನವೊಂದು ಉಳಿದಿರುತ್ತದೆ ಎಂದು ಕಲ್ಪಿಸುವದು ತನಗೆ ತಾನೇ ವಿರುದ್ಧ.

(೨) ಶಬ್ದದಿಂದ ಪರೋಕ್ಷಜ್ಞಾನವೂ ಉಂಟಾಗಿ ಆ ಬಳಿಕ ಅಪರೋಕ್ಷ ಜ್ಞಾನವುಂಟಾಗುತ್ತದೆ, ಅಥವಾ ಮೊದಲೇ ಅಪರೋಕ್ಷಜ್ಞಾನವುಂಟಾಗುತ್ತದೆ- ಎಂದು **ವಿವರಣದಲ್ಲಿ ಹೇಳಿರುವದು ಭಾಷ್ಯವಿರುದ್ಧ,** ಏಕೆಂದರೆ ಭಾಷ್ಯದಲ್ಲಿ 'ತತ್ತ್ವಮಸಿ' ಮುಂತಾದ ಶಬ್ದಪ್ರಮಾಣದಿಂದ ಪರೋಕ್ಷಜ್ಞಾನವುಂಟಾಗಿ ಆ ಬಳಿಕ ಅಪರೋಕ್ಷಜ್ಞಾನವುಂಟಾಗುತ್ತದೆ ಎಂದು ಎಲ್ಲಿಯೂ ಬರೆದಿಲ್ಲ. ಸರ್ವಸಂಶಯಗಳೂ ನಿವೃತ್ತವಾದ ಬಳಿಕವೇ ಜ್ಞಾನ ವುಂಟಾಗುತ್ತದೆ ಎಂದು ಬರೆದಿದೆ. ' ವಸ್ತುವಿನಲ್ಲಿ ಕ್ರಿಯೆಯಂತೆ ವಿಕಲ್ಪವಿರಲಾರದು' ಎಂಬ ಪರಿಭಾಷೆಗೆ ವಿರುದ್ಧವಾಗಿರುವದರಿಂದ ಇದು **ಯುಕ್ತಿ ವಿರುದ್ಧವೂ** ಆಗಿದೆ.

(೩) **'ತತ್ತ್ವಮಸಿ'** ಮುಂತಾದ ವಾಕ್ಯಗಳಿಂದ ಮೊದಲು ಪರೋಕ್ಷ ಜ್ಞಾನವುಂಟಾಗುವದೆಂದೂ ಅದರ ಅಭ್ಯಾಸದಿಂದ ಅಪರೋಕ್ಷಜ್ಞಾನವುಂಟಾಗುವದೆಂದೂ ನಂಬುವದು ಪ್ರಸಂಖ್ಯಾನವಾದಿಗಳ ಮತ. ಅವನ್ನು **ಸೂತ್ರ ಭಾಷ್ಯದಲ್ಲಿಯೂ** ( ಸೂ. ಭಾ. ೪-೧-೨), ಉಪದೇಶಸಾಹಸ್ರಿ (ಉ. ಪದ್ಯ. ೧೮) ಯಲ್ಲಿಯೂ ಖಂಡಿಸಿದೆ. ಈ ಮತವನ್ನೇ ಮಂಡನಮಿಶ್ರವಾಚಸ್ಪತಿಮಿಶ್ರರುಗಳು ಒಪ್ಪಿರುತ್ತಾರೆ. ಇದ **ಯುಕ್ತಿವಿರುದ್ಧ**ವಾಗಿಯೂ ಇರುತ್ತದೆ; ಏಕೆಂದರೆ ಪರೋಕ್ಷಜ್ಞಾನದ ಅಭ್ಯಾಸದಿಂದ ಅಪರೋಕ್ಷಜ್ಞಾನವು ಎಂದಿಗೂ ಆಗಲಾರದು.

## ಉಪಸಂಹಾರ

೧. ವ್ಯಾಖ್ಯಾನಪ್ರಸ್ಥಾನಗಳಲ್ಲಿ ಪಂಚಪಾದಿಕೆ (ವಿವರಣ), ಮತ್ತು ಭಾಮತಿ (ಕಲ್ಪತರು ಮುಂತಾದವು)- ಎಂಬ ಎರಡು ಭಿನ್ನಭಿನ್ನ ಪ್ರಸ್ಥಾನಗಳಾಗಿವೆ. ಇವುಗಳ ಮೇಲೆ ಆಗಿರುವ ಉಪವ್ಯಾಖ್ಯಾನಗಳೂ ಒಂದಕ್ಕೊಂದು ಕೆಲಕೆಲವಂಶಗಳಲ್ಲಿ ವಿರುದ್ಧವಾಗಿದ್ದು ಭಾಷ್ಯಕ್ಕೂ ವಿರುದ್ಧವಾಗಿರುತ್ತವೆ ; ಆದರೆ ನಾವು ಇಲ್ಲಿ ಉಪವ್ಯಾಖ್ಯಾನಗಳ ಗೋಜಿಗೆ ಹೆಚ್ಚಾಗಿ ಹೋಗದೆ

ಮುಖ್ಯವಾಗಿ ಮೂಲಗ್ರಂಥಗಳಲ್ಲಿರುವ ವಿರೋಧಾಂಶವನ್ನು ಮಾತ್ರ ಎತ್ತಿ ತೋರಿಸಿರುತ್ತೇವೆ. ಈ ಎರಡು ಪ್ರಸ್ಥಾನಗಳಿಗೂ ಪರಸ್ಪರವಿರೋಧವಿದೆ ಎಂಬುದನ್ನು ಈಗಿನ ವೇದಾಂತಪಂಡಿತರುಗಳೂ ಒಪ್ಪಿರುತ್ತಾರೆ. ಉದಾರಣೆಗಾಗಿ ಮೈಲಾಪುರದಲ್ಲಿರುವ **ಮದ್ರಾಸು ಸಂಸ್ಕೃತಕಾಲೇಜಿನ ಸಾಹಿತ್ಯವೇದಾಂತ ಪ್ರೊಫೆಸರ್, ಶಾಸ್ತ್ರರತ್ನಾಕರ, ಪೋಲಗಮ್ ಶ್ರೀರಾಮಶಾಸ್ತ್ರಿಗಳವರು** ಸಂಪಾದಿಸಿರುವ ವ್ಯಾಖ್ಯಾನಸಮೇತ ಪಂಚಪಾದಿಕೆಯ ಭೂಮಿಕೆಯಲ್ಲಿ (ಪು. ೧೧೬-೧೩೪) ತೋರಿಸಿರುವ ಹತ್ತು ಭಿನ್ನಾಭಿಪ್ರಾಯಗಳನ್ನು ಇಲ್ಲಿ ವಾಚಕರ ಅವಗಾಹನೆಗೆ ತರುವೆವು :

| ಭಾಮತೀಪ್ರಸ್ಥಾನ | ವಿವರಪ್ರಸ್ಥಾನ |
|---|---|
| ೧. ಕರ್ಮಗಳು ವಿವಿದಿಷೆಗಾಗಿ. | ೧. ಕರ್ಮಗಳು ವಿದ್ಯಾಪ್ರಾಪ್ತಿಗಾಗಿ. |
| ೨. ಬ್ರಹ್ಮಸಾಕ್ಷಾತ್ಕಾರಕ್ಕೆ ಮನಸ್ಸು ಕರಣ. | ೨. ಬ್ರಹ್ಮಸಾಕ್ಷಾತ್ಕಾ |
| ೩. ಶ್ರವಣಾದಿಗಳಲ್ಲಿ ವಿಧಿಯಿಲ್ಲ. | ೩. ಶ್ರವಣಾದಿಗಳಲ್ಲಿ ವಿಧಿಯುಂಟು.[1] |
| ೪. ನಿದಿಧ್ಯಾಸನವೇ ಅಂಗಿ. | ೪. ಶ್ರವಣವೇ ಅಂಗಿ. |
| ೫. ಅವಚ್ಛೇದವಾದ (?)[2] | ೫. ಪ್ರತಿಬಿಂಬವಾದ. |
| ೬. ಅಜ್ಞಾನಕ್ಕೆ ಆಶ್ರಯವೂ ವಿಷಯವೂ ಬೇರೆ ಬೇರೆ. | ೬. ಅಜ್ಞಾನಕ್ಕೆ ಆಶ್ರಯವೂ ವಿಷಯವೂ ಒಂದೇ. |
| ೭. ಒಬ್ಬೊಬ್ಬ ಜೀವನಿಗೊಂದೊಂದು ಅವಿದ್ಯೆ. | ೭. ಅವಿದ್ಯೆಯು ಎಲ್ಲಾ ಜೀವರಿಗೂ ಒಂದೇ. |
| ೮. ಅಖಂಡಾಕಾರವೃತ್ತಿಗೆ ಬ್ರಹ್ಮವು ವಿಷಯ. | ೮. ಅಖಂಡಾಕಾರವೃತ್ತಿಗೆ ಶುದ್ಧಬ್ರಹ್ಮವೇ ವಿಷಯ. |
| ೯. ಸಾಧನಚತುಷ್ಟಯಗಳಲ್ಲಿ ಮೊದಲನೆಯದು ಸತ್ಯಾಸತ್ಯ ವಸ್ತುವಿವೇಕ. | ೯. ನಿತ್ಯಾನಿತ್ಯವಸ್ತುವಿವೇಕವೇ ಮೊದಲನೆಯ ಸಾಧನ. |
| ೧೦. ಸ್ವಾಧ್ಯಾಯಾಧ್ಯಯನ ವಿಧಿಗೆ ಅರ್ಥಾವಬೋಧವೇ ಫಲ. | ೧೦. ಈ ವಿಧಿಗೆ ಅಕ್ಷರಾವಾಪ್ತಿಯೇ ಫಲ. |

1. ಪಂಚಪಾದಿಕೆಯಲ್ಲಿ ಶ್ರೋತವ್ಯಾದಿವಚನಗಳು ಅರ್ಥವಾದವೆಂದೇ ಹೇಳಿದೆಯಾದರೂ ವಿವರಣದಲ್ಲಿ ವಿಧಿಯುಂಟೆಂದೇ ಆಗ್ರಹಪೂರ್ವಕವಾಗಿ ಹೇಳಿರುತ್ತದೆ.

2. ಭಾಮತಿಯಲ್ಲಿ ಅವಚ್ಛೇದವನ್ನೂ ಪ್ರತಿಬಿಂಬವನ್ನೂ ದೃಷ್ಟಾಂತವಾಗಿ ಕೊಟ್ಟಿದೆ ; ವಿವರಣದಲ್ಲಿ ಮಾತ್ರ ಪ್ರತಿಬಿಂಬವಾದವೇ ಸರಿಯೆಂದು ಆಗ್ರಹಪೂರ್ವಕವಾಗಿ ಅವಚ್ಛೇದ ವಾದವನ್ನು ಖಂಡಿಸಿದೆ.

ವಸ್ತುವಿನಲ್ಲಿ ಹಾಗೂ ಇರಬಹುದು, ಹೀಗೂ ಇರಬಹುದು - ಎಂಬ ವಿಕಲ್ಪವು ಸಲ್ಲದಾದ್ದರಿಂದ ಈ ಎರಡು ಮತಗಳೊಳಗೆ ಯಾವದು ಸರಿ ? - ಎಂದು ವಿಚಾರಮಾಡತಕ್ಕದ್ದು ಅವಶ್ಯ. ಮೊಟ್ಟಮೊದಲು ಈ ವಿಚಾರಗಳಲ್ಲಿ ಭಾಷ್ಯಕಾರರು ಏನು ಹೇಳಿರುತ್ತಾರೆಂದು ನೋಡಬೇಕಷ್ಟೆ? ಅವರ ಮತವನ್ನಿಲ್ಲಿ ಬಹುಸಂಕ್ಷೇಪವಾಗಿ ತೋರಿಸುತ್ತೇವೆ:

೧) ಶಮದಮಾದಿಗಳಿಗೆ ಹೋಲಿಸಿದರೆ **ಕರ್ಮಗಳು** ವಿವಿಧಿಷೆಯಮೂಲಕ ವಿದ್ಯೋತ್ಪತ್ತಿಗೆ ಬಾಹ್ಯಸಾಧನವಾಗಿವೆ (೩-೪-೨೭), ಸಂಸ್ಕಾರಾರ್ಥವಾಗಿವೆ (೩-೪-೩೪), ಜನ್ಮಾಂತರಕರ್ಮಗಳೂ ಸಾಧಕ (೩-೪-೩೮), ಉಪಾಸನಾಸಂಯುಕ್ತವಾಗಿ ಅಥವಾ ಸ್ವತಂತ್ರವಾಗಿಯೇ, ಈ ಜನ್ಮದಲ್ಲಿ ಅಥವಾ ಜನ್ಮಾಂತರದಲ್ಲಿ ಮಾಡಿದ ಕರ್ಮಗಳು ಸಹ ದುರಿತಕ್ಷಯವನ್ನು ಉಂಟುಮಾಡಿ ಶ್ರವಣಮನನಾದ್ಯಂತರಂಗಸಾಧನಗಳ ಮೂಲಕ ಬ್ರಹ್ಮವಿದ್ಯೆಗೆ ಕಾರಣ ( ೪-೧-೧೮)

೨) ಶಾಸ್ತ್ರಾಚಾರ್ಯಾದಿಸಂಸ್ಕೃತವಾದ ಮನಸ್ಸೇ ಕರಣ (ಗೀ. ಭಾ. ೨-೨೧, ಭಾ. ಭಾ. ೪೫), ಸಾಕ್ಷಾದ್ದರ್ಶನವೆಂದರೆ ಅಧ್ಯಾರೋಪದ ನಿವೃತ್ತಿಮಾತ್ರವೇ (ಗೀ. ಭಾ. ೧೮-೫೦ ಭಾ. ಭಾ. ೧೦೯೭)

೩) ಶ್ರವಣಾದಿಗಳಲ್ಲಿ ವಿಧಿಯಿಲ್ಲ; ಮನಸ್ಸನ್ನು ಪ್ರತ್ಯಗಾತ್ಮನ ಕಡೆಗೆ ತಿರುಗಿಸುವದೇ ಅವಕ್ಕೆ ಫಲ. (ಸೂ. ಭಾ. ೧-೧-೪, ಭಾ. ಭಾ. ೫೨)

೪) ಶ್ರವಣದಿಂದಲೇ ಜ್ಞಾನವಾಗಬಹುದು (ಸೂ. ಭಾ. ೪-೧-೨, ಭಾ, ಭಾ, ೫೦೬), ಶ್ರವಣದಿಂದಾಗದವರಿಗೆ ಮನನನಿದಿಧ್ಯಾಸನಗಳೂ ಅದಕ್ಕಾಗಿ ಬೇಕಾಗುವವು (ಸೂ. ಭಾ. ೧-೧-೪, ಭಾ, ಭಾ, ೬೧)

(೫) ಅವಚ್ಛೇದವಾದ, ಪ್ರತಿಬಿಂಬವಾದ- ಎಂಬ ಭೇದವೇನೂ ಇಲ್ಲ; ಆಕಾಶ ಪ್ರತಿಬಿಂಬಾದಿಗಳು ದೃಷ್ಟಾಂತಮಾತ್ರವಾಗಿವೆ (ಗೌ. ಕಾ. ಭಾ. ೩-೩, ಸೂ. ಭಾ. ೩-೨-೨೦ ಭಾ. ಭಾ. ೨೮೭).

(೬) ಅಜ್ಞಾನಕ್ಕೆ ಆಶ್ರಯವು ಯಥಾಪ್ರಸಿದ್ಧ ಜೀವನೇ ; ತಾನೇ ಈಶ್ವರನೆಂದು ತಿಳಿದಮೇಲೆ ಅಜ್ಞಾನವು ಯಾರಿಗೂ ಇಲ್ಲ (ಸೂ. ಭಾ. ೪-೧-೩, ಭಾ. ಭಾ. ೫೧೦).

(೭) ಅವಿದ್ಯೆಯಿಂದಲೇ ಸಕಲಲೌಕಿಕವೈದಿಕವ್ಯವಹಾರಗಳೂ ಉಂಟಾಗುವವು (ಅಧ್ಯಾಸಭಾಷ್ಯ); ಆದ್ದರಿಂದ ಅವಿದ್ಯೆಯು ಎಷ್ಟು?- ಎಂಬ ಸಂಖ್ಯಾವಿಷಯದ ಪ್ರಶ್ನೆ ಏಳುವದಿಲ್ಲ. ಆದರೂ ವ್ಯವಹಾರದಲ್ಲಿ ಶಾಸ್ತ್ರವು ಒಬ್ಬೊಬ್ಬನಿಗೂ ಬೇರೆಬೇರೆಯಾಗಿ ಉಪದೇಶಮಾಡಿ ಅವನನ್ನು ಕೃತಾರ್ಥನನ್ನಾಗಿ ಮಾಡುತ್ತದೆ ಎಂಬ ವ್ಯವಹಾರದೃಷ್ಟಿಯಿಂದ

ಒಬ್ಬೊಬ್ಬನ ಅಧ್ಯಾಸರೂಪಾವಿದ್ಯೆಯೂ ಬೇರೆ ಬೇರೆ ಎನ್ನಬಹುದು (ಬೃ. ಭಾ. ೫-೧-೧, ಭಾ.ಭಾ. ೩೫೩, ೩೫೪ ).

(೮) ಅಖಂಡಾಕಾರವೃತ್ತಿ ಎಂಬುದೇ ಇಲ್ಲ; ವೃತ್ತಿಯೆಲ್ಲ ಪರಿಚ್ಛಿನ್ನವಾಗಿಯೇ ಇರುತ್ತದೆ. ಆತ್ಮನಿಗೆ ಆಕಾರವಿಲ್ಲದ್ದರಿಂದ ಆತ್ಮಾಕಾರವೃತ್ತಿ ಎಂಬ ಮಾತಿಗೆ ಅರ್ಥವಿಲ್ಲ ( ಗೀ. ಭಾ. ೧೮-೫೦, ಭಾ . ಭಾ. ೧೧೯೬).

(೯) ನಿತ್ಯಾನಿತ್ಯವಿವೇಕವೆಂದೇ ಭಾಷ್ಯದಲ್ಲಿದೆ. ಆತ್ಯಂತಿಕ ನಿತ್ಯವಾದದ್ದು ಕೃತಕವಾಗಲಾರದಾದ್ದರಿಂದ ಕಾಲಕ್ಕೆ ಮೀರಿರಬೇಕೆಂದು ಶ್ರುತಿಯಿಂದ ಸಿದ್ಧವಾಗುತ್ತದೆ.

(೧೦) ಈ ವಿಚಾರವನ್ನು ಭಾಷ್ಯದಲ್ಲಿ ಮಾಡಿದಂತೆ ಕಾಣುವದಿಲ್ಲ. ಅಧ್ಯಯನವಿಧಿಯು ಅಕ್ಷರಾವಾಪ್ತಿಗೆ ಎಂದಾದರೂ ವೇದಕ್ಕೆ ಅರ್ಥವಿರುವದರಿಂದ ಧರ್ಮಜಿಜ್ಞಾಸೆಯನ್ನು ಮಾಡಬೇಕೆಂದು ( ಜೈ. ಸೂ. ೧-೧-೧) ಶಬರಭಾಷ್ಯದಲ್ಲಿದೆ. ಅಧ್ಯಯನದಿಂದಾದ ಕರ್ಮಜ್ಞಾನವು ಕರ್ಮಕ್ಕೆ ಬೇಕಾದರೂ ಆತ್ಮಜ್ಞಾನಕ್ಕೆ ಬೇಕಿಲ್ಲ ಎಂದು ಸೂತ್ರಭಾಷ್ಯದಲ್ಲಿದೆ ( ಸೂ. ಭಾ. ೩-೪-೧೨).

೨. ವ್ಯಾಖ್ಯಾನಗಳಿಂದ ಜಿಜ್ಞಾಸುಗಳಿಗೆ ಯಾವ ಪ್ರಯೋಜನವೂ ಇಲ್ಲವೆಂದೇನೂ ನಮ್ಮ ಅಭಿಪ್ರಾಯವಲ್ಲ. ಭಾಷ್ಯದಲ್ಲಿ ಸ್ಪಷ್ಟವಾಗಿಲ್ಲದ ಎಷ್ಟೋ ವಿಚಾರಗಳು ಅವುಗಳಲ್ಲಿ ಸ್ಫುಟಗೊಳಿಸಲ್ಪಟ್ಟಿವೆ. ಭಾಷ್ಯಕ್ಕೂ ಯುಕ್ತ್ಯನುಭವಗಳಿಗೂ ವಿರುದ್ಧವಾಗಿರುವ ಅಂಶಗಳನ್ನು ಬಿಟ್ಟೇ ಜಿಜ್ಞಾಸುಗಳು ಅವುಗಳಿಂದ ಅವಶ್ಯವಾಗಿ ಸಹಾಯವನ್ನು ಪಡೆಯಬೇಕು. ಪ್ರಕೃತವಾದ ಅಧ್ಯಾಸಭಾಷ್ಯದ ವ್ಯಾಖ್ಯಾನಗಳಲ್ಲಿ ಮುಖ್ಯವಾಗಿ ಕಾಣಬರುವ ವಿರುದ್ಧಾಂಶಗಳಿಷ್ಟು:

(೧) **ಅಧ್ಯಾಸ್ಯಭಾಷ್ಯವು ಅಧ್ಯಾಸಪ್ರಧಾನವಾಗಿದೆ; ಅಧ್ಯಾಸವೆಂದರೆ ಒಂದು ಬಗೆಯ ತಪ್ಪುತಿಳಿವಳಿಕೆ.** ವಿಪರೀತಜ್ಞಾನ, ವಿಪರ್ಯಾಸ, ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ, ಅಪ್ರತಿಬೋಧ- ಮುಂತಾದ ಶಬ್ದಗಳಿಂದ ಭಾಷ್ಯದಲ್ಲಿ ಈ ಭ್ರಾಂತಿಜ್ಞಾನವನ್ನೇ ಹೇಳಿದೆ. ಆದ್ದರಿಂದ **ಅಧ್ಯಾಸಲಕ್ಷಣವಾಕ್ಯವನ್ನು ಅರ್ಥಾಧ್ಯಾಸಪ್ರಧಾನವಾಗಿ ವ್ಯಾಖ್ಯಾನ ಮಾಡಿರುವದು ಭಾಷ್ಯವಿರುದ್ಧ.**

(೨) ಅವಿದ್ಯೆ ಎಂದರೆ ಅಧ್ಯಾಸವೇ ಎಂದು ಭಾಷ್ಯದಲ್ಲಿ ಸ್ಪಷ್ಟವಾಗಿ ಹೇಳಿದೆ; ಆತ್ಮಾನಾತ್ಮಗಳನ್ನು ವಿಂಗಡಿಸಿ ತಿಳಿದುಕೊಳ್ಳದ ಅವಿವೇಕದಿಂದ ಮಿಥ್ಯಾಜ್ಞಾನರೂಪವಾದ ಅವಿದ್ಯೆಯುಂಟಾಗಿದೆ. ಆತ್ಮವು ಸತ್ಯವು, ಅನಾತ್ಮವು ಅನೃತವು ಎಂದು ವಿವೇಕಪೂರ್ವಕವಾಗಿ ನಿಶ್ಚಯಿಸಿಕೊಳ್ಳುವ ವಿದ್ಯೆಯಿಂದಲೇ ಅವಿದ್ಯೆಯಿಂದಾದ ಅನರ್ಥವೆಲ್ಲ ಹೋಗುತ್ತದೆ- ಎಂದು ಸ್ಪಷ್ಟವಾಗಿ ಭಾಷ್ಯದಲ್ಲಿದೆ. 'ಜ್ಞಾನವೇ ಅಜ್ಞಾನವನ್ನು ಬಾಧಿಸೀತು, ಜ್ಞಾನವು ಅಜ್ಞಾನವನ್ನು ಮಾತ್ರವೇ ಬಾಧಿಸೀತು' ಎಂಬ ಅನುಭವಾನುಸಾರಯುಕ್ತಿಗೂ 'ಜ್ಞಾನದಿಂದ ಮುಕ್ತಿ' ಎಂಬ ವೇದಾಂತ

ಸಿದ್ಧಾಂತಕ್ಕೂ ಇದು ಅನುಗುಣವಾಗಿದೆ. ಆದ್ದರಿಂದ ಅಧ್ಯಾಸರೂಪವಾದ ೧೦೮
ಅವಿದ್ಯೆಯನ್ನು ಒತ್ತಲಿಸಿ, ಅನಾದಿಯಾಗಿರುವ **ಮೂಲಾವಿದ್ಯೆಯು ಅಧ್ಯಾಸಕಾರಣವೆಂಬುದನ್ನೇ ಪ್ರಧಾನವಾಗಿ ಹಿಡಿದದ್ದು ಶ್ರುತಿಗೂ ಯುಕ್ತ್ಯನುಭವಗಳಿಗೂ ವಿರುದ್ಧ; ಅಧ್ಯಾಸವಿಚಾರದ ಪ್ರಕರಣದಲ್ಲಿ ಅಪ್ರಕೃತವಾದ ಅವಿದ್ಯೆಯನ್ನು ತಂದದ್ದು ಪ್ರಕರಣಕ್ಕೆ ಹೊಂದುವಂತಿಲ್ಲ.**

(೩) ಆಚಾರ್ಯರು ಶುಕ್ತಿರಜತ, ದ್ವಿಚಂದ್ರ- ಈ ದೃಷ್ಟಾಂತಗಳನ್ನು ಕೊಟ್ಟು ಪರಮಾರ್ಥದೃಷ್ಟಿಯಿಂದ ಬ್ರಹ್ಮವಾಗಿರುವ ಆತ್ಮನೇ ಅವಿದ್ಯೆಯಿಂದ ಜಗದ್ರೂಪವಾಗಿ ತೋರುತ್ತಿರುತ್ತಾನೆ ಎಂದು ತಿಳಿಸುವದಕ್ಕಾಗಿ 'ರಜತದಂತೆ' 'ಎರಡನೆಯ ಚಂದ್ರನಿಂದೊಡಗೂಡಿರುವಂತೆ' ಎಂದು 'ಅಂತೆ' ಎಂಬ ಶಬ್ದವನ್ನು ಜೋಡಿಸಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುತ್ತಾರೆ. ಶುಕ್ತಿ ಚಂದ್ರಾದಿಗಳ ಅಜ್ಞಾನದಿಂದ ಅವೇ ಬೇರೊಂದು ಪ್ರಕಾರವಾಗಿ ತೋರುತ್ತಿರುವವು, ಶುಕ್ತಿ ರಜ್ಜ್ವಾದಿಗಳಿಗಿಂತ ರಜತಸರ್ಪಾದಿಗಳು ಬೇರೆಯಾಗಿಲ್ಲವೇ ಇಲ್ಲ- ಎಂಬುದು ಅನುಭವಕ್ಕೂ ಹೊಂದುಗೆಯಾಗಿದೆ. ಹೀಗಿರುವಲ್ಲಿ **ಶುಕ್ತಿರಜತ, ಎರಡನೆಯ ಚಂದ್ರ- ಮುಂತಾದ ಪ್ರಾತಿಭಾಸಿಕಪದಾರ್ಥಗಳು ಅವಿದ್ಯೆಯಿಂದ ಹುಟ್ಟುತ್ತವೆ ಎಂದು ವ್ಯಾಖ್ಯಾನಗಳಲ್ಲಿ ವರ್ಣಿಸಿರುವದು ಭಾಷ್ಯಕ್ಕೂ ಅನುಭವಕ್ಕೂ ವಿರುದ್ಧ.**

(೪) ನಾಮರೂಪಗಳ ಬೀಜವಾಗಿರುವ ಅವ್ಯಾಕೃತವನ್ನು ಮಾಯೆ, ಶಕ್ತಿ, ಪ್ರಕೃತಿ- ಮುಂತಾದ ಹೆಸರುಗಳಿಂದ ಕರೆದು ಅವು ಅವಿದ್ಯಾಕಲ್ಪಿತ (ಅವಿದ್ಯಾಕೃತ, ಅವಿದ್ಯಾಲಕ್ಷಣ, ಅವಿದ್ಯಾತ್ಮಕ) ವಾದ್ದರಿಂದ ಹುಸಿತೋರಿಕೆ ಎಂಬುದನ್ನು ಭಾಷ್ಯದಲ್ಲಿ ( ಸೂ. ಭಾ. ೨-೧-೧೪, ಭಾ. ಭಾ. ೪೪೦ ) ಸ್ಪಷ್ಟವಾಗಿ ಹೇಳಿದೆ. ಹೀಗಿದ್ದರೂ **ನಾಮರೂಪ, ಅವ್ಯಾಕೃತ, ಮಾಯೆ- ಮುಂತಾದ ಶಬ್ದಗಳಿಂದ ಹೇಳಿರುವದೇ ಅವಿದ್ಯೆಯೆಂದೂ ಅದನ್ನು ನಾಶಮಾಡುವದಕ್ಕೆಂದೇ ವಿದ್ಯೆಯನ್ನು ವೇದಾಂತದಲ್ಲಿ ಹೇಳಿದೆಯೆಂದೂ ಕಲ್ಪಿಸಿರುವದು ಭಾಷ್ಯವಿರುದ್ಧ, ಮೇಲೆ ಹೇಳಿರುವಂತೆ ಯುಕ್ತಿಗೂ ಹೊಂದುವದಿಲ್ಲ.** ಏಕೆಂದರೆ ಜ್ಞಾನವು ವಸ್ತುವನ್ನು ಬಾಧಿಸುವಂತಿಲ್ಲ.

(೫) ಸುಷುಪ್ತಿಯಲ್ಲಿ ಜೀವನು ತನ್ನ ಸ್ವರೂಪವಾದ ಸದ್ಬ್ರಹ್ಮವನ್ನು ಸೇರಿಕೊಳ್ಳುತ್ತಾನೆ, ಅಲ್ಲಿ ಅವನು ಸ್ವಚ್ಛನಾಗಿ ಅದ್ವಿತೀಯದ್ರಷ್ಟ್ರವಾಗಿರುತ್ತಾನೆ, ಜಾಗ್ರದವಸ್ಥೆಯ ಅಪೇಕ್ಷೆಯಿಂದ ಅವನೇ ಸರ್ವೇಶ್ವರನು, ಸರ್ವಜ್ಞನು- ಎಂದು ಮುಂತಾಗಿ ( ಛಾಂ., ಬೃ., ಮಾಂ- ಮುಂತಾದ) ಶ್ರುತಿಗಳಲ್ಲಿ ಸಾರಿರುತ್ತದೆ, ಹಾಗೆಂದು ಸೂತ್ರಭಾಷ್ಯದಲ್ಲಿಯೂ ( ಸೂ. ಭಾ. ೩-೨-೭, ಭಾ. ಭಾ. ೨೬೭, ೨೬೭, ೨೬೮) ಸ್ಫುಟವಾಗಿ ಹೇಳಿರುತ್ತದೆ; ಸುಷುಪ್ತಿಯಲ್ಲಿ ಯಾವ ಅರಿವೂ ಇಲ್ಲದಿರುವದಕ್ಕೆ ಬ್ರಹ್ಮದೊಡನೆ ಐಕ್ಯವಾಗಿರುವದೇ ಕಾರಣವೆಂದೂ ಸ್ಪಷ್ಟವಾಗಿ ಶ್ರುತಿ ಸೂತ್ರಭಾಷ್ಯಗಳಲ್ಲಿದೆ ( ಸೂ. ಭಾ. ೩-೨-೮, ಭಾ. ಭಾ. ೨೬೭) ಹೀಗಿದ್ದರೂ **ಸುಷುಪ್ತಿಯಲ್ಲಿ**

**ಅವಿದ್ಯೆಯು ಸಂಸ್ಕಾರಶೇಷವಾಗಿ ಉಳಿಯುವದೆಂದೂ ವಿಕ್ಷೇಪ ಸಂಸ್ಕಾರಸಹಿತಲಯ ಲಕ್ಷಣಾವಿದ್ಯೆಯಿರುವದೆಂದೂ ಅಗ್ರಹಣಮಿಥ್ಯಾಜ್ಞಾನಸಂಸ್ಕಾರಗಳಿಗಿಂತ ಬೇರೆಯಾದ ಭಾವಾವಿದ್ಯಾರೂಪವಾಗಿರುವದೆಂದೂ ವ್ಯಾಖ್ಯಾನಗಳು ವಿಧವಿಧವಾಗಿ ವರ್ಣಿಸಿರುವದು ಶ್ರುತಿಸೂತ್ರಭಾಷ್ಯಬಹಿರ್ಭೂತವಾಗಿಯೂ ಅವುಗಳಿಗೆ ವಿರುದ್ಧವಾಗಿಯೂ ಇದೆ. ಅಧ್ಯಾಸಭಾಷ್ಯದಲ್ಲಿ ಸುಳಿವೇ ಇಲ್ಲದ ಸುಷುಪ್ತಿವಿಚಾರವನ್ನು ಎಳೆತಂದು ಅವಿದ್ಯೆಯನ್ನು ಸಾಧಿಸುವದಕ್ಕೆ ಹೋಗಿರುವದು ಅಪ್ರಕೃತ ಪ್ರಕ್ರಿಯೆಯಾಗಿರುತ್ತದೆ.**

(೬) ಆತ್ಮೈಕತ್ವವಿದ್ಯೆಯು ಅಧ್ಯಾಸ (ಅಥವಾ ಅಧ್ಯಾರೋಪ) ಲಕ್ಷಣವಾದ ಅನರ್ಥಹೇತುವನ್ನು ತೊಲಗಿಸಿ ಆತ್ಮೈಕತ್ವವನ್ನು ತಿಳಿಸಿಕೊಡುವದೆಂದು ಭಾಷ್ಯದಲ್ಲಿದೆ; ಅವಿದ್ಯಾಕೃತವಾದ ವೇದ್ಯವೇದಿತೃವೇದನಾದಿಭೇದವನ್ನು ತೊಲಗಿಸುವದೇ ಶಾಸ್ತ್ರದ ಕೃತ್ಯವೆಂದೂ (ಸೂ. ಭಾ. ೧-೧-೪, ಭಾ.ಭಾ. ೪೭) ಭಾಷ್ಯದಲ್ಲಿ ಹೇಳಿದೆ. ಹೀಗಿರುವಲ್ಲಿ **ಅವಿದ್ಯೆಯನ್ನು ತೊಲಗಿಸುವದು ಶಾಸ್ತ್ರವ್ಯಾಪಾರಕ್ಕೆ ವಿಷಯವಲ್ಲವೆಂತ ವ್ಯಾಖ್ಯಾನದಲ್ಲಿರುವದು ಭಾಷ್ಯವಿರುದ್ಧವಾಗಿದೆ; ಆತ್ಮನ ಜ್ಞಾನವಾದ ಮೇಲೆ ಅವಿದ್ಯೆಯು ತಾನೇ ತೊಲಗುವದೆಂದು ಕಲ್ಪಿಸಿರುವದು, ಆತ್ಮನು ಸ್ವಯಂಸಿದ್ಧನೆಂಬ ವಿದ್ವದನುಭವಕ್ಕೂ ಆತ್ಮನನ್ನು ಅರಿತುಕೊಳ್ಳಬೇಕಾದರೆ ಅವನೂ ಶುಕ್ತ್ಯಾದಿಗಳಂತೆ ವಿಷಯನಾಗಬೇಕಾಗುವದೆಂಬ ಯುಕ್ತಿಗೂ ವಿರುದ್ಧವಾಗಿರುತ್ತದೆ.**

(೭) ಸದ್ಬ್ರಹ್ಮವೇ ನಾನೆಂದು ಅರಿವುಂಟಾದಮೇಲೆ ಮಾಡತಕ್ಕದ್ದು ಏನೂ ಇರಲಾರದೆಂದು ಸಾಂಪ್ರದಾಯಿಕವಚನವನ್ನು ಉದಾಹರಿಸಿ ಆಚಾರ್ಯರು ಸ್ಪಷ್ಟವಾಗಿ ಬರೆದಿರುತ್ತಾರೆ ; ಹಾಗೆಯೇ ಆತ್ಮನಿಶ್ಚಯವಾಗುವವರೆಗೇ ಪ್ರಮಾಣಗಳು ಪ್ರಮಾಣವಾಗಿರುವವು- ಎಂದೂ ಬರೆದಿರುತ್ತಾರೆ (ಸೂ. ಭಾ. ೧-೧-೪, ಭಾ.ಭಾ. ೬೩) ಹೀಗಿದ್ದರೂ **ಆತ್ಮನ ಅಪರೋಕ್ಷಜ್ಞಾನವಾದ ಮೇಲೂ ಅಸಂಭಾವನಾವಿಪರೀತಭಾವನಾದಿಗಳು ಇರಬಹುದೆಂದು ಕಲ್ಪಿಸಿರುವದೂ ಮಿಥ್ಯಾಜ್ಞಾನದ ಸಂಸ್ಕಾರವು ಇನ್ನೂ ಉಳಿದುಕೊಂಡಿರುವದೆಂದು ಕಲ್ಪಿಸಿರುವದೂ ಈ ಪ್ರತಿಬಂಧಕಗಳನ್ನು ತೊಲಗಿಸುವದಕ್ಕೆ ಉಪಾಯ ಗಳನ್ನು ತಿಳಿಸುವದಕ್ಕೆ ಹೊರಟಿರುವದೂ ಶ್ರುತಿಭಾಷ್ಯಯುಕ್ತ್ಯನುಭವಗಳಿಗೆ ವಿರುದ್ಧವಾಗಿರುತ್ತದೆ.**

ಈ ಮೇಲೆ ಹೇಳಿದ ವಿರುದ್ಧಾಂಶಗಳನ್ನು ಬಿಟ್ಟೇ ವ್ಯಾಖ್ಯಾನಗಳನ್ನುಪಯೋಗಿಸಿಕೊಂಡು ಭಾಷ್ಯದ ಅರ್ಥವನ್ನು ನಿರ್ಧರಿಸಬೇಕು. ಉತ್ತಮಾಧಿಕಾರಿಗಳು ವ್ಯಾಖ್ಯಾನಗಳ ಹಂಗಿಲ್ಲದೆಯೂ ಭಾಷ್ಯದ ಅರ್ಥವನ್ನು ನಿರ್ಧರಿಸಿಕೊಳ್ಳಬಹುದಾಗಿದೆ.

# ೪. ಭಾಷ್ಯಾಂತರವಿರೋಧಪರಿಹಾರ

## ಎರಡು ಭಾಷ್ಯಗಳನ್ನು ಮಾತ್ರ ಪರಿಶೀಲಿಸುವದಕ್ಕೆ ಕಾರಣ

**ಪ್ರಶ್ನೆ** : ಶ್ರೀಶಂಕರಭಗವತ್ಪಾದರವರು ಶ್ರುತ್ಯಾದಿಗಳಿಗೆ ಭಾಷ್ಯವನ್ನು ಬರೆದಿರುವಂತೆಯೇ ಮಿಕ್ಕ ಭಾಷ್ಯಕಾರರೂ ಬರೆದಿರುತ್ತಾರೆ. ಅವರೂ ಶಂಕರಾಚಾರ್ಯರಂತೆಯೇ ಯುಕ್ತ್ಯನುಭವಗಳನ್ನು ತೋರಿಸಿ ತಮ್ಮ ತಮ್ಮ ಮತವನ್ನು ಸ್ಥಾಪಿಸಿ ಶಿಷ್ಯಾನುಗ್ರಹವನ್ನು ಮಾಡಿರುತ್ತಾರೆ. ಹೀಗಿರುವಲ್ಲಿ ಆಚಾರ್ಯರು ಬರೆದಿರುವ ಅಧ್ಯಾಸವಿಚಾರಕ್ಕೆ ಬೇರೆಯವರು ಮಾಡಿರುವ ಆಕ್ಷೇಪಗಳು ಸಾಧಾರವೊ, ನಿರಾಧಾರವೊ- ಎಂಬುದನ್ನೂ ವಿಚಾರಿಸಬೇಕಲ್ಲವೆ?

**ಉತ್ತರ** : ಆಚಾರ್ಯರ ಕಾಲದಲ್ಲಾಗಲಿ ಅವರಿಗಿಂತ ಹಿಂದಿನ ಕಾಲದಲ್ಲಾಗಲಿ ಅದ್ವೈತಕ್ಕಿಂತ ಬೇರೆಯಾದ ವೇದಾಂತಸಿದ್ಧಾಂತವು ಶ್ರುತಿಸಮ್ಮತವೆಂದು ತೋರಿಸುವ ಮತಗಳು ಇದ್ದವೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಅದ್ವೈತಿಗಳಲ್ಲಿಯೇ ಒಳಜಗಳಗಳು ಹೇರಳವಾಗಿದ್ದವು. ಹಿಂದಿನವರ ಅಭಿಪ್ರಾಯಭೇದಗಳಲ್ಲಿ ಒಪ್ಪುವದಕ್ಕಾಗದ ಅಂಶಗಳನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ತಿಳಿಸಿರುತ್ತಾರೆ. ಶಂಕರಾನುಯಾಯಿಗಳೆಂದು ಹೇಳಿಕೊಳ್ಳುವ ವ್ಯಾಖ್ಯಾನಕಾರರು ಆ ಆಚಾರ್ಯರ ಭಾಷ್ಯಕ್ಕೆ ತಮ್ಮ ತಮ್ಮ ಅಭಿಪ್ರಾಯಕ್ಕನುಗುಣವಾಗಿ ವ್ಯಾಖ್ಯಾನವನ್ನು ಮಾಡಿರುವದರಿಂದ ಅವುಗಳಿಗೂ ಭಾಷ್ಯಕ್ಕೂ ಇರುವ ವಿರೋಧವನ್ನು ಮೊದಲು ಪರಿಹರಿಸಬೇಕಾಯಿತು. ಮಿಕ್ಕ ಆಚಾರ್ಯರುಗಳೂ ಪ್ರಸ್ಥಾನತ್ರಯಗಳ ತಾತ್ಪರ್ಯವನ್ನು ತಿಳಿಸುವದಕ್ಕೆ ತಮ್ಮ ತಮ್ಮ ಭಾಷ್ಯಗಳನ್ನು ಬರೆದಿರುವದು ನಿಜ, ಅವುಗಳನ್ನು ಉಪಯೋಗಿಸಿಕೊಂಡು ಅವರ ಶಿಷ್ಯರು ಕೃತಾರ್ಥರಾಗುತ್ತಿರುವದೂ ನಿಜ; ಅವುಗಳಲ್ಲಿ ಮುಮುಕ್ಷುಗಳಿಗೆ ಉಪಯೋಗವಾಗುವ ಅನೇಕ ವಿಚಾರಗಳಿವೆ ಎಂಬುದೂ ನಿಜ. ಆದರೂ ಆ ಭಾಷ್ಯಕಾರರುಗಳು ಶಾಂಕರಭಾಷ್ಯದ ಮೇಲೆ ಮಾಡಿರುವ ಆಕ್ಷೇಪಗಳಿಗೆ ವ್ಯಾಖ್ಯಾನಕಾರರ ಮತವನ್ನೂ ವ್ಯಾಖ್ಯೇಯವಾದ ಭಾಷ್ಯದಲ್ಲಿರುವ ಮತವನ್ನೂ ವಿವೇಚಿಸಿ ವಿಚಾರಕ್ಕೆ ಇಟ್ಟುಕೊಳ್ಳದಿರುವದೇ ಬಲುಮಟ್ಟಿಗೆ ಕಾರಣವಾಗಿದೆ. ಆದ್ದರಿಂದ ಈವರೆಗೆ ಮಾಡಿರುವ ವ್ಯಾಖ್ಯಾನಪ್ರಸ್ಥಾನಗಳ ವಿಮರ್ಶೆಯಿಂದಲೇ ಅವರ ಹಲವು ಆಕ್ಷೇಪಗಳಿಗೆ ಉತ್ತರವನ್ನು ಕೊಟ್ಟಂತೆ ಆಗಿರುತ್ತದೆ. ಆದರೂ ಜಿಜ್ಞಾಸುಗಳ ತೃಪ್ತಿಗಾಗಿ ಸ್ವಲ್ಪಮಟ್ಟಿಗೆ ಭಾಷ್ಯಾಂತರವಿಚಾರವನ್ನೂ ಇಲ್ಲಿ ಸೇರಿಸುವೆವು.

**ಪ್ರಶ್ನೆ** : ಈ ಭಾಷ್ಯಾಂತರಗಳು ಎಷ್ಟಿವೆ? ಅವರಾದರೂ ಒಮ್ಮತವಾಗಿಲ್ಲವೇಕೆ?

**ಉತ್ತರ** : ಈ ಭಾಷ್ಯಗಳನ್ನೆಲ್ಲ ನಾವು ಈಗ ವಿಮರ್ಶೆಗೆ ತೆಗೆದುಕೊಳ್ಳುವದಿಲ್ಲ. **ನಿಂಬಾರ್ಕ, ವಲ್ಲಭ, ಬಲದೇವ**- ಇವರ ಭಾಷ್ಯಗಳು ಉತ್ತರದೇಶದಲ್ಲಿ ಪ್ರಚಾರದಲ್ಲಿವೆ. **ಭಾಸ್ಕರ, ವಿಜ್ಞಾನಭಿಕ್ಷು**- ಇವರ ಭಾಷ್ಯಗಳು ಅಚ್ಚಾಗಿವೆಯಾದರೂ ನೇರಾಗಿ ಅವನ್ನು ಅನುಸರಿಸುವವರು ಈಗ ಕಾಣುತ್ತಿಲ್ಲ. **ಶ್ರೀಕರಭಾಷ್ಯ**ವೆಂಬ ವೀರಶೈವರ ಭಾಷ್ಯವು ಜನರಮೇಲೆ ಅಷ್ಟೇನೂ ಪ್ರಭಾವವನ್ನು ಬೀರಿಲ್ಲ. ಆದ್ದರಿಂದ ದಕ್ಷಿಣದಲ್ಲಿ ಸುಪ್ರಸಿದ್ಧವಾಗಿರುವ **ರಾಮಾನುಜಾಚಾರ್ಯರ** ಮತ್ತು **ಮಧ್ವಾಚಾರ್ಯ** (ಅಥವಾ ಆನಂದತೀರ್ಥ)ರ ಭಾಷ್ಯಗಳೆರಡನ್ನು ಮಾತ್ರ ಇಲ್ಲಿ ಸಮಾಲೋಚನೆಗೆ ತೆಗೆದುಕೊಳ್ಳುವೆವು.

## ಶ್ರೀಭಾಷ್ಯದಲ್ಲಿ ಲಘುಪೂರ್ವಪಕ್ಷ

**ಪ್ರಶ್ನೆ** : ಶ್ರೀರಾಮಾನುಜಾಚಾರ್ಯರು ಅಧ್ಯಾಸದ ವಿಷಯಕ್ಕೆ ಮಾಡಿರುವ ಆಕ್ಷೇಪಗಳು ಹೇಗಿವೆ?

**ಉತ್ತರ** : ಈ ಆಚಾರ್ಯರು ಉಪನಿಷತ್ತುಗಳ ತಾತ್ಪರ್ಯವನ್ನು **ವೇದಾರ್ಥಸಂಗ್ರಹ**ವೆಂಬ ಗ್ರಂಥದಲ್ಲಿ ಬರೆದಿರುತ್ತಾರೆ, ಗೀತೆಗೂ ಒಂದು ಭಾಷ್ಯವನ್ನು ಬರೆದಿದ್ದಾರೆ. ಸೂತ್ರಕ್ಕೆ **ಶ್ರೀ ಭಾಷ್ಯ, ವೇದಾಂತಸಾರ, ವೇದಾಂತದೀಪ**- ಎಂಬ ಮೂರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಇವುಗಳೊಳಗೆಲ್ಲ ನಾವು ವಿಸ್ತಾರವಾಗಿರುವ ಶ್ರೀಭಾಷ್ಯವನ್ನೇ ಅನುಸರಿಸಿ ಇಲ್ಲಿ ವಿಚಾರವನ್ನು ಮಾಡುತ್ತೇವೆ.

**ಶ್ರೀಭಾಷ್ಯದಲ್ಲಿ ಅಧ್ಯಾಸಭಾಷ್ಯವನ್ನೇ ನೇರಾಗಿ ಸಮಾಲೋಚನೆಗೆ ಇಟ್ಟುಕೊಂಡಿಲ್ಲ.** ಜಿಜ್ಞಾಸಾಧಿಕರಣಭಾಷ್ಯದಲ್ಲಿ ಬರೆದುಕೊಂಡಿರುವ **ಲಘುಪೂರ್ವಪಕ್ಷದಲ್ಲಿ** ಅದ್ವೈತಮತವನ್ನು ಹೀಗೆಂದು ಅನುವಾದಮಾಡಿಕೊಂಡಿದೆ: ''ಬ್ರಹ್ಮಸ್ವರೂಪವನ್ನು ಮುಸುಕಿಕೊಂಡಿರುವ ಅವಿದ್ಯೆಯಿಂದಾಗಿರುವ ಪಾರಮಾರ್ಥಿಕವಲ್ಲದ ಭೇದದರ್ಶನವೇ ಬಂಧಕ್ಕೆ ಮೂಲ; ಬಂಧವೂ ಪರಮಾರ್ಥವಲ್ಲ, ಅದು ಪರಮಾರ್ಥವಲ್ಲದ್ದರಿಂದಲೇ ಜ್ಞಾನದಿಂದಲೇ ತೊಲಗುತ್ತದೆ. ಅದನ್ನು ತೊಲಗಿಸುವ ಜ್ಞಾನವು 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಉಂಟಾಗತಕ್ಕದ್ದು' (ಶ್ರೀ. ಪು. ೭).

ಇದು ಯಾವದೋ ವ್ಯಾಖ್ಯಾನಗ್ರಂಥದಿಂದ ತೆಗೆದುಕೊಂಡದ್ದೆಂಬುದು ಸ್ಪಷ್ಟವಾಗಿದೆ. ಏಕೆಂದರೆ ಶಾಂಕರಭಾಷ್ಯದಲ್ಲಿ ಈ ಬಗೆಯ ಸಿದ್ಧಾಂತವರ್ಣನೆಯು ಎಲ್ಲಿಯೂ ಇಲ್ಲ.

**ಪ್ರಶ್ನೆ** : ಈ ಪೂರ್ವಪಕ್ಷವನ್ನು ಅವರು ಹೇಗೆ ಖಂಡಿಸಿರುತ್ತಾರೆ?

**ಉತ್ತರ** : ಅವರು ಬರೆದಿರುವದು ಹೀಗೆ :

(೧) 'ಅವಿದ್ಯಾನಿವೃತ್ತಿಯೇ ಮೋಕ್ಷವು, ಅದು ಬ್ರಹ್ಮವಿಜ್ಞಾನದಿಂದಲೇ ಆಗುವದು ಎಂದಿರಲ್ಲ, ಅದನ್ನು ನಾವೂ ಒಪ್ಪುತ್ತೇವೆ. ಅವಿದ್ಯಾನಿವೃತ್ತಿಯಾಗುವದಕ್ಕೆಂದು ವೇದಾಂತವಾಕ್ಯಗಳಿಂದ ವಿಧಿಸಲಿರುವ ಜ್ಞಾನದ ರೂಪವೇನು? ಅದು ವಾಕ್ಯದಿಂದಾಗುವ ವಾಕ್ಯಾರ್ಥಜ್ಞಾನಮಾತ್ರವೊ, ಅಥವಾ ತನ್ಮೂಲಕವಾದ ಉಪಾಸನೆಯೊ?- ಎಂಬುದನ್ನು ವಿವೇಚಿಸಬೇಕಾಗಿದೆ.

ಮೊದಲನೆಯದಾಗಿ ಅದು ವಾಕ್ಯಜನ್ಯಜ್ಞಾನವಲ್ಲ, ಏಕೆಂದರೆ ವಿಧಿಸದೆ ಇದ್ದರೂ ಆ ಜ್ಞಾನವು ವಾಕ್ಯದಿಂದಲೇ ಉಂಟಾಗುತ್ತದೆ; ಅಷ್ಟರಿಂದ ಅವಿದ್ಯೆಯು ನಾಶವಾಗುವದು ಕಂಡೂ ಇಲ್ಲ. ' ಭೇದವಾಸನೆಯು ತೊಲಗದೆ ಇದ್ದರೆ ವಾಕ್ಯದಿಂದ ಅವಿದ್ಯಾನಿವರ್ತಕಜ್ಞಾನ ವುಂಟಾಗುವದಿಲ್ಲ, ಉಂಟಾದರೂ ಒಂದೇ ಬಾರಿಗೆ ಭೇದಜ್ಞಾನವು ನಿವೃತ್ತವಾಗುವದಿಲ್ಲ ವೆಂಬುದೇನೂ ತಪ್ಪಲ್ಲ; ಚಂದ್ರನು ಒಬ್ಬನೇ ಎಂದು ತಿಳಿದಮೇಲೂ ಇಬ್ಬರು ಚಂದ್ರರು ಎಂಬ ಜ್ಞಾನವು ಹೋಗದೆ ಇರುವದಲ್ಲವೆ? ಹಾಗೆಯೇ (ಇದನ್ನು ತಿಳಿಯಬೇಕು). ಭೇದಜ್ಞಾನವು ತೊಲಗದಿದ್ದರೂ ಮೂಲವು ಕತ್ತರಿಸಿಹೋಗಿರುವದರಿಂದ ಬಂಧಕಾರಣವಾಗಲಾರದು' ಎಂದು ಹೇಳಿರುವದು ಸರಿಯಲ್ಲ. ಏಕೆಂದರೆ ಸಾಮಗ್ರಿಯಿದ್ದರೂ ಜ್ಞಾನವು ಉಂಟಾಗುವದಿಲ್ಲ ವೆಂಬುದು ಯುಕ್ತವಲ್ಲ; ವಿಪರೀತಬುದ್ಧಿಯ ವಾಸನೆಯು ಇದ್ದರೂ ಆಪ್ತರ ಹೇಳಿಕೆ, ಅನುಮಾನಕ್ಕೆ ಬೇಕಾದ ಲಿಂಗವನ್ನು ಕಂಡದ್ದು- ಮುಂತಾದವುಗಳಿಂದ ಬಾಧಕಜ್ಞಾನವಾಗುವದು ಕಂಡೂ ಇದೆ. ವಾಕ್ಯಾರ್ಥಜ್ಞಾನವಾದಮೇಲೂ ಅನಾದಿಯಾದ ವಾಸನೆಯೂ ಸ್ವಲ್ಪ ಇರುವದರಿಂದ ಭೇದಜ್ಞಾನವು ಇದ್ದುಕೊಂಡೇ ಇರುತ್ತದೆ -ಎಂದು ಹೇಳುವಹಾಗಿಲ್ಲ; ಏಕೆಂದರೆ ಭೇದಜ್ಞಾನದ ಸಾಮಗ್ರಿಯಿಂದ ಉಂಟಾಗುವ ವಾಸನೆಯೂ ಮಿಥ್ಯಾರೂಪವಾಗಿರುವದರಿಂದ ಜ್ಞಾನವುಂಟಾದದ್ದರಿಂದಲೇ ಅದು ತೊಲಗುತ್ತದೆ. ಜ್ಞಾನವುಂಟಾದರೂ ಮಿಥ್ಯಾರೂಪವಾದ ಅದು ತೊಲಗದೆ ಇದ್ದರೆ, ಆ ವಾಸನೆಯು ಎಂದಿಗೂ ಹೋಗಲೇ ಆರದು. ವಾಸನೆಯ ಕಾರ್ಯವಾದ ಭೇದಜ್ಞಾನದ ಮೂಲವು ಕತ್ತರಿಸಿಹೋಗಿದೆ, ಆದರೂ ಅದು ಮುಂದುವರೆದಿರುತ್ತದೆ ಎಂಬುದು ಹುಡುಗರ ಮಾತು. ದ್ವಿಚಂದ್ರಜ್ಞಾನವೇ ಮುಂತಾದವುಗಳಲ್ಲಾದರೊ, ಬಾಧಕಜ್ಞಾನವು ಇದ್ದರೂ ಮಿಥ್ಯಾಜ್ಞಾನಕ್ಕೆ ಕಾರಣವಾದ ಕಣ್ಣು ಪರೆಯೇ ಮುಂತಾದ ಪರಮಾರ್ಥವಾದ ತಿಮಿರಾದಿದೋಷವು ಜ್ಞಾನಬಾಧ್ಯವಲ್ಲವಾಗಿ ಅದು ಹೋಗದೆ ಇರುವದರಿಂದ ಮಿಥ್ಯಾಜ್ಞಾನವು ಇನ್ನೂ ಇದ್ದುಕೊಂಡಿರುವದೇನೂ ವಿರುದ್ಧವಲ್ಲ. ಬಲವತ್ತರವಾದ ಪ್ರಮಾಣದಿಂದ ಬಾಧಿತವಾಗುವದರಿಂದ (ರಜ್ಜುಸರ್ಪ ನಿಮಿತ್ತವಾದ) ಭಯಾದಿಕಾರ್ಯವು ಹೋಗಿರುತ್ತದೆ. ಇದೂ ಅಲ್ಲದೆ ಭೇದವಾಸನೆಯನ್ನು ಕಳೆದು ಹಾಕುವದರಿಂದ ಜ್ಞಾನವುಂಟಾಗುವದೆನ್ನುವವರ ಮತದಲ್ಲಿ ಜ್ಞಾನವುಂಟಾಗುವದು ಎಂದಿಗೂ ಆಗಲೇ ಆರದು. ಏಕೆಂದರೆ ಭೇದವಾಸನೆಯು ಅನಾದಿಕಾಲದಿಂದ ಕೂಡಿಹಾಕಿ

ಕೊಂಡಿರುವದರಿಂದ ಅಪರಿಮಿತವಾಗಿರುತ್ತದೆ; ಅದಕ್ಕೆ ವಿರುದ್ಧವಾದ ಭಾವನೆಯು ಅಲ್ಪವಾಗಿರುವದರಿಂದ ಅದು ಈ ವಾಸನೆಯನ್ನು ಕಳೆಯಲಾರದು. ಆದ್ದರಿಂದ ವಾಕ್ಯಾರ್ಥಜ್ಞಾನಕ್ಕಿಂತ ಬೇರೆಯಾಗಿಯೇ ಇರುವ ಧ್ಯಾನ, ಉಪಾಸನೆ- ಮುಂತಾದ ಶಬ್ದಗಳಿಂದ ಕರೆಯಲ್ಪಡುವ ಜ್ಞಾನವೇ ವೇದಾಂತವಾಕ್ಯಗಳಿಂದ ವಿಧಿಸಲ್ಪಟ್ಟಿದೆ'' (ಶ್ರೀ. ಪು. ೭-೮).

ಇಲ್ಲಿ ಖಂಡಿಸಿರುವ ಗ್ರಂಥಭಾಗದಿಂದಲೂ ಈ ಪೂರ್ವಪಕ್ಷವು ಯಾರದ್ದೆಂಬುದು ಸ್ಪಷ್ಟವಾಗುವದಿಲ್ಲ. ವಾಕ್ಯಜನ್ಯಜ್ಞಾನಮಾತ್ರದಿಂದ ಅವಿದ್ಯೆಯು ಹೋದರೂ ಅದರ ಸಂಸ್ಕಾರವು ಉಳಿದಿರುತ್ತದೆಯೆಂದೂ ಜ್ಞಾನಾಭ್ಯಾಸರೂಪವಾದ ನಿದಿಧ್ಯಾಸನದಿಂದ ಸಾಕ್ಷಾತ್ಕಾರವಾಗುತ್ತದೆಯೆಂದೂ ಹೇಳುವ **ಮಂಡನಮಿಶ್ರರ ಅಥವಾ ಅವರ ಮತವನ್ನನುಸರಿಸಿರುವ ವಾಚಸ್ಪತಿಮಿಶ್ರರ** ಮತವಿದಲ್ಲ. ಏಕೆಂದರೆ ಅವರು ಹೇಳುವ ಜ್ಞಾನಾಭ್ಯಾಸವನ್ನಾಗಲಿ ಜ್ಞಾನಸಂಸ್ಕಾರದಿಂದ ಅವಿದ್ಯಾಸಂಸ್ಕಾರವು ಹೋಗುವದೆಂಬ ಅವರ ಪಕ್ಷವನ್ನಾಗಲಿ ಇಲ್ಲಿ ಅನುವಾದಮಾಡಿಕೊಂಡಿಲ್ಲ. **ವಿವರಣಾಚಾರ್ಯರು** ವಾಕ್ಯದಿಂದಲೇ ಅಪರೋಕ್ಷಜ್ಞಾನವುಂಟಾದರೂ ಅಸಂಭಾವನಾವಿಪರೀತಭಾವನೆಗಳು ಆಗಬಹುದೆಂದು ಒಂದು ಮತ, ವಾಕ್ಯವು ಪರೋಕ್ಷಜ್ಞಾನವನ್ನೇ ಉಂಟುಮಾಡಿ, ಬಳಿಕ ತರ್ಕಾದಿಗಳಿಂದ ಸಹಕೃತವಾಗಿ ಅಪರೋಕ್ಷಜ್ಞಾನವನ್ನುಂಟುಮಾಡುತ್ತದೆ ಎಂದು ಇನ್ನೊಂದು ಮತ - ಹೀಗೆ ಎರಡು ಮತಗಳನ್ನು ಹೇಳಿದ್ದಾರೆ; ಅವುಗಳಲ್ಲಿ ಯಾವದೊಂದನ್ನೂ ಇಲ್ಲಿ ಅನುವಾದಮಾಡಿಕೊಂಡಿಲ್ಲ. ಇದಲ್ಲದೆ 'ಭೇದಜ್ಞಾನದ ಮೂಲವು ಕತ್ತರಿಸಿಹೋಗಿದೆ, ಆದರೂ ಉಳಿದುಕೊಂಡಿರುತ್ತದೆ ಎಂಬುದು ಹುಡುಗರ ಮಾತು' ಎಂದು ಹಾಸ್ಯಮಾಡಿರುವದು ಅವರಿಗೆ ಹೊಂದುವದಿಲ್ಲ; ಏಕೆಂದರೆ ಅವರು ಅವಿದ್ಯಾಲೇಶವನ್ನು ಒಪ್ಪಿರುತ್ತಾರೆ. ಅವಿದ್ಯೆಯು ಹೋಗಿದೆ, ಅದರ ಸಂಸ್ಕಾರವು ಉಳಿದಿದೆ ಎಂಬ ಒಂದು ಪಕ್ಷವನ್ನೂ ಅವರು ಒಪ್ಪಿರುತ್ತಾರಾದರೂ 'ಭೇದವಾಸನೆಯನ್ನು ಕಳೆದು ಹಾಕುವದರ ಮೂಲಕ ಜ್ಞಾನವುಂಟಾಗುವದು' ಎಂದು ಅವರು ಹೇಳುವದಿಲ್ಲ. **ಮಂಡನಮಿಶ್ರರು** 'ಪ್ರಮಾಣದಿಂದ ತತ್ತ್ವದರ್ಶನವುಂಟಾದರೂ ಅನಾದಿಮಿಥ್ಯಾದರ್ಶನದ ಅಭ್ಯಾಸದಿಂದ ಉಂಟಾಗಿರುವ ಬಲು ಗಟ್ಟಿಯಾಗಿರುವ ಸಂಸ್ಕಾರವನ್ನು ಕುಗ್ಗಿಸುವದಕ್ಕೆ ಅಥವಾ ನಾಶಮಾಡುವದಕ್ಕೆ ತತ್ವದರ್ಶನಾಭ್ಯಾಸವನ್ನು ಮಾಡಬೇಕೆಂದು ಬಲ್ಲವರು ಹೇಳುತ್ತಾರೆ' (ಬ್ರ. ಸಿ. ಪು. ೩೫) ಎಂದು ಬರೆದಿರುತ್ತಾರಾದ್ದರಿಂದ ಅವರದೇ ಈ ಮತವಿರಬೇಕೆಂದು ಹೇಗೋ ಕಲ್ಪಿಸಬೇಕಾಗಿದೆ; ಹೇಗೇ ಆಗಲಿ, ಈ ಮತವು ಶಾಂಕರಭಾಷ್ಯದಲ್ಲಿಲ್ಲವೆಂಬುದು ನಿಶ್ಚಯ.

## ಶ್ರೀ ಭಾಷ್ಯದಲ್ಲಿರುವ ಮಹಾಪೂರ್ವಪಕ್ಷ

**ಪ್ರಶ್ನೆ :** ಅದ್ವೈತಖಂಡನೆಗೆ ಶ್ರೀರಾಮನುಜಾಚಾರ್ಯರು ಮತ್ತೇನೂ ಬರೆದಿಲ್ಲವೆ?

**ಉತ್ತರ** : ಈವರೆಗೆ ವಿಮರ್ಶಿಸಿದ್ದು ಶ್ರೀಭಾಷ್ಯದಲ್ಲಿರುವ 'ಲಘುಪೂರ್ವಪಕ್ಷ' ಇದಲ್ಲದೆ **'ಮಹಾಪೂರ್ವಪಕ್ಷ'** ವೆಂಬ ಇನ್ನೊಂದು ಪಕ್ಷವೂ ಉಂಟು. ಅದರಲ್ಲಿ:

''ಅಶೇಷವಿಶೇಷಪ್ರತ್ಯನೀಕಚಿನ್ಮಾತ್ರವಾದ ಬ್ರಹ್ಮವೇ ಪರಮಾರ್ಥವು, ಅದಕ್ಕಿಂತ ಬೇರೆಯಾದ ಬಗೆಬಗೆಯ ಜ್ಞಾತೃಜ್ಞೇಯತತ್ಕೃತಭೇದವೇ ಮುಂತಾದದ್ದೆಲ್ಲ ಅದರಲ್ಲಿಯೇ ಪರಿಕಲ್ಪಿತವಾಗಿವೆ'' ಎಂದು ಪ್ರತಿಜ್ಞೆ ಮಾಡಿ ಅದಕ್ಕೆ ಆಧಾರವಾಗಿ ಕೆಲವು ಶ್ರುತಿಸ್ಮೃತಿವಾಕ್ಯಗಳನ್ನೂ ಪುರಾಣವಚನಗಳನ್ನೂ ಉದಾಹರಿಸಿದ ಬಳಿಕ-

''ಮಿಥ್ಯಾತ್ವವೆಂದರೆ ಮೊದಲು ತೋರುತ್ತಿದ್ದ ವಸ್ತುವು ಇದ್ದುದ್ದು ಇದ್ದಂತೆ ಅರಿಯುವ ಜ್ಞಾನದಿಂದ ನಿವರ್ತ್ಯವಾಗುವದು, ಹಗ್ಗವೇ ಮುಂತಾದ ಅಧಿಷ್ಠಾನವುಳ್ಳ ಸರ್ಪವೇ ಮುಂತಾದದ್ದು ಇದಕ್ಕೆ ಉದಾಹರಣೆ. ದೋಷದಿಂದಲೇ ಅಲ್ಲವೆ, ಅಲ್ಲಿ ಅದನ್ನು ಕಲ್ಪಿಸುತ್ತಾರೆ? ಇದರಂತೆ ಚಿನ್ಮಾತ್ರವಿಗ್ರಹವುಳ್ಳ ಪರಬ್ರಹ್ಮದಲ್ಲಿ ದೇವತೆಗಳು, ತಿರ್ಯಗ್ಜಂತುಗಳು, ಮನುಷ್ಯರು, ಸ್ಥಾವರಪ್ರಾಣಿಗಳು- ಮುಂತಾದ ಭೇದವುಳ್ಳ ಈ ಜಗತ್ತೆಲ್ಲವೂ ದೋಷದಿಂದ ಕಲ್ಪಿತವಾಗಿದ್ದು ಬ್ರಹ್ಮಸ್ವರೂಪವನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುವದರಿಂದ ಬಾಧ್ಯವಾಗಿರುವದರಿಂದ ಮಿಥ್ಯಾರೂಪವಾಗಿರುತ್ತದೆ. ದೋಷವೊ, ಎಂದರೆ ಸ್ವರೂಪವನ್ನು ಮುಚ್ಚಿ ಬಗೆಬಗೆಯ ವಿಚಿತ್ರವಾದ ವಿಕ್ಷೇಪಗಳನ್ನುಂಟುಮಾಡುವ ಸದಸದನಿರ್ವಚನೀಯವಾದ ಅನಾದ್ಯವಿದ್ಯೆ'' (ಶ್ರೀ. ಪು. ೧೬) ಎಂದು ಮುಂತಾಗಿ ಬರೆದಿದೆ.

ಇಲ್ಲಿ 'ಸದಸದಸನಿರ್ವಚನೀಯವಾದ ಅವಿದ್ಯೆಯೇ ಕಲ್ಪನೆಗೆ ಕಾರಣವಾದ ದೋಷವು' ಎಂದು ಬರೆದಿರುವದರಿಂದ ಇದು **ಪಂಚಪಾದಿಕೆಯ ಮತ್ತು ವಿವರಣದ ಮತಕ್ಕೆ ಹೊಂದಿಗೆ**ಯಾಗಿರುತ್ತದೆ. ಆದರೆ ಇದರ ಮುಂದೆ :-

''ಆದ್ದರಿಂದ ಜನ್ಮನಾಶಗಳಿಲ್ಲದ, ಅವಿಚ್ಛಿನ್ನಸಂಪ್ರದಾಯವುಳ್ಳ, ದೋಷದ ವಾಸನೆಯನ್ನು ಸಂಭಾವನೆ ಮಾಡಿಕೊಳ್ಳಲಾಗದ ಶಾಸ್ತ್ರದಿಂದುಂಟಾದ ನಿರ್ವಿಶೇಷ ನಿತ್ಯಶುದ್ಧಮುಕ್ತಸ್ವಪ್ರಕಾಶಚಿನ್ಮಾತ್ರಬ್ರಹ್ಮವೇ ತಾನೆಂದು ಅರಿತುಕೊಳ್ಳುವದರಿಂದ ದೋಷವಿರಬಹುದೆಂದು ಸಂಭಾವಿಸಬಹುದಾದ, ಸಾವಕಾಶವಾಗಿರುವ, ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಸಿದ್ಧವಾಗಿರುವ ಬಗೆ ಬಗೆಯ ವಿಕಲ್ಪರೂಪದ ಬಂಧವು ನಿವೃತ್ತವಾಗುವದು ಯುಕ್ತವೇ'' (ಶ್ರೀ. ಪು. ೧೮) ಎಂದು ಬರೆದಿರುವದನ್ನು ನೋಡಿದರೆ ಇದು **ಮಂಡನಮತ**ವೆಂದು ಹೇಳಬೇಕಾಗುತ್ತದೆ. ಏಕೆಂದರೆ ಪ್ರತ್ಯಕ್ಷಾದಿಗಳು ಸಂಭಾವಿತದೋಷವುಳ್ಳವೆಂದೂ ಅಪೌರುಷೇಯವಾದ ವೇದದಲ್ಲಿ ಯಾವ ದೋಷವು ಇಲ್ಲವೆಂದೂ ಆದ್ದರಿಂದ ಪ್ರತ್ಯಕ್ಷಾದಿಗಳಿಗಿಂತ ಆಮ್ನಾಯವೇ ಪ್ರಬಲವೆಂದೂ (ಬ್ರ.ಸಿ.ಪು.೪೦) **ಬ್ರಹ್ಮಸಿದ್ಧಿಯಲ್ಲಿ** ಬರೆದಿದೆ. ಮಹಾಪೂರ್ವಪಕ್ಷದಲ್ಲಿ ಮುಂದೆ ಬರೆದಿರುವ 'ಅಪಚ್ಛೇದನ್ಯಾಯವನ್ನು ಮಂಡನಮಿಶ್ರರೂ (ಬ್ರ.ಸಿ.೪೦) ಅವರ ಅನುಯಾಯಿಗಳಾದ ವಾಚಸ್ಪತಿಮಿಶ್ರರೂ ಉಪಯೋಗಿಸಿರುತ್ತಾರೆ. ಆದ್ದರಿಂದ ಇದು **ಮಂಡನಮಿಶ್ರರ ಅಥವಾ ಅವರನ್ನು**

**ಹಿಂಬಾಲಿಸಿರುವ ವಾಚಸ್ಪತಿ ಮಿಶ್ರರ ಮತ**ವೆಂದು ಹೇಳಬೇಕಾಗುವದು. ಆದರೆ ಮಿಶ್ರರ ಮತದಲ್ಲಿ 'ಅನಿರ್ವಚನೀಯಾವಿದ್ಯೆಯೆಂಬ ದೋಷದಿಂದ ಅಧ್ಯಾಸವಾಗಿದೆ' ಎಂಬ ಪಂಚಪಾದಿಕೆಯ ಪಕ್ಷವನ್ನು ಆದರಿಸಿಲ್ಲ.

ಇದೂ ಅಲ್ಲದೆ ಈ ಮಹಾಪೂರ್ವಪಕ್ಷದಲ್ಲಿ 'ಲಕ್ಷಣವಾಕ್ಯವು ಅಖಂಡೈಕರಸವಾದ ಬ್ರಹ್ಮವನ್ನು ಪ್ರತಿಪಾದಿಸುತ್ತದೆ' (ಶ್ರೀ. ಪು. ೨೦) 'ಪ್ರತ್ಯಕ್ಷಾದಿಗಳಿಗೂ ಶಾಸ್ತ್ರಕ್ಕೂ ವಿರೋಧವಿಲ್ಲ; ನಿರ್ವಿಶೇಷಸನ್ಮಾತ್ರವಾದ ಬ್ರಹ್ಮವನ್ನೇ ಪ್ರತ್ಯಕ್ಷವು ಹೇಳುತ್ತದೆ' (ಶ್ರೀ ೨೧), 'ಅನುಭೂತಿಯೇ ಪರಮಾರ್ಥವು, ಅದೇ ಸತ್ತು; ಅದು ಸ್ವತಃಸಿದ್ಧವಾಗಿದೆ, ಏಕೆಂದರೆ ಅನುಭೂತಿಯಾಗಿರುತ್ತದೆ, ಮತ್ತೊಂದು ಸಿದ್ಧವಾಗುವದಾದರೆ ಅನುಭೂತಿಯೇ ಅಲ್ಲದೆ ಹೋಗುವದು' (ಶ್ರೀ ಪು. ೨೨) - ಎಂದು ಬೇರೆ ಬೇರೆಯ ಅದ್ವೈತವ್ಯಾಖ್ಯಾನಪ್ರಸ್ಥಾನಗಳನ್ನು ಒಟ್ಟುಗೂಡಿಸಿ ಬರೆದುಕೊಂಡಿರುತ್ತದೆ. ಆದ್ದರಿಂದ ಇಲ್ಲಿ ಯಾವದಾದರೊಂದು ಪ್ರಕ್ರಿಯೆಯನ್ನೇ ಹಿಡಿದಿದೆ ಎಂದು ನಿರ್ಧರಿಸುವದಕ್ಕೆ ಬರುವಂತಿಲ್ಲ. ಶ್ರೀ ಭಾಷ್ಯದ ವ್ಯಾಖ್ಯಾನಕಾರರೂ ಅದ್ವೈತಿಗಳ ವಿವಿಧಮತಗಳನ್ನು ಇಲ್ಲಿ ಪರಾಮರ್ಶಿಸಿದೆ ಎಂದೇ ಬರೆದಿರುತ್ತಾರೆ. ವ್ಯಾಖ್ಯಾನ ಪ್ರಸ್ಥಾನದವರ ಮೂಲಾವಿದ್ಯಾವಾದವನ್ನು ಇಲ್ಲಿ ವಿಸ್ತಾರವಾಗಿ ಖಂಡಿಸಿರುತ್ತದೆ. ಹೇಗೇ ಆಗಲಿ, ಇಲ್ಲಿಯೂ ಶಂಕರಭಗವತ್ಪಾದರು ಬರೆದಿರುವ ಅಧ್ಯಾಸಭಾಷ್ಯದ ಪರಾಮರ್ಶವಿಲ್ಲವೆಂಬುದು ನಿಶ್ಚಯ.

## ಶ್ರೀ ಭಾಷ್ಯದಲ್ಲಿ ಅಧ್ಯಾಸಭಾಷ್ಯವನ್ನು ಸಮಾಲೋಚನೆ ಮಾಡಿಲ್ಲ

**ಪ್ರಶ್ನೆ :-** ಶ್ರೀ ಭಾಷ್ಯದಲ್ಲಿ ಅಧ್ಯಾಸಭಾಷ್ಯವಿಚಾರವನ್ನು ಮಾಡಿಯೇ ಇಲ್ಲವೆ?

**ಉತ್ತರ :** ಇಲ್ಲ. ಅವರ ಕಾಲದಲ್ಲಿ ವ್ಯಾಖ್ಯಾನಪ್ರಸ್ಥಾನಗಳೇ ಬಹಳವಾಗಿ ಪ್ರಚುರವಾಗಿದ್ದವೆಂದು ತೋರುತದೆ. ಆದ್ದರಿಂದ ಅವರು ಮಹಾಪೂರ್ವಪಕ್ಷದಲ್ಲಿ ವ್ಯಾಖ್ಯಾನಕಾರರ ಮತಗಳನ್ನೇ ಖಂಡಿಸುವದಕ್ಕೆ ಹೊರಟಿರುತ್ತಾರೆ.

ಶ್ರೀಭಾಷ್ಯದಲ್ಲಿ ಶಾಂಕರಭಾಷ್ಯಸಂಮತವಾದ ಅಧ್ಯಾಸವಿಮರ್ಶೆಯಿಲ್ಲವೇ ಇಲ್ಲವೆಂಬುದಕ್ಕೆ ಒಂದು ಗಮಕವೇನೆಂದರೆ ಪ್ರತ್ಯಕ್ಷ, ಅನುಮಾನ, ಆಗಮ'- ಇವು ಪ್ರಮಾಣಗಳು. ನಿರಸ್ತನಿಖಿಲದೋಷಗಂಧವುಳ್ಳದ್ದೂ ಅನವಧಿಕಾತಿಶಯಾಸಂಖ್ಯೇಯ ಕಲ್ಯಾಣಗುಣಗಣಗಳುಳ್ಳದ್ದೂ ಸರ್ವಜ್ಞವೂ ಸತ್ಯಸಂಕಲ್ಪವೂ ಆದ ಪರಬ್ರಹ್ಮವು ಆಗಮಗಮ್ಯವಾದದ್ದು' (ಶ್ರೀ. ಪು. ೮೭) ಎಂದು ತಮ್ಮ ಸಿದ್ಧಾಂತವನ್ನು ಶ್ರೀಭಾಷ್ಯಕಾರರು ಬರೆದಿರುತ್ತಾರೆ. ಆದರೆ ' ಸಕಲಪ್ರಮಾಣಪ್ರಮೇಯವ್ಯವಹಾರಗಳೂ ಶಾಸ್ತ್ರಗಳೂ ಅವಿದ್ಯಾಪುರಸ್ಸರವಾಗಿ ಹೊರಟಿವೆ' ಎಂಬ ಶಾಂಕರಭಾಷ್ಯವನ್ನು ಇಲ್ಲಿ ವಿಮರ್ಶಿಸಿರುವದಿಲ್ಲ. ಅಧ್ಯಾಸವನ್ನು ವಿಮರ್ಶಿಸುವದಕ್ಕೆ ಇದೇ ಯುಕ್ತವಾದ ಸ್ಥಳವಾದರೂ ಅದನ್ನು ಬಿಟ್ಟು ಬಿಟ್ಟಿರುತ್ತಾರೆ.

ಇನ್ನೊಂದು ಮಾತು : 'ನಿರ್ವಿಶೇಷವಸ್ತುವಾದಿಗಳು ನಿರ್ವಿಶೇಷವಸ್ತುವಿಗೆ ಇದು ಪ್ರಮಾಣವು ಎಂದು ಹೇಳುವದಕ್ಕೆ ಆಗುವದಿಲ್ಲ' (ಶ್ರೀ. ೨೩) ಎಂದು ಪ್ರಾರಂಭಿಸಿ ಬರೆದಿರುವ ವಿಸ್ತಾರವಾದ ಚರ್ಚೆಯಲ್ಲಿಯೂ ಪ್ರಮಾಣಗಳೆಲ್ಲವೂ ಅಧ್ಯಾಸಲಕ್ಷಣಾವಿದ್ಯಾಪೂರ್ವಕವಾಗಿ ಪ್ರವರ್ತಿಸುತ್ತವೆ- ಎಂಬ ಶಾಂಕರವಾಕ್ಯವನ್ನು ವಿಚಾರಮಾಡಿರುವದಿಲ್ಲ. 'ಎಲ್ಲಾ ಜ್ಞಾನವೂ ಯಥಾರ್ಥವೇ' ಎಂಬ ಪಕ್ಷವನ್ನು (ಶ್ರೀ. ಪು. ೮೩- ೮೭) ಅಂಗೀಕರಿಸಿ ಮಾಡಿರುವ ವಿಸ್ತಾರವಾದ ಚರ್ಚೆಯಲ್ಲಿ ಅಧ್ಯಾಸವನ್ನು ವಿಚಾರಮಾ:ಷವೆಯೇ ಮೇಲೆ ಹೇಳಿರುವ ಪ್ರತ್ಯಕ್ಷಾದಿಪ್ರಮಾಣತ್ರಯವನ್ನು ಶ್ರೀಭಾಷ್ಯಕಾರರು ಅಂಗೀಕರಿಸಿ ಬರೆದಿರುತ್ತಾರೆ. ಭ್ರಮೆಯನ್ನು ಅಂಗೀಕರಿಸಿ "ಅಧಿಷ್ಠಾನಕ್ಕಿಂತ ಬೇರೆಯಾದ ಪಾರಮಾರ್ಥಿಕವಾದ ಧರ್ಮಗಳನ್ನು ಅದು ಕಾಣದೆ ಹೋಗಿರುವದೆಂಬುದನ್ನು ಒಪ್ಪದೆ ಇದ್ದರೆ ಭ್ರಾಂತಿಬಾಧೆಗಳನ್ನು ಉಪಪಾದಿಸುವದು ಆಗಲಾರದು" (ಶ್ರೀ. ಪು. ೯೫) ಎಂದು ಬರೆದಿರುವ ಕಡೆಯಲ್ಲಿಯೂ ಅಧ್ಯಾಸವೆಂಬ ಭ್ರಾಂತಿಯೊಂದುಂಟೆ?- ಎಂಬುದನ್ನು ಚರ್ಚಿಸಲಿಲ್ಲ. ಈ ಎಲ್ಲಾ ಕಾರಣಗಳಿಂದ ಶ್ರೀಭಾಷ್ಯಕಾರರ ಕಾಲದಲ್ಲಿ ಅದ್ವೈತಿಗಳು ಅಧ್ಯಾಸಭಾಷ್ಯಕ್ಕೆ ಅಷ್ಟೇನೂ ಬೆಲೆಯನ್ನು ಕೊಟ್ಟು ಚರ್ಚಿಸುತ್ತಿರಲಿಲ್ಲವೆಂದೇ ಕಲ್ಪಿಸಬೇಕಾಗಿರುತ್ತದೆ.

## ಆನಂದತೀರ್ಥರ ಭಾಷ್ಯ

**ಪ್ರಶ್ನೆ :-** ಆನಂದತೀರ್ಥ (ಶ್ರೀಮಧ್ವಾಚಾರ್ಯ)ರು ಅಧ್ಯಾಸವಿಷಯಕ್ಕೆ ಏನು ಹೇಳುತ್ತಾರೆ?

**ಉತ್ತರ :-** ಮಧ್ವಾಚಾರ್ಯರೂ ರಾಮಾನುಜಾಚಾರ್ಯರಂತೆಯೇ ಬ್ರಹ್ಮಸೂತ್ರಕ್ಕೆ ಭಾಷ್ಯ, ಅನುವ್ಯಾಖ್ಯಾನ- ಎಂದು ಬೇರೆಬೇರೆಯ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರು ಬರೆದಿರುವ ವ್ಯಾಖ್ಯಾನವು ಬಹಳ ಸಂಕ್ಷೇಪವಾಗಿರುವದರಿಂದ ಜಯತೀರ್ಥರು ಅನುವ್ಯಾಖ್ಯಾನದ ಮೇಲೆ ಬರೆದಿರುವ **' ನ್ಯಾಯಸುಧಾ'** ವ್ಯಾಖ್ಯಾನದ ಸಹಾಯದಿಂದಲೇ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿದೆ.

ಮಧ್ವಾಚಾರ್ಯರು :

**ಅಜ್ಞಾನಾಂ ಜ್ಞಾನದೋ ವಿಷ್ಣುರ್ಜ್ಞಾನಿನಾಂ ಮೋಕ್ಷದಶ್ಚ ಸಃ ।**
**ಆನನ್ದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥ ೧೫ ॥**
**ಇತ್ಯುಕ್ತೇರ್ಬನ್ಧಮಿಥ್ಯಾತ್ವಂ ನೈವ ಮುಕ್ತಿರಪೇಕ್ಷತೇ ।**
**ಮಿಥ್ಯಾತ್ವಮಪಿ ಬನ್ಧಸ್ಯ ನ ಪ್ರತ್ಯಕ್ಷವಿರೋಧತಃ ।**
**ಮಿಥ್ಯಾತ್ವಂ ಯದಿ ದುಃಖಾದೇಸ್ತದ್ವಾಕ್ಯಸ್ಯಾಗ್ರತೋ ಭವೇತ್ ॥೧೬॥**

೧೫-೧೬. 'ಅಜ್ಞರಿಗೆ ಜ್ಞಾನವನ್ನು ಕೊಡುವಾತನು ವಿಷ್ಣು ; ಜ್ಞಾನಿಗಳಿಗೆ ಮೋಕ್ಷವನ್ನು ಕೊಡುವಾತನು ಅವನು; ಮುಕ್ತರಿಗೆ ಆನಂದವನ್ನು ಕೊಡುವಾತನೂ ಅವನು' ಎಂದು ವಚನವಿರುವದರಿಂದ ಮುಕ್ತಿಯು ಬಂಧಮಿಥ್ಯಾತ್ವವನ್ನು ಬಯಸುವದಿಲ್ಲ. ಪ್ರತ್ಯಕ್ಷವಾಗಿರುವದರಿಂದ ಬಂಧವು ಮಿಥ್ಯೆಯೆಂಬುದೂ ಇಲ್ಲ. ದುಃಖಾದಿಗಳು ಮಿಥ್ಯೆ ಎಂದಾದರೆ ಹಾಗೆಂದು ಹೇಳುವ ವಾಕ್ಯಕ್ಕೆ ಮೊದಲೇ ಮಿಥ್ಯಾತ್ವವು ಬರುವದು (ಅನು. ಪು. ೪೧)[1] - ಎಂದು ಅವರು ಬರೆದಿರುತ್ತಾರೆ.

ಈ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆಯುವ ಮುಂಚೆ **ನ್ಯಾಯಸುಧಾಕಾರರು** 'ಪರಮಾತ್ಮನ ಅನುಗ್ರಹದಿಂದಲೇ ಮುಕ್ತಿಯಾದೀತೇ ಹೊರತು ಜ್ಞಾನಸ್ವಭಾವದಿಂದಲೇ ಮುಕ್ತಿಯಾಗಲಾರದು' ಎಂಬರ್ಥದ ಮಧ್ವಾಚಾರ್ಯರ ಅಭಿಪ್ರಾಯವನ್ನು ಸಂಕ್ಷೇಪದಿಂದ ವಿವರಿಸಿರುತ್ತಾರೆ. ಅದರ ಸಾರವಿಷ್ಟು : ಸರ್ವಕ್ರಿಯೆಗಳೂ ಈಶ್ವರನ ಅಧೀನ. ಸಂಸಾರಕ್ಕೆ ಅಜ್ಞಾನವೇ ಅಲ್ಲದೆ ಪರಮೇಶ್ವರನ ಇಚ್ಛೆಯೂ ಕಾರಣ. ಅನಾದಿಯಾದ ಬಂಧವೂ ಈಶ್ವರಾಧೀನವೆಂಬುದು ಯುಕ್ತಿವಿರುದ್ಧವಲ್ಲ. ಜೀವರ ಜ್ಞಾನಾನಂದಾದಿಸ್ವರೂಪಕ್ಕೆ ಯಾವದೋ ಮುಚ್ಚು ಇರಬೇಕಷ್ಟೆ? ; ಅದೇ ಕಾಮಕರ್ಮಾದಿಗಳಿಗಿಂತ ವ್ಯತಿರಿಕ್ತವಾದ **ಅವಿದ್ಯೆ** (ಅಥವಾ ಮಾಯೆ, ಪ್ರಕೃತಿ). ಸತ್ತ್ವಾದಿಗುಣಮಯವಾದ, ವಿದ್ಯೆಗೆ ವಿರೋಧಿಯಾಗಿರುವದರಿಂದ ಅವಿದ್ಯೆಯೆನಿಸಿರುವ ಪ್ರಕೃತಿಯಿಂಧಲೂ ಅಚಿಂತ್ಯಾದ್ಭುತವಾದ ತನ್ನ ಶಕ್ತಿಯಿಂದಲೂ **ಈಶ್ವರನೇ ಜೀವನ ಸ್ವಪ್ರಕಾಶವಾಗಿರುವ ಚೈತನ್ಯವನ್ನು ಕೂಡ ಮುಚ್ಚಿರುತ್ತಾನೆ; ಆತನೇ ಪ್ರಕೃತಿಯ ಪರಿಣಾಮವಾದ ಮಹದಹಂಕಾರಾದಿಗಳನ್ನು ಜೀವನಿಗೆ ಸೇರಿಸಿ ಕರ್ತೃತ್ವ ಭೋಕ್ತೃತ್ವಸ್ವಾತಂತ್ರ್ಯ ಕಾರಕಫಲಸ್ವಾಮ್ಯ -ಇವುಗಳು ಇಲ್ಲದಿದ್ದರೂ ಇರುವಂತೆ ತೋರಿಸಿ ರಾಗಾದಿಗಳ ಮೂಲಕ ದುಃಖವನ್ನುಂಟುಮಾಡಿಸುತ್ತಾನೆ; ಹೀಗೆ ಬಂಧವು ಈಶ್ವರಾಧೀನವಾಗಿರುವದರಿಂದ ಸ್ವತಂತ್ರನಾದ ಆತನೇ ಮೋಚಕನು.** ಆತನು ಪ್ರಸನ್ನನಾದರೆ ತನ್ನ ಈ ಮಾಯೆಯನ್ನು ಪರಿಹರಿಸುತ್ತಾನೆ- ಎಂಬುದು ಅವರ ಸಿದ್ಧಾಂತದ ಸಾರವು. (ಅನು. ಪು. ೪೦).

**(ಇಲ್ಲಿ ಪ್ರಕೃತಿಯೇ ಅವಿದ್ಯೆ ಎಂದು ಶಾಂಕರವ್ಯಾಖ್ಯಾನಗಳಂತೆಯೇ ಅಂಗೀಕರಿಸಿದೆ; ಆದರೆ ಅದು ಈಶ್ವರನ ಇಚ್ಛೆಯಿಂದಲೇ ಜೀವನಿಗೆ ಮುಸುಕಿಕೊಂಡಿದೆ ಎಂದು ಹೇಳಿರುವದೊಂದು ವಿಶೇಷ)**

1. ಇಲ್ಲಿ ಕೊಟ್ಟಿರುವವು ಉಡುಪಿಯ ಶ್ರೀಮಧ್ವಮುನಿಸೇವಾ ಸಂಘದವರು ಮುದ್ರಿಸಿರುವ ಅನುವ್ಯಾಖ್ಯಾನದ ಪುಟಗಳು. ಅರ್ಥವನ್ನು ಸರಳವಾದ ಭಾಷೆಯಲ್ಲಿ ನಾವೇ ಬರೆದಿರುತ್ತೇವೆ.

ಮೇಲೆ ನಾವು ಬರೆದಿರುವ ಮಧ್ವಾಚಾರ್ಯರ ಗ್ರಂಥಕ್ಕೆ **ವಿವರಣೆಯ** ಸಾರವೇನೆಂದರೆ :-

ತಮ್ಮ ಮತದ ಪ್ರಕಾರ ಸೂತ್ರಕ್ಕೆ ವ್ಯಾಖ್ಯಾನಮಾಡಿ ಈಗ ಪರವಾದಿಗಳ ಭಾಷ್ಯಕ್ಕೆ ದೂಷಣೆಯನ್ನು ಹೇಳುತ್ತಾರೆ : (೧) ಮಾಯಾವಾದಿಯು ಕರ್ತೃತ್ವಭೋಕ್ತೃತ್ವ ದೋಷಸಂಸರ್ಗರೂಪವಾದ, ಮತ್ತು ಕ್ರಿಯಾಕಾರಕಫಲರೂಪವಾದ ಬಂಧವು ಆತ್ಮನಲ್ಲಿ ಅಧ್ಯಾರೋಪಿತವಾಗಿರುವದರಿಂದ ಮಿಥ್ಯೆ ಎಂದು ತನ್ನ ಭಾಷ್ಯದ ಆದಿಯಲ್ಲಿ ಬರೆದುಕೊಂಡಿರುತ್ತಾರೆ. ಅದು ಸರಿಯಲ್ಲ; ಏಕೆಂದರೆ ಸೂತ್ರದಲ್ಲಿ ಹಾಗೆಂದು ಹೇಳಿಲ್ಲ (ಅನು. ಪು. ೪೫), (೨) ವ್ಯಾಖ್ಯಾನಕಾರರು ಈ ಭಾಷ್ಯಕ್ಕೆ ಪ್ರಯೋಜನೋಪಪಾದಕತ್ವ, ವಿಷಯೋಪಪಾದಕತ್ವ, ಉಪೋದ್ಘಾತರೂಪತ್ವ -ಎಂಬ ಮೂರು ಸಂಗತಿಗಳನ್ನು ಹೇಳಿದ್ದಾರೆ. ಇದು ಸರಿಯಲ್ಲ; ಏಕೆಂದರೆ ಶ್ರೀಹರಿಯೇ ಬಂಧನಿವರ್ತಕನು (ಅನು. ೪೬-೪೭), ಬಂಧವು ಮಿಥ್ಯೆ ಎಂಬುದು ಪ್ರತ್ಯಕ್ಷವಿರುದ್ಧವೂ ಆಗಿದೆ. (ಅನು. ೪೯).

**ಅನಙ್ಗೀಕುರ್ವತಾಂ ವಿಶ್ವಸತ್ಯತಾಂ ತನ್ನ ವಾದಿತಾ**
**ತಸ್ಮಾದ್ ವ್ಯವಹೃತಿಃ ಸರ್ವಾ ಸತ್ಯೇತ್ಯೇವ ವ್ಯವಸ್ಥಿತಾ ।**
**ವ್ಯಾವಹಾರಿಕಮೇತಸ್ಮಾತ್ ಸತ್ಯಮಿತ್ಯೇವ ಚಾಗತಮ್ ॥೨೧॥**

''ಪ್ರಪಂಚವು ಸತ್ಯವೆಂದು ಅಂಗೀಕರಿಸದಿದ್ದರೆ ವಾದದಲ್ಲಿ ಪ್ರವೇಶವೇ ಇಲ್ಲವಾಗುವದು. ಆದ್ದರಿಂದ ವ್ಯವಹಾರವೆಲ್ಲವೂ ಸತ್ಯವೆಂದೇ ಏರ್ಪಡುತ್ತದೆ; ಪ್ರಮಾಣಾದಿವ್ಯವಹಾರವು ಸತ್ಯವಾಗಿರುವದರಿಂದ ವ್ಯಾವಹಾರಿಕವಾದದ್ದೆಲ್ಲವೂ ಸತ್ಯವೆಂದೇ ಆಯಿತು (ಅನು. ೫೫)''- ಎಂದು ಮುಂತಾಗಿ **ಮಧ್ವಾಚಾರ್ಯರು ತರ್ಕಮಾತ್ರದಿಂದ ಮಿಥ್ಯಾತ್ವವನ್ನು ಖಂಡಿಸಿರುತ್ತಾರೆಯೇ ಹೊರತು ಪ್ರಮಾತೃತ್ವವು ಅಧ್ಯಸ್ತವೆಂದು ಶಂಕರಾಚಾರ್ಯರು ಅನುಭವಾನುಸಾರವಾಗಿ ತೋರಿಸಿರುವದನ್ನು ಪರಾಮರ್ಶಿಸಲೂ ಇಲ್ಲ; ಖಂಡಿಸಲೂ ಇಲ್ಲ.** ಇದನ್ನು ನೋಡಿದರೆ ಆ ಆಚಾರ್ಯರ ಕಾಲಕ್ಕೆ ತರ್ಕಬಲದಿಂದ ಜಗನ್ಮಿಥ್ಯಾತ್ವವನ್ನು ಸಾಧಿಸುವ ಅದ್ವೈತವ್ಯಾಖ್ಯಾನಕಾರರ ಮತವೇ ಪ್ರಬಲವಾಗಿತ್ತೆಂದು ಹೇಳಬೇಕಾಗಿದೆ. ಅವರು ಬಂಧಮಿಥ್ಯಾತ್ವವು ಶ್ರುತಿಸೂತ್ರಪ್ರತ್ಯಕ್ಷಗಳಿಗೆ ವಿರುದ್ಧವೆಂಬುದನ್ನು ತೋರಿಸುವದಕ್ಕೆ ಹೊರಟಿದ್ದಾರೆಯೇ ಹೊರತು **ಪ್ರಮಾಣಪ್ರಮೇಯವ್ಯವಹಾರವು ಅಧ್ಯಾಸ ಪೂರ್ವಕ ವೆಂದೂ ಸರ್ವವ್ಯವಹಾರಕ್ಕೂ ಮೂಲವಾಗಿರುವ ಅಧ್ಯಾಸವನ್ನು ಬಾಧಿಸುವದೇ ಶ್ರುತಿಗಳ ಕೃತ್ಯವೆಂದೂ ಶಂಕರಭಗವತ್ಪಾದರು ಅನುಭವಾನುಸಾರವಾಗಿ ಹೇಳಿದ್ದನ್ನು ವಿಮರ್ಶೆಗೆ ತೆಗೆದುಕೊಳ್ಳಲೇ** ಇಲ್ಲವೆಂದು ಹೇಳಬೇಕಾಗಿದೆ.

**ಪ್ರಶ್ನೆ** :- ಸರ್ವವ್ಯವಹಾರವೂ ಮಿಥ್ಯೆಯಾದರೆ ಶ್ರೌತವ್ಯವಹಾರವೂ ಮಿಥ್ಯೆಯೆಂದಾಗುತ್ತದೆ; ಮಿಥ್ಯೆಯಾದ ಶ್ರುತಿಯು ಯಾವದನ್ನು ತಾನೆ ಸಿದ್ಧಪಡಿಸೀತು? ಎಂದು ಅವರು ಮಾಡಿರುವ ಆಕ್ಷೇಪಕ್ಕೆ ಪರಿಹಾರವೇನು? ಪ್ರಮಾಣಗಳ ಸಹಾಯವಿಲ್ಲದೆ ಅದ್ವೈತಿಗಳು ಅಧ್ಯಾಸವನ್ನು ಹೇಗೆ ಸಿದ್ಧಪಡಿಸುವರು?

**ಉತ್ತರ** :- ಸರ್ವವೂ ಮಿಥ್ಯೆ ಎಂದಾದರೆ ' ಸರ್ವವೂ ಮಿಥ್ಯೆ' ಎಂಬ ಯುಕ್ತಿಯೂ ಮಿಥ್ಯೆ ಎಂದಾಗುತ್ತದೆ; ಆಗ ಪ್ರಪಂಚವು ಸತ್ಯವೇ ಆಗುತ್ತದೆ- ಎಂಬ ಯುಕ್ತಿಯನ್ನು ಮೊದಲು ತಂದವರು ಮಧ್ವಾಚಾರ್ಯರಲ್ಲ. ಅವರಿಗಿಂತ ಮುಂಚೆ **ರಾಮಾನುಜಾಚಾರ್ಯರೂ** ಅವರ ಪರಮಗುರುಗಳಾದ **ಯಾಮುನಾಚಾರ್ಯರೂ** ಅವರಿಗಿಂತಲೂ ಮೊದಲೇ **ಶಾಂಡಿಲ್ಯ ಸೂತ್ರಕ್ಕೆ ಭಾಷ್ಯವನ್ನು ಬರೆದ ಸ್ವಪ್ನೇಶ್ವರರೂ** ಈ ಆಕ್ಷೇಪವನ್ನು ತಂದಿದ್ದರು. ಇದು ತರ್ಕಮಾತ್ರವಾಗಿರುವದರಿಂದ ಶ್ರುತಿಜನ್ಯಜ್ಞಾನದಿಂದ ಸರ್ವವೂ ಮಿಥ್ಯೆ ಎಂಬ ಅನುಭವವು ಬರುವದಾದರೆ ಆ ಅನುಭವವುಂಟಾದವರಿಗೆ ಶುಷ್ಕತರ್ಕದಿಂದ ಯಾವ ಹಾನಿಯೂ ಇಲ್ಲವೆಂಬುದು ಸ್ಪಷ್ಟ. ಆದರೆ ಈ ತರ್ಕವು ಸರಿಯೆ? - ಎಂಬುದನ್ನೇ ಮೊದಲು ವಿಚಾರಮಾಡೋಣ :

(೧) ಸರ್ವವೂ ಮಿಥ್ಯೆಯಾದರೆ ಹಾಗೆಂಬ ಉಕ್ತಿಯೂ ಮಿಥ್ಯೆಯಾಗುವದು- ಎಂಬುದು ನ್ಯಾಯವೇ. ಸರ್ವವೂ ಮಿಥ್ಯೆಯಾದಮೇಲೆ ಉಕ್ತಿಯು ಮಿಥ್ಯೆಯಾದರೇನು ಕೊರತೆ? ಸರ್ವವೂ ಮಿಥ್ಯೆ ಎಂದೇ ಆಯಿತಲ್ಲವೆ? ಆಗ ಶ್ರುತಿಯೂ ಮಿಥ್ಯೆಯಾಗಲಿ, ಅದು ಸಿದ್ಧಪಡಿಸಬೇಕಾಗಿ ಉಳಿದಿರುವದೇನೂ ಇಲ್ಲವಷ್ಟೆ? ಈ ಯುಕ್ತಿಯನ್ನು ಸೂತ್ರಭಾಷ್ಯದಲ್ಲಿ (೪-೧-೩, ಭಾ. ಭಾ. ೫೧೦) ಹೇಳಿದೆ. ಪ್ರಮಾಣಗಳೆಲ್ಲವೂ ವ್ಯವಹಾರದೃಷ್ಟಿಯಿಂದ ಸತ್ಯವೆಂದೇ ಎಲ್ಲರೂ ಒಪ್ಪಿರುತ್ತಾರೆ. ಆಗಲೇ ಶ್ರುತಿಯು ಪ್ರಮಾಣವೆನ್ನುವದು.

(೨) ಪ್ರಮಾಣವ್ಯವಹಾರವು ಮಿಥ್ಯೆಯೊ, ಅಲ್ಲವೊ?- ಎಂಬುದನ್ನು ಪ್ರಮಾಣಗಳಿಂದಲೇ ಯಾರೂ ನಿಶ್ಚಯಿಸಲಾರರು. ಏಕೆಂದರೆ ಆಗಲೂ ಪ್ರಮಾಣವನ್ನುಪಯೋಗಿಸಿದರೆ ಆತ್ಮಾಶ್ರಯದೋಷವು ಬರುತ್ತದೆ. 'ಪ್ರಮಾಣಗಳು ಸತ್ಯವೆಂದು ಒಪ್ಪಿಯೇ ನಾವು ವಿಚಾರಮಾಡುತ್ತೇವೆ' ಎನ್ನುವವರು ಹಾಗೆಂದು ಒಪ್ಪದ ಅದ್ವೈತವೇದಾಂತಿಗಳ ಮತ್ತು ಬೌದ್ಧರ ಸಿದ್ಧಾಂತಗಳನ್ನು ಖಂಡಿಸುವದಕ್ಕೆ ಆಗುವಂತೆಯೇ ಇಲ್ಲ; ಏಕೆಂದರೆ ಪ್ರಮಾಣಗಳ ಸತ್ಯತ್ವವೇ ಆಗ ವಾದಗ್ರಸ್ತವಾಗಿರುತ್ತದೆ. ಅವರಿಬ್ಬರನ್ನೂ ನಾಸ್ತಿಕರೆಂದು ತಳ್ಳಿಹಾಕಿದರೂ ಆಸ್ತಿಕರಾದ ತಮ್ಮ ಶಿಷ್ಯರಿಗೆ ಅವರ ಮತದ ಅಸಾರತೆಯನ್ನು ತೋರಿಸುವದಕ್ಕೆ ಕೂಡ ಪ್ರಮಾಣಸತ್ಯತ್ವವನ್ನು ಅಂಗೀಕರಿಸುವಹಾಗಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು.

**ಪ್ರಶ್ನೆ** :- ದ್ವೈತವಿಶಿಷ್ಟಾದ್ವೈತಮತಗಳು ಆಯಾ ಸಿದ್ಧಾಂತದವರಿಗೆ ಪ್ರಯೋಜನಕಾರಿಗಳಾಗಿಲ್ಲವೆ? ಹೀಗಿರುವಲ್ಲಿ ಶಾಂಕರಮತವೇ ಸರಿ ಎಂಬ ಹಟವೇಕೆ?

**ಉತ್ತರ** :- ಈ ಪ್ರಶ್ನೆಯು ಪ್ರಕೃತಕ್ಕೆ ಸಂಬಂಧಪಟ್ಟದ್ದಲ್ಲ. ಅಧ್ಯಾಸಭಾಷ್ಯದ ತಾತ್ಪಾರ್ಯವೇನು? - ಎಂಬುದನ್ನು ನಿರ್ಣಯಿಸುವದಕ್ಕೇ ಈಗ ನಾವು ಹೊರಟಿರುತ್ತೇವೆ. ಕರ್ತೃತ್ವಭೋಕ್ತೃತ್ವರೂಪವಾದ ಅನರ್ಥಕ್ಕೆ ಹೊಣೆಯಾಗಿರುವ ಅವಿದ್ಯೆಯೆಂದರೆ ಅಧ್ಯಾಸವೇ - ಎಂಬುದರಲ್ಲಿಯೇ ಆ ಭಾಷ್ಯಕ್ಕೆ ತಾತ್ಪರ್ಯವು ಎಂಬುದನ್ನು ನಾವು ನಿರ್ಣಯಿಸಿರುತ್ತೇವೆ.

**ಪ್ರಶ್ನೆ** :- ಕರ್ಮೋಪಾಸನೆಗಳನ್ನು ಹೇಳುವ ಶ್ರುತಿಗಳೆಲ್ಲವೂ ಅವಿದ್ಯಾವಂತರ ವಿಷಯವೆಂದಾಗುವದರಿಂದ ಅದ್ವೈತಿಗಳ ದೃಷ್ಟಿಯಿಂದ ಆ ಶ್ರುತಿಗಳು ವ್ಯರ್ಥವೆಂದಾಗುವದಿಲ್ಲವೆ? ಪ್ರಮಾಣವ್ಯವಹಾರವು ಮಿಥ್ಯೆ ಎಂದದ್ದರಿಂದ ಭೌತಿಕ ವಿಜ್ಞಾನವು ಮಾಡಿಕೊಡುತ್ತಿರುವ ತಿಳಿವಳಿಕೆಯೂ ವ್ಯರ್ಥವೆಂದಂತೆ ಆಗುವದಿಲ್ಲವೆ?

**ಉತ್ತರ** :- ಇಲ್ಲ, ಹುಟ್ಟುವಾಗ ಯಾರೂ ಅದ್ವೈತಿಗಳಾಗಿ ಹುಟ್ಟುವದಿಲ್ಲ. ನಾನು, ನನ್ನದು- ಎಂಬ ವ್ಯವಹಾರವು ನೈಸರ್ಗಿಕವಾಗಿರುತ್ತದೆ ಎಂಬುದನ್ನು ಆಚಾರ್ಯರೂ ಅಧ್ಯಾಸಭಾಷ್ಯದಲ್ಲಿ ಒಪ್ಪಿರುತ್ತಾರೆ. ಈ ವ್ಯವಹಾರದೃಷ್ಟಿಯಿಂದ ಕರ್ಮೋಪಾಸನೆಗಳ ವಾಕ್ಯಗಳ ಅರ್ಥವನ್ನು ಮಾಡಿಕೊಂಡು ಅನುಷ್ಠಾನವನ್ನು ಮಾಡುವವರಿಗೆ ಅದಕ್ಕೆ ತಕ್ಕ ಫಲವೂ ಅವಶ್ಯವಾಗಿ ದೊರೆಯುತ್ತದೆ. ಹೀಗೆಯೇ ಭೌತಿಕವಿಜ್ಞಾನಶಾಸ್ತ್ರದಿಂದಾದ ತಿಳಿವಳಿಕೆಯೂ ಐಹಿಕದೃಷ್ಟಿಯಿಂದ ಫಲಕಾರಿಯಾಗುತ್ತದೆ. ಶಾಸ್ತ್ರವನ್ನು ತಿಳಿದವರು ವಿದ್ಯಾವಂತರೆಂದೂ ತಿಳಿಯದವರು ಅವಿದ್ಯಾವಂತರೆಂದೂ ಭಾವಿಸುವ ವಿಭಾಗವು ವ್ಯವಹಾರದಲ್ಲಿ ಇದ್ದೇ ಇದೆ. ಲೋಕದಲ್ಲಿ ಶಾಸ್ತ್ರೀಯವಾದ ತಿಳಿವಳಿಕೆಯನ್ನು ಸಂಪಾದಿಸಿಕೊಂಡವರನ್ನು ವಿದ್ವಾಂಸರೆನ್ನುವರೇ ಹೊರತು ಅವಿದ್ಯಾವಂತರೆನ್ನುವದಿಲ್ಲ. ಆದರೆ ಈ ಶಾಸ್ತ್ರಗಳ ತಿಳವಳಿಕೆಯು ವೇದಾಂತದಲ್ಲಿ ಹೇಳಿರುವ ಅದ್ವಿತೀಯಬ್ರಹ್ಮಾತ್ಮವಿದ್ಯೆಯಲ್ಲ- ಎಂಬ ಕಾರಣದಿಂದ ಆ ತಿಳಿವಳಿಕೆಯಿಲ್ಲದವರನ್ನು 'ಅವಿದ್ಯಾವಂತರು' ಎಂದು ಪಾರಿಭಾಷಿಕವಾಗಿ ಕರೆದಮಾತ್ರದಿಂದ ಯಾವ ಶಾಸ್ತ್ರೀಯಜ್ಞಾನವನ್ನೂ ಅವಹೇಳನೆಮಾಡಿದಂತಾಗುವದಿಲ್ಲ; ಯಾವ ಶಾಸ್ತ್ರಜ್ಞಾನವೂ ವ್ಯರ್ಥವೆಂದಾಗುವದಿಲ್ಲ.

## ೫. ಉಪಸಂಹಾರ

ಈವರೆಗೆ ನಾವು ಮಾಡಿರುವ ವಿಮರ್ಶೆಯಿಂದ ಸರ್ವವೇದಾಂತಗಳ ಹೆಗ್ಗುರಿ ಏನೆಂದು 'ದುಕೊಳ್ಳುವದಕ್ಕೆ ಅಧ್ಯಾಸಭಾಷ್ಯವು ಅತ್ಯಮೂಲ್ಯವಾದ ಸಾಧನವೆಂಬುದು ನಿರ್ಣಯವಾಗುತ್ತದೆ.

**ವ್ಯಾಖ್ಯಾನಕಾರರು ಭಾಷ್ಯದ ಅಭಿಪ್ರಾಯವನ್ನೇ ವಿವರಿಸುವದಕ್ಕೆ 'ಸರ್ವಪ್ರಮಾಣಪ್ರಮೇಯವ್ಯವಹಾರಗಳೂ ಸರ್ವಶಾಸ್ತ್ರಗಳೂ**

**ಅಧ್ಯಾಸರೂಪವಾದ ಅವಿದ್ಯೆಯ ಕ್ಷೇತ್ರದಲ್ಲಿಯೇ ಪ್ರವೃತ್ತವಾಗಿವೆ' ಎಂಬ ಅತ್ಯಮೋಘಸಿದ್ಧಾಂತವನ್ನು ಅಸಡ್ಡೆಮಾಡಿ ಅಧ್ಯಾಸವೂ ಒಂದು ಕಾರ್ಯವೆಂದೂ ಅದಕ್ಕೆ ಕಾರಣವಾದ ಅವಿದ್ಯೆಯು ಬೇರೊಂದು ಇದೆಯೆಂದೂ ಭಾಷ್ಯಯುಕ್ತ್ಯನುಭವಗಳಿಗೆ ವಿರುದ್ಧವಾಗಿ ಕಲ್ಪಿಸಿರುತ್ತಾರೆಂಬುದನ್ನು ನಾವು ಇಲ್ಲಿ ವಿಚಾರಪೂರ್ವಕವಾಗಿ ತೋರಿಸಿಕೊಟ್ಟಿರುತ್ತೇವೆ. ಶಂಕರಸಿದ್ಧಾಂತವನ್ನು ಖಂಡಿಸಿರುವವರೆಲ್ಲರೂ ಆಚಾರ್ಯರ ಅಮೋಘಸಿದ್ಧಾಂತವನ್ನು ಪರಿಶೀಲನೆಗೆ ಇಟ್ಟುಕೊಳ್ಳದೆ ಪ್ರಮಾಣ, ತರ್ಕ, ಶ್ರುತಿ- ಈ ಮೂರನ್ನೇ ವಿಚಾರಕ್ಕೆ ಆಧಾರವಾಗಿಟ್ಟುಕೊಂಡದ್ದರಿಂದ ಅಧ್ಯಾಸಭಾಷ್ಯದ ಮರ್ಮವು ಅವರುಗಳಿಗೆ ಸಿಕ್ಕದೆ ಹೋಗಿರುತ್ತದೆ ಎಂದೂ ಸಂಕ್ಷೇಪವಾಗಿ ಹೇಳಿರುತ್ತೇವೆ.**

ಪ್ರಕೃತಚರ್ಚೆಗೆ ಸಾಧಕವಾಗಿರುವ ಕೆಲವು ಪಾರಿಭಾಷಿಕಶಬ್ದಗಳ ಅನುಕ್ರಮಣಿಕೆಯೊಂದನ್ನು ಇಲ್ಲಿ ಪರಿಶಿಷ್ಟವಾಗಿ ಕೊಡುವೆವು. ಭಾಷ್ಯದಲ್ಲಿ ಅವಿರುವ ಗ್ರಂಥಭಾಗವನ್ನು ಮನನಮಾಡುವದರಿಂದ ಎಲ್ಲಾ ಶಂಕೆಗಳೂ ದೂರವಾಗುವವು.

ನಿತ್ಯಶುದ್ಧಬುದ್ಧಮುಕ್ತನಾದ ತಮ್ಮ ಆತ್ಮನಲ್ಲಿ ನಿಜವಾಗಿಲ್ಲದ ಧರ್ಮಗಳನ್ನು ಅಧ್ಯಾರೋಪಿಸಿಕೊಂಡು ಸಂಕಟಪಡುತ್ತಿರುವ ಮುಮುಕ್ಷುಗಳಿಗೆ ಸರ್ವಾನರ್ಥಹೇತುವಾಗಿರುವ ಅಧ್ಯಾಸವೆಂಬ ಮೂಲಾವಿದ್ಯೆಯನ್ನು ಕಳೆದುಕೊಳ್ಳುವದಕ್ಕೆ ಈ ವಿಮರ್ಶನ ಗ್ರಂಥದ ಪಠನೆಯು ಒಂದಿಷ್ಟಾದರೂ ಸಾಧಕವಾದರೆ ನಾವು ಧನ್ಯರು.

# ಶಬ್ದಾನುಕ್ರಮಣಿಕೆ

ಇಲ್ಲಿರುವ ಸಂಖ್ಯೆಗಳು ಇದೇ ಕಾರ್ಯಾಲಯದಿಂದ ಪ್ರಕಟಿತವಾಗಿರುವ ಸೂತ್ರಭಾಷ್ಯದವು. ಮೊದಲನೆಯ ಸಂಖ್ಯೆಯು ಸಂಪುಟದ್ದು. ಎರಡನೆಯದು ಸಂಸ್ಕೃತ ಭಾಷ್ಯಭಾಗದ್ದು.


**ಅಧಿಷ್ಠಾನ-** ಆಶ್ರಯ, ಶರೀರ, ೧-೫, ೨-೭೯. ಯಾವದರಲ್ಲಿ ಆರೋಪಿಸುತ್ತಾರೋ ಆ ಪದಾರ್ಥ-ಎಂಬರ್ಥದಲ್ಲಿ ವ್ಯಾಖ್ಯಾನಕಾರರು ಈ ಶಬ್ದವನ್ನು ಬಳಸಿರುತ್ತಾರೆ. ಉದಾಹರಣೆಗೆ ಶುಕ್ತಿಯು ಅಧಿಷ್ಠಾನ; ರಜತವು ಆರೋಪಿತ, ಅಧ್ಯಸ್ತ.

**ಅಧ್ಯಾಸ-** ಒಂದರಲ್ಲೊಂದನ್ನು ಹುಟ್ಟುಗಟ್ಟುವ ತಪ್ಪುತಿಳಿವಳಿಕೆ. ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸರೂಪವಾದ ಅವಿದ್ಯೆ ೧-೫, ವ್ಯಾಖ್ಯಾನಕಾರರು ಅಧ್ಯಸ್ತವಾದ ಪದಾರ್ಥ ಎಂಬರ್ಥದಲ್ಲಿಯೂ ಬಳಸಿರುತ್ತಾರೆ. ಉದಾಹರಣೆಗೆ ಶುಕ್ತಿರಜತವನ್ನೂ ಅವರು 'ಅಧ್ಯಾಸ' ವೆಂದು ಕರೆಯುತ್ತಾರೆ. ಇದಕ್ಕೆ ' ಅರ್ಥಾಧ್ಯಾಸ' ವೆಂಬ ಹೆಸರನ್ನು ಅವರು ಕೊಟ್ಟಿರುತ್ತಾರೆ.

**ಅನಿರ್ವಚನೀಯ-** ಬ್ರಹ್ಮವೆಂದಾಗಲಿ ಅದಕ್ಕಿಂತ ಬೇರೆಯೆಂದಾಗಲಿ ಗೊತ್ತುಪಡಿಸಿ ಹೇಳುವದಕ್ಕೆ ಬಾರದ ಅವ್ಯಾಕೃತನಾಮರೂಪಗಳು ; ಇವು ಅವಿದ್ಯಾಕಲ್ಪಿತ, ' ಮಾಯೆ' ಎಂದು ಇವಕ್ಕೆ ಹೆಸರು. ೧-೬೯, ೩೩೯, ೪೪೦. ಸತ್ತೂ ಅಲ್ಲದ, ಅಸತ್ತೂ ಅಲ್ಲದ, ಸದಸತ್ತೂ ಅಲ್ಲದ ಅವಿದ್ಯೆಯೂ (ಅವ್ಯಾಕೃತವೂ) ಬರಿಯ ತೋರಿಕೆಯ ಶುಕ್ತಿರಜತಗಳೂ 'ಅನಿರ್ವಚನೀಯ- ಎಂದು ವ್ಯಾಖ್ಯಾನಕಾರರ ಮತ.

**ಅನೃತ-** ಅಸತ್ಯ, ಮಿಥ್ಯೆ, ಹುಸಿಯಾದದ್ದು, ೧-೧, ೧-೨೨೩, ೪೩೩, ೪೩೫; ೪೩೬, ೪೩೭, ೪೩೮.

**ಅನ್ತಃಕರಣ-** ಮನಸ್ಸು, ಬುದ್ಧಿ, ವಿಜ್ಞಾನ, ಚಿತ್ತ- ಮುಂತಾದ ಹೆಸರುಗಳುಳ್ಳ ಒಳಗಿನ ಕರಣ. ಆತ್ಮನಿಗೂ ಅಂತಃಕರಣಕ್ಕೂ ಅನ್ಯೋನ್ಯಾಧ್ಯಾಸ ೧-೮; ೨-೧೪೦, ೧೪೨.

**ಅವಿದ್ಯಾ-** ತಪ್ಪುತಿಳಿವಳಿಕೆ, ಮಿಥ್ಯಾಪ್ರತ್ಯಯ., ಮಿಥ್ಯಾಜ್ಞಾನ, ಮಿಥ್ಯಾಬುದ್ಧಿ, ಭ್ರಾನ್ತಿ, ತಮಸ್ಸು, ಅನವಬೋಧ, ಅಪ್ರಬೋಧ- ಮುಂತಾದ ಹೆಸರುಗಳುಳ್ಳ ಆತ್ಮಾನಾತ್ಮರ ಪರಸ್ಪರಾಧ್ಯಾಸ, ೧-೪, ೫, ೬, ೭,೯,೧೮,೪೫, ೨೨೫, ೨೪೦, ೩೫೧; ೨-೨೮೨,೫೧೦. ಈ ಶಬ್ದವನ್ನು ಪ್ರಕೃತಿ, ಎಂಬರ್ಥದಲ್ಲಿಯೂ ವ್ಯಾಖ್ಯಾನಕಾರರು ಬಳಸಿದ್ದಾರೆ.

**ಅವಿದ್ಯಾಕಲ್ಪಿತ-** ಅವಿದ್ಯೆಯಿಂದ ತೋರುವ, ಪರಮಾರ್ಥವಲ್ಲದ. ಇವನ್ನೇ ಅವಿದ್ಯಾಕೃತ, ಅವಿದ್ಯಾತ್ಮಕ, ಅವಿದ್ಯಾಧ್ಯಸ್ತ, ಅವಿದ್ಯಾಧ್ಯಾರೋಪಿತ, ಅವಿದ್ಯಾನಿಮಿತ್ತ, ಅವಿದ್ಯಾಪ್ರತ್ಯುಪಸ್ಥಾಪಿತ- ಎಂದೂ ವರ್ಣಿಸಿದೆ. ೧-೪೭, ೧೦೪, ೧೬೨, ೧೭೫, ೧೮೫, ೧೯೫, ೨೦೧, ೨೬೯, ೩೩೯, ೩೫೨, ೩೮೬, ೩೮೮, ೪೨೩, ೪೪೦, ೪೫೬, ೪೬೯, ೪೭೧; ೨-೨೦, ೧೫೩, ೧೬೨, ೧೬೮, ೫೪೯, ಅವಿದ್ಯಾವಸ್ಥೆ, ಅವಿದ್ಯಾವಿಷಯ, ಅವಿದ್ಯೆಯಿರುವಾಗಿನ ಸ್ಥಿತಿ. ೧-೯೧, ೧೭೫, ೧೯೫, ೩೮೭ ; ೨-೧೫೧, ೧೫೪, ೧೫೫.

**ಅವ್ಯಕ್ತ-** ನಾಮರೂಪಗಳ ಬೀಜ, ಅವ್ಯಾಕೃತ, ೧, ೩೩೯, ೪೦೧, ೪೪೫. ಈ ಶಬ್ದವನ್ನು ಭಾಷ್ಯದಲ್ಲಿ ಅವಿದ್ಯೆ, ಬ್ರಹ್ಮ- ಎಂಬರ್ಥಗಳಲ್ಲಿ ಪ್ರಯೋಗಿಸಿದೆ. ೧-೩೪೦, ೨-೨೯೮. ಇದನ್ನೇ ಅಧ್ಯಾಸಕ್ಕೆ ಉಪಾದಾನಕಾರಣವಾದ ಅವಿದ್ಯೆ ಎಂದು ವ್ಯಾಖ್ಯಾನಕಾರರು ಕರೆಯುತ್ತಿರುವರು.

**ಅಹಂಪ್ರತ್ಯಯ, ಅಸ್ಮತ್ಪ್ರತ್ಯಯ-** ನಾನೆಂಬ ಭಾವನೆ. ಸಾಕ್ಷಿಯಲ್ಲಿ ಅಹಂಪ್ರತ್ಯಯಗಮ್ಯನಾದ ಆತ್ಮನನ್ನು ಅಜ್ಞರು ಅಧ್ಯಾಸಮಾಡುತ್ತಾರೆ. ೧-೩, ೮, ೪೯, ೫೪, ೫೯.

**ಆತ್ಮ -** ೧-೫, ೭, ೮, ೧೯, ೨೦, ೫೨, ೫೪, ೭೪, ೭೫, ೧೪೦ ; ೨-೨೬೭, ೫೧೦. ಈ ಶಬ್ದವನ್ನು ಅನ್ತಃಕರಣ, ಜೀವ, ದೇಹ- ಎಂಬರ್ಥದಲ್ಲಿಯೂ ಬಳಸುವುದುಂಟು.

**ಆತ್ಮೈಕತ್ವ -** ಆತ್ಮನು ಒಬ್ಬನೇ ಎಂಬುದು ೧-೯, ೨೬೯, ೪೦೭, ೪೩೪, ೪೩೮.

**ಕರ್ತೃತ್ವ ಭೋಕ್ತೃತ್ವಗಳು -** ೧-೯, ೨೦, ೨೪, ೧೦೪ ; ೨-೧೫೫.

**ಚಿದಾತ್ಮಕ -** ಚಿತ್ಸ್ವರೂಪನಾದ ಆತ್ಮ ೧-೧, ೧೬೦.

**ಪ್ರತ್ಯಕ್ಷಾದಿಗಳು -** ಪ್ರಮಾಣಗಳು, ೧-೫, ೬ ; ಅನುಭವ ೧-೯.

**ಪ್ರಮಾಣಪ್ರಮೇಯವ್ಯವಹಾರ -** ೧-೫, ೬, ೪೪೩, ೪೩೬, ೨-೬೪ ; ೫೧೦, ೫೮೫.

**ಮಾಯಾ -** (೧) ಹುಸಿತೋರಿಕೆ ೧-೧೧೫, ೩೯೮, ೪೨೪ ; ೨-೫೭, ೬೧ (೨) ಅವಿದ್ಯಾಕಲ್ಪಿತವಾದ ಅವ್ಯಾಕೃತ. ೧-೩೩೯ ; ೨-೯, ೧೫. ಇದನ್ನೇ ವ್ಯಾಖ್ಯಾನಕಾರರು ಅಧ್ಯಾಸಕ್ಕೆ ಉಪಾದಾನವಾದ ಅವಿದ್ಯೆ ಎನ್ನುವರು.

**ಮಿಥ್ಯಾಜ್ಞಾನ -** ತಪ್ಪು ತಿಳಿವು, ಮಿಥ್ಯಾ ಪ್ರತ್ಯಯ, ಮಿಥ್ಯಾಭಿಮಾನ, ಮಿಥ್ಯಾಬುದ್ಧಿ - ಎಂದೂ ಇದಕ್ಕೆ ಹೆಸರುಗಳು. ೧-೧, ೯, ೨೮, ೪೫, ೫೫, ೫೭, ೫೯, ೬೦, ೧೬೨, ೨೬೭, ೪೨೫, ೪೩೫, ೪೫೬. ಈ ಶಬ್ದಕ್ಕೆ ಪಂಚಪಾದಿಕೆಯಲ್ಲಿಯೂ ಅದರ ಉಪವ್ಯಾಖ್ಯಾನಗಳಲ್ಲಿಯೂ ಮಿಥ್ಯಾರೂಪವಾದ ಎಂದರೆ ಅನಿರ್ವಚನೀಯವಾದ, ಅಜ್ಞಾನ ಎಂದರೆ ಪ್ರಕೃತಿ - ಎಂದು ಅರ್ಥಮಾಡಿದೆ.

**ಸಾಕ್ಷಿಗೂ ಅಂತಃಕರಣಕ್ಕೂ ಅಧ್ಯಾಸ -** ಒಂದರಲ್ಲೊಂದನ್ನು ಅಧ್ಯಾಸ ಮಾಡುತ್ತಾರೆಂದು ಭಾಷ್ಯ ; ೮. ಸಾಕ್ಷಿಯನ್ನು ಸ್ವರೂಪದಿಂದ ಅಧ್ಯಾಸಮಾಡುವದಿಲ್ಲವೆಂದು ವ್ಯಾಖ್ಯಾನಕಾರರು.

**ಸುಷುಪ್ತಿ -** ಕನಸಿಲ್ಲದ ನಿದ್ರೆ, ೧-೮೫, ೨೫೯, ೨೬೭, ೨೭೦, ೨೯೩, ೪೧೨ ; ೨-೧೪೨, ೨೬೬, ೨೬೭, ೨೭೬, ೩೧೧.

**ಸೂಚನೆ** ಗ್ರಂಥಶರೀರದಲ್ಲಿ ಭಾ. ಭಾ. ಎಂದು ಸಂಖ್ಯೆ ಹಾಕಿರುವದು ಬ್ರಹ್ಮಸೂತ್ರಭಾಷ್ಯ, ಭಗವದ್ಗೀತಾಭಾಷ್ಯ ಪುಸ್ತಕಗಳ ಭಾಷ್ಯಭಾಗಗಳನ್ನು ಪರಾಮರ್ಶಿಸುತ್ತದೆ. ಪಂಚಪಾದಿಕೆಗೆ ಒಂದನೆಯ ವರ್ಣಕ ಪೂರ ಕನ್ನಡ ಅನುವಾದಸಹಿತವಾದ ಪುಸ್ತಕದ ಪುಟಗಳನ್ನು ಕೊಟ್ಟಿದೆ. ಉಳಿದ ವರ್ಣಕಗಳಿಗೆ ಕಾಶಿಯ ಲಾಜರಸ್ ಕಂಪನಿಯ ಗ್ರಂಥದ ಪುಟಗಳನ್ನು ಕೊಟ್ಟಿದೆ. ಭಾಮತೀಗ್ರಂಥಕ್ಕೆ ನಿರ್ಣಯ ಸಾಗರ ಪ್ರೆಸ್‌ನಲ್ಲಿ ಅಚ್ಚಾಗಿರುವ ಸೂತ್ರಭಾಷ್ಯ ಪುಸ್ತಕದ ಪುಟಗಳನ್ನು ಕೊಟ್ಟಿದೆ.

# ಅಧ್ಯಾಸಭಾಷ್ಯಾರ್ಥ ವಿಮರ್ಶೆ



ಶ್ರೀಶ್ರೀಸಚ್ಚಿದಾನಂದೇಂದ್ರ
[illegible]

(೧೮೮೦-೧೯೭೫)

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - ೫೭೩೨೧೧